ಸೂ. 165 — **6. ಅಲ್ ಅನ್‌ಆಮ್** — ರು. 20

اٰيَاتُهَا ١٦٥ — سُوْرَةُ الْاَنْعَامِ مَكِّيَّةٌ — رُكُوْعَاتُهَا ٢٠

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದ, ಪ್ರಕಾಶವನ್ನೂ ಅಂಧಕಾರವನ್ನೂ ಉಂಟುಮಾಡಿದ ಅಲ್ಲಾಹನಿಗೇ ಸರ್ವಸ್ತೋತ್ರಗಳು. ಆದರೂ ಸತ್ಯಾಹ್ವಾನ ಸ್ವೀಕರಿಸಲು ನಿರಾಕರಿಸುವವರು ಇತರರನ್ನು ತಮ್ಮ ಪಾಲಕ ಪ್ರಭುವಿಗೆ ಸರಿಸಮಾನರೆಂದು ನಿಷ್ಕರ್ಷಿಸಿಕೊಂಡಿದ್ದಾರೆ.

اَلْحَمْدُ لِلّٰهِ الَّذِىْ خَلَقَ السَّمٰوٰتِ
وَالْاَرْضَ وَجَعَلَ الظُّلُمٰتِ وَ النُّوْرَ ۬ؕ
ثُمَّ الَّذِيْنَ كَفَرُوْا بِرَبِّهِمْ يَعْدِلُوْنَ ①

2. ಅವನೇ ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದವನು ಮತ್ತು ನಿಮಗಾಗಿ ಜೀವನದ ಒಂದು ಕಾಲಾವಧಿಯನ್ನು ನಿರ್ಣಯಿಸಿದವನು. ನಿರ್ಣಯಿಸಲ್ಪಟ್ಟ ಇನ್ನೊಂದು ಕಾಲಾವಧಿಯೂ ಅವನಲ್ಲಿದೆ.[1] ಆದರೆ ನೀವು ಸಂಶಯಗ್ರಸ್ತರಾಗಿದ್ದೀರಿ.

هُوَ الَّذِىْ خَلَقَكُمْ مِّنْ طِيْنٍ ثُمَّ قَضٰٓى
اَجَلًا ؕ وَاَجَلٌ مُّسَمًّى عِنْدَهٗ ثُمَّ اَنْتُمْ
تَمْتَرُوْنَ ②

3. ಆಕಾಶಗಳಲ್ಲೂ ಭೂಮಿಯಲ್ಲೂ ಅವನೇ ಏಕದೇವನು. ನಿಮ್ಮ ಅಂತರಂಗ ಬಹಿರಂಗಗಳೆಲ್ಲವನ್ನೂ ಅವನು ಅರಿಯುತ್ತಾನೆ. ನೀವು ಸಂಪಾದಿಸುವ ಒಳಿತು ಅಥವಾ ಕೆಡುಕುಗಳನ್ನೂ ಚೆನ್ನಾಗಿ ಅರಿತಿದ್ದಾನೆ.

وَهُوَ اللّٰهُ فِى السَّمٰوٰتِ وَفِى الْاَرْضِ ؕ يَعْلَمُ
سِرَّكُمْ وَجَهْرَكُمْ وَيَعْلَمُ مَا تَكْسِبُوْنَ ③

4. ಅವರ ಮುಂದೆ ಬಂದ ಅವರ ಪ್ರಭುವಿನ ನಿದರ್ಶನಗಳ ಪೈಕಿ ಅವರು ನಿರಾಕರಿಸದ ಯಾವ ನಿದರ್ಶನವೂ ಇಲ್ಲ.

وَمَا تَاْتِيْهِمْ مِّنْ اٰيَةٍ مِّنْ اٰيٰتِ رَبِّهِمْ
اِلَّا كَانُوْا عَنْهَا مُعْرِضِيْنَ ④

5. ಅದೇ ಪ್ರಕಾರ ಈಗ ಅವರ ಬಳಿಗೆ ಬಂದಿರುವ ಸತ್ಯವನ್ನೂ ಅವರು ತಿರಸ್ಕರಿಸಿಬಿಟ್ಟರು. ಅವರು ಇಷ್ಟರ ತನಕ ಅಪಹಾಸ್ಯ ಮಾಡಿಕೊಂಡಿದ್ದ ವಿಷಯದ ಬಗ್ಗೆ ಕೆಲವು ಸುದ್ದಿಗಳು ಸದ್ಯದಲ್ಲೇ ಅವರಿಗೆ ಸಿಗಲಿವೆ.[2]

فَقَدْ كَذَّبُوْا بِالْحَقِّ لَمَّا جَآءَهُمْ ؕ فَسَوْفَ
يَاْتِيْهِمْ اَنْۢبٰٓؤُا مَا كَانُوْا بِهٖ يَسْتَهْزِءُوْنَ ⑤

1. ಅರ್ಥಾತ್- ಹಿಂದೆ ಗತಿಸಿದ ಮತ್ತು ಮುಂದೆ ಬರಲಿರುವ ಮಾನವರೆಲ್ಲರೂ ಜೀವಂತಗೊಳಿಸಲ್ಪಟ್ಟು ಲೆಕ್ಕ ಸಮರ್ಪಣೆಗಾಗಿ ತಮ್ಮ ಪ್ರಭುವಿನ ಮುಂದೆ ಹಾಜರಾಗುವ ನಿರ್ಣಾಯಕ ದಿನದ ಆ ಘಳಿಗೆ.

أَلَمْ يَرَوْا كَمْ أَهْلَكْنَا مِن قَبْلِهِم مِّن
قَرْنٍ مَّكَّنَّاهُمْ فِي الْأَرْضِ مَا لَمْ نُمَكِّن
لَّكُمْ وَأَرْسَلْنَا السَّمَاءَ عَلَيْهِم مِّدْرَارًا
وَجَعَلْنَا الْأَنْهَارَ تَجْرِي مِن تَحْتِهِمْ
فَأَهْلَكْنَاهُم بِذُنُوبِهِمْ وَأَنشَأْنَا مِن
بَعْدِهِمْ قَرْنًا آخَرِينَ ⑥

6. ಇವರಿಗಿಂತ ಮುಂಚೆ ತಮ್ಮ ಕಾಲದಲ್ಲಿ ಪ್ರಬಲರಾಗಿ ಮೆರೆಯುತ್ತಿದ್ದ ಎಷ್ಟೋ ಜನಾಂಗಗಳನ್ನು ನಾವು ನಾಶಗೊಳಿಸಿದ್ದೇವೆಂಬುದನ್ನು ಇವರು ಕಂಡಿಲ್ಲವೇ? ನಾವು ನಿಮಗೆ ನೀಡಿಲ್ಲದ ಅಧಿಕಾರಗಳನ್ನು ಅವರಿಗೆ ದಯಪಾಲಿಸಿದ್ದೆವು. ಅವರ ಮೇಲೆ ಆಕಾಶದಿಂದ ಧಾರಾಳವಾಗಿ ಮಳೆ ಸುರಿಸಿದೆವು ಮತ್ತು ಅವರ ಕೆಳಗೆ ನದಿಗಳನ್ನು ಹರಿಸಿದೆವು. (ಆದರೆ ಅವರು ಕೃತಘ್ನರಾದಾಗ) ಕೊನೆಗೆ ನಾವು ಅವರ ಪಾಪಗಳ ಫಲವಾಗಿ ಅವರನ್ನು ನಾಶಪಡಿಸಿ ಅವರ ಸ್ಥಾನದಲ್ಲಿ ಬೇರೆ ಯುಗದ ಜನಾಂಗಗಳನ್ನು ಎಬ್ಬಿಸಿದೆವು.

وَلَوْ نَزَّلْنَا عَلَيْكَ كِتَابًا فِي قِرْطَاسٍ
فَلَمَسُوهُ بِأَيْدِيهِمْ لَقَالَ الَّذِينَ كَفَرُوا
إِنْ هَٰذَا إِلَّا سِحْرٌ مُّبِينٌ ⑦

7. ಓ ಪೈಗಂಬರರೇ, ನಾವು ನಿಮ್ಮ ಮೇಲೆ ಕಾಗದದಲ್ಲಿ ಬರೆದ ಒಂದು ಗ್ರಂಥವನ್ನು ಅವತೀರ್ಣಗೊಳಿಸುತ್ತಿದ್ದರೆ ಮತ್ತು ಜನರು ಅದನ್ನು ಕೈಗಳಿಂದ ಮುಟ್ಟಿಯೂ ನೋಡಿ ಕೊಳ್ಳುತ್ತಿದ್ದರೆ ಆಗಲೂ ಸತ್ಯನಿಷೇಧಿಗಳು, ಇದು ವ್ಯಕ್ತವಾದ ಮಾಟವಲ್ಲದೆ ಇನ್ನೇನೂ ಅಲ್ಲವೆಂದೇ ಹೇಳುತ್ತಿದ್ದರು.

وَقَالُوا لَوْلَا أُنزِلَ عَلَيْهِ مَلَكٌ ۖ وَلَوْ
أَنزَلْنَا مَلَكًا لَّقُضِيَ الْأَمْرُ ثُمَّ
لَا يُنظَرُونَ ⑧

8. ಈ ಪ್ರವಾದಿಯ ಮೇಲೆ ಒಬ್ಬ 'ದೇವಚರ' ಏಕೆ ಇಳಿಸಲ್ಪಡಲಿಲ್ಲವೆಂದು ಇವರು ಕೇಳುತ್ತಾರೆ.[3] ನಾವು ದೇವಚರನನ್ನು ಇಳಿಸುತ್ತಿದ್ದರೆ, ಇಷ್ಟರೊಳಗೆ ಎಂದೋ ತೀರ್ಮಾನವೇ ಆಗಿಬಿಡುತ್ತಿತ್ತು. ಅನಂತರ ಇವರಿಗೆ ಅವಧಿ ಕೊಡಲಾಗುತ್ತಿರಲಿಲ್ಲ.

وَلَوْ جَعَلْنَاهُ مَلَكًا لَّجَعَلْنَاهُ رَجُلًا وَلَلَبَسْنَا
عَلَيْهِم مَّا يَلْبِسُونَ ⑨

9. ಒಂದು ವೇಳೆ ನಾವು ದೇವಚರನನ್ನು ಇಳಿಸುತ್ತಿದ್ದರೂ ಅವನನ್ನು ಮಾನವರೂಪದಲ್ಲೇ ಇಳಿಸುತ್ತಿದ್ದೆವು. ಹೀಗೆ ಇವರನ್ನು ಈಗ ಇವರು ಸಿಲುಕಿಬಿದ್ದಿರುವ ಸಂಶಯದಲ್ಲೇ ಸಿಲುಕಿಸಿಬಿಡುತ್ತಿದ್ದೆವು.

وَلَقَدِ اسْتُهْزِئَ بِرُسُلٍ مِّن قَبْلِكَ فَحَاقَ
بِالَّذِينَ سَخِرُوا مِنْهُم مَّا كَانُوا بِهِ يَسْتَهْزِئُونَ ⑩ ع

10. (ಓ ಪೈಗಂಬರರೇ,) ನಿಮಗಿಂತ ಮುಂಚೆಯೂ ಅನೇಕ ಮಂದಿ ಸಂದೇಶವಾಹಕರು ಅಪಹಾಸ್ಯಗೊಳಿಸಲ್ಪಟ್ಟಿದ್ದಾರೆ. ಆದರೆ, ಕೊನೆಗೆ ಅವರು ಅಪಹಾಸ್ಯ ಮಾಡುತ್ತಿದ್ದ ವಾಸ್ತವಿಕತೆಯೇ ಅವರ ಮೇಲೆ ಬಂದೆರಗಿತು.

2. ಇದು ಮದೀನಾ ವಲಸೆ ಮತ್ತು ಅದರ ನಂತರ ಇಸ್ಲಾಮಿಗೆ ಹಂತಹಂತವಾಗಿ ದೊರೆಯಲಿದ್ದ ವಿಜಯಗಳ ಕಡೆಗಿರುವ ಸೂಚನೆ. ಈ ಸೂಚನೆಯನ್ನು ನೀಡಲಾದಾಗ ಯಾವ ರೀತಿಯ ಸುದ್ದಿಗಳು ತಮಗೆ ತಲಪಲಿವೆ ಎಂದು ಸತ್ಯನಿಷೇಧಿಗಳು ಊಹಿಸುವಂತಿರಲಿಲ್ಲ. ಅಂತೆಯೇ ಮುಸ್ಲಿಮರ ಮನಸ್ಸಿನಲ್ಲೂ ಅದರ ಬಗ್ಗೆ ಯಾವುದೇ ಕಲ್ಪನೆಯಿರಲಿಲ್ಲ.

3. ಅರ್ಥಾತ್- ಇವರನ್ನು ಪ್ರವಾದಿಯನ್ನಾಗಿ ಮಾಡಿ ಅಲ್ಲಾಹನ ವತಿಯಿಂದ ಕಳುಹಿಸಲಾಗಿರುವಾಗ ಆಕಾಶದಿಂದ ಒಂದು ದೇವಚರನೂ ಇಳಿಯಬೇಕಾಗಿತ್ತು. ಅದು ಜನರೊಡನೆ "ನೋಡಿ! ಇವರು ದೇವನ ಪ್ರವಾದಿ ಇವರ ಮಾತು ಕೇಳದಿದ್ದರೆ ನಿಮ್ಮನ್ನು ಶಿಕ್ಷಿಸಲಾಗುವುದು" ಎಂದು ಹೇಳಬೇಕಾಗಿತ್ತು.

11. ನೀವು ಭೂಮಿಯ ಮೇಲೆ ಸಂಚರಿಸಿ ಸುಳ್ಳಾಗಿಸುವವರ ಪರಿಣಾಮವೇನಾಯಿತೆಂಬುದನ್ನು ಕಣ್ಣಾರೆ ನೋಡಿಕೊಳ್ಳಿರೆಂದು ಇವರೊಡನೆ ಹೇಳಿರಿ.

قُلْ سِيْرُوْا فِي الْاَرْضِ ثُمَّ انْظُرُوْا كَيْفَ كَانَ عَاقِبَةُ الْمُكَذِّبِيْنَ ⑪

12. ಭೂಮಿ-ಆಕಾಶಗಳಲ್ಲಿರುವುದೆಲ್ಲ ಯಾರದೆಂದು ಇವರೊಡನೆ ಕೇಳಿರಿ. ಎಲ್ಲವೂ ಅಲ್ಲಾಹನದೇ ಎಂದು ಹೇಳಿರಿ. ಅವನು ತನ್ನನ್ನು ಕೃಪಾಕಾರುಣ್ಯಗಳಿಗೆ ಬದ್ಧನಾಗಿ ಮಾಡಿಕೊಂಡಿದ್ದಾನೆ. (ಆದುದರಿಂದಲೇ ಅವನು ನಿಮ್ಮ ಆಜ್ಞೋಲ್ಲಂಘನೆ ಮತ್ತು ಉದ್ಧಟತನಗಳಿಗಾಗಿ ನಿಮ್ಮನ್ನು ಬೇಗನೆ ಹಿಡಿಯುವುದಿಲ್ಲ) ಅವನು ಪುನರುತ್ಥಾನ ದಿನದಂದು ನಿಮ್ಮೆಲ್ಲರನ್ನೂ ಖಂಡಿತವಾಗಿಯೂ ಒಟ್ಟುಗೂಡಿಸುವನು. ಇದು ನಿಸ್ಸಂದೇಹವಾದ ವಾಸ್ತವಿಕತೆ. ಆದರೆ, ತಮ್ಮನ್ನು ತಾವೇ ವಿನಾಶದ ಅಪಾಯಕ್ಕೆ ಸಿಲುಕಿಸಿ ಕೊಂಡವರು ಇದನ್ನು ಒಪ್ಪುವುದಿಲ್ಲ.

قُلْ لِّمَنْ مَّا فِي السَّمٰوٰتِ وَالْاَرْضِ ۭ قُلْ لِّلّٰهِ ۭ كَتَبَ عَلٰي نَفْسِهِ الرَّحْمَةَ ۭ لَيَجْمَعَنَّكُمْ اِلٰي يَوْمِ الْقِيٰمَةِ لَا رَيْبَ فِيْهِ ۭ اَلَّذِيْنَ خَسِرُوْٓا اَنْفُسَهُمْ فَهُمْ لَا يُؤْمِنُوْنَ ⑫

13. ಇರುಳಿನ ಅಂಧಕಾರದಲ್ಲಿಯೂ ಹಗಲಿನ ಪ್ರಕಾಶದಲ್ಲಿಯೂ ಇರುವುದೆಲ್ಲವೂ ಅಲ್ಲಾಹನದೇ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَلَهٗ مَا سَكَنَ فِي الَّيْلِ وَالنَّهَارِ ۭ وَهُوَ السَّمِيْعُ الْعَلِيْمُ ⑬

14. ನಾನು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ನನ್ನ ಸಂರಕ್ಷಕನಾಗಿ ಮಾಡಿಕೊಳ್ಳಬೇಕೇ? ಅವನಾದರೋ ಭೂಮಿ-ಆಕಾಶಗಳ ಕರ್ತೃ. ಅವನು ಉಣಿಸುವವನು, ಉಣ್ಣುವವನಲ್ಲ. ಹೇಳಿರಿ- ನನಗಂತು ಮೊತ್ತ ಮೊದಲು ಅವನ ಮುಂದೆ ಶರಣಾಗತನಾಗುವ ಆಜ್ಞೆಯನ್ನೇ ನೀಡಲಾಗಿದೆ. (ಮತ್ತು ಇನ್ನಾರಾದರೂ 'ದೇವಸಹಬಾಗಿತ್ವ' ಮಾಡಿದರೆ ಮಾಡಲಿ) ನೀನು ಎಷ್ಟು ಮಾತ್ರಕ್ಕೂ 'ಅಲ್ಲಾಹನೊಂದಿಗೆ ಸಹಭಾಗಿ'ಯನ್ನಾಗಿ ಮಾಡುವವರಲ್ಲಾಗಬಾರದು (ಎಂದು ನನಗೆ ತಾಕೀತು ಮಾಡಲಾಗಿದೆ.)

قُلْ اَغَيْرَ اللّٰهِ اَتَّخِذُ وَلِيًّا فَاطِرِ السَّمٰوٰتِ وَالْاَرْضِ وَهُوَ يُطْعِمُ وَلَا يُطْعَمُ ۭ قُلْ اِنِّىْٓ اُمِرْتُ اَنْ اَكُوْنَ اَوَّلَ مَنْ اَسْلَمَ وَلَا تَكُوْنَنَّ مِنَ الْمُشْرِكِيْنَ ⑭

15. ಹೇಳಿರಿ- ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ಒಂದು ಮಹಾ (ಭಯಾನಕ) ದಿನ ನಾನು ಶಿಕ್ಷೆ ಅನುಭವಿಸ ಬೇಕಾದೀತೆಂದು ಭಯಪಡುತ್ತೇನೆ.

قُلْ اِنِّىْٓ اَخَافُ اِنْ عَصَيْتُ رَبِّيْ عَذَابَ يَوْمٍ عَظِيْمٍ ⑮

16. ಅಂದು ಶಿಕ್ಷೆಯಿಂದ ಪಾರಾದವನ ಮೇಲೆ ಅಲ್ಲಾಹನು ಮಹಾಕೃಪೆಗೈದನು. ಇದುವೇ ಸುಸ್ಪಷ್ಟ ವಿಜಯವಾಗಿರುತ್ತದೆ.

مَنْ يُّصْرَفْ عَنْهُ يَوْمَىِٕذٍ فَقَدْ رَحِمَهٗ ۭ وَذٰلِكَ الْفَوْزُ الْمُبِيْنُ ⑯

17. ಅಲ್ಲಾಹನು ನಿಮಗೆ ಯಾವುದೇ ರೀತಿಯ ಕೇಡನ್ನುಂಟು

وَاِنْ يَّمْسَسْكَ اللّٰهُ بِضُرٍّ فَلَا كَاشِفَ

لَهٗٓ اِلَّا هُوَ ۚ وَاِنْ يَّمْسَسْكَ بِخَيْرٍ فَهُوَ
عَلٰى كُلِّ شَیْءٍ قَدِيْرٌ ﴿۱۷﴾

ಮಾಡಿದರೆ, ಅವನ ಹೊರತು ನಿಮ್ಮನ್ನು ಆ ಕೇಡಿನಿಂದ ರಕ್ಷಿಸುವವರು ಯಾರೂ ಇಲ್ಲ. ಅವನು ನಿಮಗೆ ಒಳಿತನ್ನುಂಟು ಮಾಡಿದರೆ, ಅವನು ಸಕಲ ಕಾರ್ಯಗಳಿಗೆ ಸಮರ್ಥನು.

وَهُوَ الْقَاهِرُ فَوْقَ عِبَادِهٖ ؕ وَهُوَ الْحَكِيْمُ الْخَبِيْرُ ﴿۱۸﴾

18. ಅವನು ತನ್ನ ದಾಸರ ಮೇಲೆ ಸಂಪೂರ್ಣ ಅಧಿಕಾರವುಳ್ಳವನು ಮತ್ತು ಧೀಮಂತನೂ ಸೂಕ್ಷ್ಮಜ್ಞನೂ ಆಗಿರುತ್ತಾನೆ.

قُلْ اَیُّ شَیْءٍ اَكْبَرُ شَهَادَةً ؕ قُلِ اللّٰهُ ۙ
شَهِيْدٌۢ بَيْنِیْ وَبَيْنَكُمْ ۚ وَاُوْحِیَ اِلَیَّ هٰذَا
الْقُرْاٰنُ لِاُنْذِرَكُمْ بِهٖ وَمَنْۢ بَلَغَ ؕ اَئِنَّكُمْ
لَتَشْهَدُوْنَ اَنَّ مَعَ اللّٰهِ اٰلِهَةً اُخْرٰی ؕ قُلْ
لَّاۤ اَشْهَدُ ۚ قُلْ اِنَّمَا هُوَ اِلٰهٌ وَّاحِدٌ وَّاِنَّنِیْ
بَرِیْٓءٌ مِّمَّا تُشْرِكُوْنَ ﴿۱۹﴾

19. ಯಾರ ಸಾಕ್ಷ್ಯವು ಎಲ್ಲಕ್ಕಿಂತಲೂ ಶ್ರೇಷ್ಠವಾಗಿದೆ ಎಂದು ಇವರೊಡನೆ ಕೇಳಿರಿ- ನನ್ನ ಮತ್ತು ನಿಮ್ಮ ನಡುವೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ ಮತ್ತು ಈ ಕುರ್‌ಆನ್ ನಿಮಗೂ ಇನ್ನು ಇದು ಯಾರಿಗೆಲ್ಲ ತಲುಪುವುದೋ ಅವರೆಲ್ಲರಿಗೂ ಎಚ್ಚರಿಕೆ ನೀಡಲಿಕ್ಕಾಗಿ ನನ್ನ ಕಡೆಗೆ 'ದಿವ್ಯವಾಣಿ' ಮೂಲಕ ಕಳುಹಿಸಲ್ಪಟ್ಟಿದೆ- ಎಂದು ಹೇಳಿರಿ. ಅಲ್ಲಾಹನೊಂದಿಗೆ ಇತರ ಆರಾಧ್ಯರೂ ಇರುವರೆಂದು ನಿಜಕ್ಕೂ ನೀವು ಸಾಕ್ಷ್ಯ ನೀಡಬಲ್ಲಿರಾ?[4] ನಾನಂತು ಎಷ್ಟು ಮಾತ್ರಕ್ಕೂ ಹಾಗೆ ಸಾಕ್ಷ್ಯ ನೀಡಲಾರೆನೆಂದು ಹೇಳಿರಿ. ನಿಶ್ಚಯವಾಗಿಯೂ ಅವನು ಏಕಮಾತ್ರ ಆರಾಧ್ಯನು ಮತ್ತು ನೀವು ಸಿಕ್ಕಿಬಿದ್ದಿರುವ 'ದೇವಸಹಭಾಗಿತ್ವ'ದಿಂದ ನಾನು ತೀರಾ ಮುಕ್ತನಾಗಿದ್ದೇನೆಂದು ಹೇಳಿರಿ.

اَلَّذِيْنَ اٰتَيْنٰهُمُ الْكِتٰبَ يَعْرِفُوْنَهٗ كَمَا
يَعْرِفُوْنَ اَبْنَآءَهُمْ ۘ اَلَّذِيْنَ خَسِرُوْۤا اَنْفُسَهُمْ
فَهُمْ لَا يُؤْمِنُوْنَ ﴿۲۰﴾

20. ನಾವು ಯಾರಿಗೆ ಗ್ರಂಥ ದಯಪಾಲಿಸಿರುವೆವೋ ಅವರು ತಮ್ಮ ಪುತ್ರರನ್ನು ಗುರುತಿಸುವಂತೆಯೇ ಇದನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಆದರೆ ತಮ್ಮನ್ನು ತಾವೇ ನಷ್ಟಕ್ಕೊಳಪಡಿಸಿ ಕೊಂಡವರು ಇದನ್ನು ಒಪ್ಪುವುದಿಲ್ಲ.

وَمَنْ اَظْلَمُ مِمَّنِ افْتَرٰی عَلَی اللّٰهِ كَذِبًا
اَوْ كَذَّبَ بِاٰيٰتِهٖ ؕ اِنَّهٗ لَا يُفْلِحُ الظّٰلِمُوْنَ ﴿۲۱﴾

21. ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವನಿಗಿಂತ ಅಥವಾ ಅಲ್ಲಾಹನ ನಿದರ್ಶನಗಳನ್ನು ಸುಳ್ಳಾಗಿಸುವವನಿಗಿಂತ ಹಿರಿಯ ಅಕ್ರಮಿ ಇನ್ನಾರಿರಬಹುದು? ನಿಶ್ಚಯವಾಗಿಯೂ ಇಂತಹ ಅಕ್ರಮಿಗಳು ಎಂದೆಂದಿಗೂ ಯಶಸ್ಸು ಹೊಂದಲಾರರು.

وَيَوْمَ نَحْشُرُهُمْ جَمِيْعًا ثُمَّ نَقُوْلُ لِلَّذِيْنَ
اَشْرَكُوْۤا اَيْنَ شُرَكَآؤُكُمُ الَّذِيْنَ

22. ನಾವು ಇವರನ್ನೆಲ್ಲ ಒಟ್ಟುಗೂಡಿಸುವಂದು 'ಬಹುದೇವವಿಶ್ವಾಸಿ' ಗಳೊಡನೆ, "ನೀವು ನಿಮ್ಮ ದೇವರೆಂದು ತಿಳಿದು ವೃಥಾ

4. ಕೇವಲ ಕಲ್ಪನೆ ಅಥವಾ ಭ್ರಮೆಯ ಆಧಾರದಲ್ಲಿ ಯಾವುದರ ಬಗೆಗೂ ಸಾಕ್ಷ್ಯವಹಿಸಲು ಸಾಧ್ಯವಿಲ್ಲ. ಅದಕ್ಕಾಗಿ ವ್ಯಕ್ತಿ ಸಂಪೂರ್ಣ ವಿಶ್ವಾಸದೊಂದಿಗೆ 'ಇದು ಹೀಗಿದೆ' ಎಂದು ಹೇಳ ಬಲ್ಲಂತಹ ನಿಖರವಾದ ಜ್ಞಾನದ ಅಗತ್ಯವಿದೆ. ಒಟ್ಟಿನಲ್ಲಿ ಈ ಪ್ರಶ್ನೆಯ ಅರ್ಥ ಈ ಅನಂತ ವಿಶ್ವಕ್ಕೆ ದೇವನ ಹೊರತು ದಾಸ್ಯ ಮತ್ತು ಪೂಜೆಗೆ ಅರ್ಹವಾದಂತಹ ಪರಮಾಧಿಕಾರವುಳ್ಳ ಪ್ರಭು ಬೇರೊಬ್ಬನಿದ್ದಾನೆಯೇ? ಎಂದಾಗಿದೆ.

ಅಭಿಮಾನ ಪಡುತ್ತಿದ್ದ ಸಹಭಾಗಿಗಳು ಈಗ ಎಲ್ಲಿದ್ದಾರೆ? ಎಂದು ಕೇಳುವೆವು.

كُنتُمْ تَزْعُمُونَ ٢٢

23. ಆಗ ಅವರು, "ಓ ನಮ್ಮ ಪ್ರಭೂ, ನಿನ್ನಾಣೆ ನಾವು 'ಬಹುದೇವ ವಿಶ್ವಾಸಿ'ಗಳಲ್ಲಾಗಿರಲಿಲ್ಲ" ಎಂಬ (ಸುಳ್ಳು ಹೇಳಿಕೆ ಕೊಡುವ) ಹೊರತು ಇನ್ನಾವ ಕುತಂತ್ರವನ್ನೂ ಹೂಡಲಾರರು.

ثُمَّ لَمْ تَكُن فِتْنَتُهُمْ إِلَّا أَن قَالُوا وَاللَّهِ
رَبِّنَا مَا كُنَّا مُشْرِكِينَ ٢٣

24. ಆಗ ಅವರು ತಾವೇ ತಮ್ಮ ಮೇಲೆ ಹೇಗೆ ಸುಳ್ಳನ್ನು ಸೃಷ್ಟಿಸಿಕೊಳ್ಳುವರೆಂದು ನೋಡಿರಿ. ಅಲ್ಲಿ ಅವರ ಕೃತಕ ದೇವರುಗಳೆಲ್ಲ ಕಳೆದು ಹೋಗುವರು.

انظُرْ كَيْفَ كَذَبُوا عَلَىٰ أَنفُسِهِمْ ۚ وَضَلَّ
عَنْهُم مَّا كَانُوا يَفْتَرُونَ ٢٤

25. ಅವರಲ್ಲಿ ಕೆಲವರು ನಿಮ್ಮ ಮಾತನ್ನು ಕಿವಿಗೊಟ್ಟು ಕೇಳುವವರೂ ಇದ್ದಾರೆ. ಆದರೆ, ನಾವು ಅವರ ಹೃದಯಗಳ ಮೇಲೆ ತೆರೆ ಎಳೆದು ಬಿಟ್ಟಿದ್ದೇವೆ. ಇದರಿಂದಾಗಿ ಅವರು ಅದನ್ನು ಸ್ವಲ್ಪವೂ ಗ್ರಹಿಸುವುದಿಲ್ಲ ಮತ್ತು (ಎಲ್ಲವನ್ನೂ ಕೇಳಿದರೂ ಏನೂ ಕೇಳದಂತೆ) ಅವರ ಕಿವಿಗಳಲ್ಲಿ ತಡೆ ಇಟ್ಟಿದ್ದೇವೆ. ಅವರು ಯಾವ ನಿದರ್ಶನವನ್ನೇ ಕಂಡರೂ ಅದರ ಮೇಲೆ ವಿಶ್ವಾಸವಿಡಲಾರರು. ಎಲ್ಲಿಯವರೆಗೆಂದರೆ, ಅವರು ನಿಮ್ಮ ಬಳಿಗೆ ಬಂದು ನಿಮ್ಮೊಡನೆ ಜಗಳಾಡುವಾಗ ಅವರ ಪೈಕಿ ನಿರಾಕರಣೆಯ ನಿರ್ಧಾರವನ್ನೇ ಕೈಗೊಂಡವರು (ಎಲ್ಲವನ್ನೂ ಕೇಳಿದ ಬಳಿಕ) ಇದೊಂದು ಹಳೇ ಕಾಲದ ಕಟ್ಟುಕತೆಯೇ ವಿನಾ ಇನ್ನೇನೂ ಅಲ್ಲವೆಂದು ಹೇಳುತ್ತಾರೆ.

وَمِنْهُم مَّن يَسْتَمِعُ إِلَيْكَ ۖ وَجَعَلْنَا عَلَىٰ
قُلُوبِهِمْ أَكِنَّةً أَن يَفْقَهُوهُ وَفِي آذَانِهِمْ
وَقْرًا ۚ وَإِن يَرَوْا كُلَّ آيَةٍ لَّا يُؤْمِنُوا
بِهَا ۚ حَتَّىٰ إِذَا جَاءُوكَ يُجَادِلُونَكَ يَقُولُ
الَّذِينَ كَفَرُوا إِنْ هَٰذَا إِلَّا أَسَاطِيرُ الْأَوَّلِينَ ٢٥

26. ಅವರು ಈ ಸತ್ಯ ಸಂಗತಿಯನ್ನು ಸ್ವೀಕರಿಸದಂತೆ ಜನರನ್ನು ತಡೆಯುತ್ತಾರೆ ಮತ್ತು ಸ್ವತಃ ತಾವೂ ಇದರಿಂದ ದೂರ ಓಡುತ್ತಾರೆ. (ಈ ವರ್ತನೆಯ ಮೂಲಕ ನಿಮಗೆ ನಷ್ಟವನ್ನುಂಟು ಮಾಡುತ್ತಿದ್ದೇವೆಂದು ಅವರು ತಿಳಿದುಕೊಂಡಿದ್ದಾರೆ.) ವಸ್ತುತಃ ಅವರು ತಮ್ಮನ್ನು ತಾವೇ ವಿನಾಶಕ್ಕೊಳಪಡಿಸಿಕೊಳ್ಳುವ ಕಾರ್ಯ ಮಾಡುತ್ತಿದ್ದಾರೆ. ಆದರೆ ಅವರಿಗೆ ಅದರ ಬೋಧವಿಲ್ಲ.

وَهُمْ يَنْهَوْنَ عَنْهُ وَيَنْأَوْنَ عَنْهُ ۖ وَإِن
يُهْلِكُونَ إِلَّا أَنفُسَهُمْ وَمَا يَشْعُرُونَ ٢٦

27. ಅಕಟ! ಅವರು ನರಕಾಗ್ನಿಯ ಕಿನಾರೆಯಲ್ಲಿ ನಿಲ್ಲಿಸಲ್ಪಡುವಾಗಿನ ಅವರ ಅವಸ್ಥೆಯನ್ನು ನೋಡಲು ನಿಮಗೆ ಸಾಧ್ಯವಾಗುತ್ತಿದ್ದರೆ! ಆಗ ಅವರು, "ಅಕಟ! ನಾವು ಭೂಲೋಕಕ್ಕೆ ಪುನಃ ಮರಳಿಸಲ್ಪಟ್ಟು ನಮ್ಮ ಪ್ರಭುವಿನ ನಿದರ್ಶನಗಳನ್ನು ಸುಳ್ಳಾಗಿಸದೆ, ವಿಶ್ವಾಸವಿರಿಸಿಕೊಂಡವರಲ್ಲಿ ಸೇರುವಂಥ ದಾರಿಯೇನಾದರೂ ನಮಗೆ ಸಿಗುತ್ತಿದ್ದರೆ!" ಎಂದು ಹೇಳುವರು.

وَلَوْ تَرَىٰ إِذْ وُقِفُوا عَلَى النَّارِ فَقَالُوا
يَا لَيْتَنَا نُرَدُّ وَلَا نُكَذِّبَ بِآيَاتِ رَبِّنَا
وَنَكُونَ مِنَ الْمُؤْمِنِينَ ٢٧

28. ವಾಸ್ತವದಲ್ಲಿ ಅವರು ಮರೆ ಮಾಡಿದ್ದ ನಿಜಸ್ಥಿತಿಯು ಆಗ ಅವರ ಮುಂದೆ ಪ್ರತ್ಯಕ್ಷವಾಗಿ ಬಿಟ್ಟ ಕಾರಣದಿಂದ ಮಾತ್ರ ಅವರು ಹೀಗೆ ಹೇಳುವರು. ಅನ್ಯಥಾ ಅವರನ್ನು ಗತ ಜೀವನದ ಕಡೆಗೆ ಹಿಂದಿರುಗಿಸಿದರೆ ಅವರಿಗೆ ಮಾಡಬಾರದೆಂದು ವಿಧಿಸಲಾಗಿದ್ದೆಲ್ಲ ವನ್ನೂ ಅವರು ಪುನಃ ಮಾಡುವರು. ಅವರಂತೂ ಸುಳ್ಳುಗಾರರೇ ಆಗಿದ್ದಾರೆ.

بَلْ بَدَا لَهُمْ مَّا كَانُوا يُخْفُونَ مِن قَبْلُ ۖ
وَلَوْ رُدُّوا لَعَادُوا لِمَا نُهُوا عَنْهُ وَإِنَّهُمْ لَكَاذِبُونَ ﴿٢٨﴾

29. (ಆದುದರಿಂದ ತಮ್ಮ ಇಚ್ಛೆಯನ್ನು ಪ್ರಕಟಪಡಿಸುತ್ತಿರುವಾಗಲೂ ಸುಳ್ಳನ್ನೇ ಆಡುವರು.) ಜೀವನವೇನಿದ್ದರೂ ಕೇವಲ ನಮ್ಮ ಈ ಇಹಲೋಕದ ಜೀವನ ಮಾತ್ರ. ನಾವು ಮರಣಾನಂತರ ಎಷ್ಟು ಮಾತ್ರಕ್ಕೂ ಪುನಃ ಎಬ್ಬಿಸಲ್ಪಡಲಾರೆವೆಂದು ಇಂದು ಇವರು ಹೇಳುತ್ತಾರೆ.

وَقَالُوا إِنْ هِيَ إِلَّا حَيَاتُنَا الدُّنْيَا وَمَا
نَحْنُ بِمَبْعُوثِينَ ﴿٢٩﴾

30. ಇವರು ತಮ್ಮ ಪ್ರಭುವಿನ ಮುಂದೆ ನಿಲ್ಲಿಸಲ್ಪಡುವ ಆ ದೃಶ್ಯವನ್ನು ನೋಡಲು ನಿಮ್ಮಿಂದ ಸಾಧ್ಯವಾಗುತ್ತಿದ್ದರೆ! ಆಗ ಇವರ ಪ್ರಭು ಇವರೊಡನೆ, "ಇದು ನಿಜಸ್ಥಿತಿಯಲ್ಲವೇ?" ಎಂದು ಕೇಳುವನು, "ಹೌದು ನಮ್ಮ ಪ್ರಭೂ, ಇದು ನಿಜಸ್ಥಿತಿಯೇ" ಎಂದು ಅವರು ಹೇಳುವರು. ಅವನು, "ಸರಿ ಹಾಗಾದರೆ ಈಗ ನೀವು ನಿಜಸ್ಥಿತಿಯ ನಿರಾಕರಣೆಯ ಫಲವಾಗಿ ಯಾತನೆಯ ಸವಿಯನ್ನುಣ್ಣಿರಿ" ಎನ್ನುವನು.

وَلَوْ تَرَىٰ إِذْ وُقِفُوا عَلَىٰ رَبِّهِمْ ۚ قَالَ أَلَيْسَ
هَٰذَا بِالْحَقِّ ۚ قَالُوا بَلَىٰ وَرَبِّنَا ۚ قَالَ
فَذُوقُوا الْعَذَابَ بِمَا كُنتُمْ تَكْفُرُونَ ﴿٣٠﴾ ع

31. ಅಲ್ಲಾಹನನ್ನು ಭೇಟಿಯಾಗಲಿಕ್ಕಿರುವುದನ್ನು ಸುಳ್ಳಾಗಿಸುವವರು ನಷ್ಟಹೊಂದಿದರು. ಆ ಘಳಿಗೆಯು ಹಠಾತ್ತನೆ ಬಂದು ಬಿಡುವಾಗ, "ಅಯ್ಯೋ, ಈ ವಿಷಯದಲ್ಲಿ ನಮ್ಮಿಂದ ಎಂತಹ ಪ್ರಮಾದ ವಾಯಿತು" ಎಂದು ಇವರೇ ಹೇಳುವರು. ಇವರು ತಮ್ಮ ಬೆನ್ನ ಮೇಲೆ ಪಾಪಗಳ ಮೂಟೆಯನ್ನು ಹೇರಿಕೊಂಡ ಸ್ಥಿತಿಯಲ್ಲಿರುವರು. ನೋಡಿರಿ, ಎಷ್ಟು ನಿಕೃಷ್ಟ ಹೊರೆಯನ್ನು ಇವರು ಹೊತ್ತಿರುವರು!

قَدْ خَسِرَ الَّذِينَ كَذَّبُوا بِلِقَاءِ اللَّهِ ۖ حَتَّىٰ
إِذَا جَاءَتْهُمُ السَّاعَةُ بَغْتَةً قَالُوا يَا حَسْرَتَنَا
عَلَىٰ مَا فَرَّطْنَا فِيهَا وَهُمْ يَحْمِلُونَ
أَوْزَارَهُمْ عَلَىٰ ظُهُورِهِمْ ۚ أَلَا سَاءَ مَا يَزِرُونَ ﴿٣١﴾

32. ಇಹಲೋಕದ ಜೀವನವಂತು ಒಂದು ಆಟ ಮತ್ತು ವಿನೋದ ವಾಗಿದೆ.[5] ವಾಸ್ತವದಲ್ಲಿ ನಷ್ಟದಿಂದ ಪಾರಾಗಲು ಬಯಸುವವರಿಗೆ ಪರಲೋಕದ ವಾಸಸ್ಥಾನವೇ ಲೇಸು. ಇನ್ನೇನು ನೀವು ವಿಚಾರ ಮಾಡುವುದಿಲ್ಲವೇ?

وَمَا الْحَيَاةُ الدُّنْيَا إِلَّا لَعِبٌ وَلَهْوٌ ۖ وَلَلدَّارُ
الْآخِرَةُ خَيْرٌ لِّلَّذِينَ يَتَّقُونَ ۗ أَفَلَا تَعْقِلُونَ ﴿٣٢﴾

5. ಲೌಕಿಕ ಜೀವನಕ್ಕೆ ಯಾವುದೇ ಗಾಂಭೀರ್ಯವಿಲ್ಲ. ಅದನ್ನು ಕೇವಲ ಆಟ-ವಿನೋದಗಳಂತೆ ನಿಮಗೆ ನೀಡಲಾಗಿದೆ ಎಂದು ಇದರ ಅರ್ಥವಲ್ಲ. ಪರಲೋಕದ ಶಾಶ್ವತ ಜೀವನಕ್ಕೆ ಹೋಲಿಸಿದರೆ ಈ ಲೌಕಿಕ ಜೀವನ, ಒಬ್ಬ ವ್ಯಕ್ತಿ ಸ್ವಲ್ಪ ಹೊತ್ತು ಆಟ ವಿನೋದಗಳಲ್ಲಿ ಮನಸ್ಸನ್ನು ಮುದಗೊಳಿಸಿ ಮತ್ತೆ ತನ್ನ ನೈಜ ಗಂಭೀರ ಚಟುವಟಿಕೆಗಳ ಕಡೆಗೆ ಮರಳುವಂತಿದೆ ಎಂಬುದು ಇದರ ಇಂಗಿತ. ಲೌಕಿಕ ಜೀವನವನ್ನು ಆಟ-ವಿನೋದಗಳಿಗೆ ಹೋಲಿಸಲಿಕ್ಕೆ ಮತ್ತೊಂದು ಕಾರಣವೂ ಇದೆ. ಅದಾವುದೆಂದರೆ ಇಲ್ಲಿ ವಾಸ್ತವಿಕತೆಗಳು

33. ಓ ಪೈಗಂಬರರೇ, ಇವರು ಸೃಷ್ಟಿಸಿ ಹೇಳುತ್ತಿರುವ ಮಾತುಗಳಿಂದ ನಿಮಗೆ ಖೇದವಾಗುತ್ತಿರುವುದು ನಮಗೆ ಗೊತ್ತಿದೆ. ಆದರೆ ಇವರು ನಿರಾಕರಿಸುತ್ತಿರುವುದು ನಿಮ್ಮನ್ನಲ್ಲ. ಈ ಅಕ್ರಮಿಗಳು ವಾಸ್ತವದಲ್ಲಿ ಅಲ್ಲಾಹನ ನಿದರ್ಶನಗಳನ್ನು ನಿರಾಕರಿಸುತ್ತಿದ್ದಾರೆ.[6]

قَدْ نَعْلَمُ اِنَّهٗ لَيَحْزُنُكَ الَّذِىْ يَقُوْلُوْنَ فَاِنَّهُمْ لَا يُكَذِّبُوْنَكَ وَلٰكِنَّ الظّٰلِمِيْنَ بِاٰيٰتِ اللّٰهِ يَجْحَدُوْنَ ﴿٣٣﴾

34. ನಿಮಗಿಂತ ಮೊದಲೂ ಅನೇಕ ಸಂದೇಶವಾಹಕರು, ಸುಳ್ಳಾಗಿಸಲ್ಪಟ್ಟಿರುತ್ತಾರೆ. ಆದರೆ ಈ ಸುಳ್ಳಾಗಿಸುವಿಕೆ ಮತ್ತು ಅವರಿಗೆ ಕೊಡಲ್ಪಟ್ಟ ಹಿಂಸೆಯ ಬಗ್ಗೆ ಅವರು ತಾಳ್ಮೆ ವಹಿಸಿದರು. ಕೊನೆಗೆ ಅವರಿಗೆ ನಮ್ಮ ಸಹಾಯ ಒದಗಿತು. ಅಲ್ಲಾಹನ ವಚನಗಳನ್ನು ಬದಲಾಯಿಸುವ ಶಕ್ತಿ ಯಾರಲ್ಲೂ ಇಲ್ಲ. ಗತ ಸಂದೇಶವಾಹಕರಿಗೆ ಏನೇನು ಸಂಭವಿಸಿತ್ತೆಂಬ ವೃತ್ತಾಂತಗಳು ನಿಮಗೆ ತಲುಪಿರುತ್ತವೆ.

وَلَقَدْ كُذِّبَتْ رُسُلٌ مِّنْ قَبْلِكَ فَصَبَرُوْا عَلٰى مَا كُذِّبُوْا وَاُوْذُوْا حَتّٰىٓ اَتٰىهُمْ نَصْرُنَا ۚ وَلَا مُبَدِّلَ لِكَلِمٰتِ اللّٰهِ ۚ وَلَقَدْ جَآءَكَ مِنْ نَّبَاِى الْمُرْسَلِيْنَ ﴿٣٤﴾

35. ಇಷ್ಟಾಗಿಯೂ ಇವರ ಅಶ್ರದ್ಧೆಯನ್ನು ನಿಮ್ಮಿಂದ ಸಹಿಸಲಾಗುವುದಿಲ್ಲವೆಂದಾದರೆ, ನಿಮ್ಮಲ್ಲೇನಾದರೂ ಬಲವಿದ್ದರೆ ನೆಲದಲ್ಲೊಂದು ಸುರಂಗವನ್ನು ಹುಡುಕಿರಿ ಅಥವಾ ಆಕಾಶಕ್ಕೆ ಏಣಿಯಿಡಿರಿ ಮತ್ತು ಇವರ ಬಳಿಗೆ ದೃಷ್ಟಾಂತವೇನಾದರೂ ತರಲು ಪ್ರಯತ್ನಿಸಿರಿ. ಅಲ್ಲಾಹನು ಇಚ್ಛಿಸುತ್ತಿದ್ದರೆ ಇವರೆಲ್ಲರನ್ನೂ ಸನ್ಮಾರ್ಗದಲ್ಲಿ ಒಟ್ಟುಗೂಡಿಸಲು ಶಕ್ತನಾಗಿದ್ದನು. ಆದುದರಿಂದ ಅಜ್ಞಾನಿಗಳಲ್ಲಾಗಬೇಡಿರಿ.[7]

وَاِنْ كَانَ كَبُرَ عَلَيْكَ اِعْرَاضُهُمْ فَاِنِ اسْتَطَعْتَ اَنْ تَبْتَغِىَ نَفَقًا فِى الْاَرْضِ اَوْ سُلَّمًا فِى السَّمَآءِ فَتَاْتِيَهُمْ بِاٰيَةٍ ۗ وَلَوْ شَآءَ اللّٰهُ لَجَمَعَهُمْ عَلَى الْهُدٰى فَلَا تَكُوْنَنَّ مِنَ الْجٰهِلِيْنَ ﴿٣٥﴾

ಗೋಪ್ಯವಾಗಿರುವುದರಿಂದ ಅಂತರ್ ದೃಷ್ಟಿಯಿಲ್ಲದ, ಬಹಿರಂಗವನ್ನು ಮಾತ್ರ ನೋಡುವ ವ್ಯಕ್ತಿಗಳನ್ನು ತಪ್ಪುಕಲ್ಪನೆಗಳಿಗೀಡು ಮಾಡುವಂತಹ ಧಾರಾಳ ಸಾಧನಗಳು ಲಭ್ಯವಿದೆ. ಇಂತಹ ತಪ್ಪುಕಲ್ಪನೆಗಳಲ್ಲಿ ಸಿಲುಕಿ ಜನರು ಜೀವನದ ಪರಮಾರ್ಥಕ್ಕೆ ವಿರುದ್ಧವಾದ ಎಂತಹ ವಿಚಿತ್ರ ಧೋರಣೆಗಳನ್ನು ಅನುಸರಿಸುತ್ತಾರೆಂದರೆ ಅವರ ಜೀವನ ಬರೇ ಆಟ-ವಿನೋದಗಳಂತಾಗಿ ಬಿಡುತ್ತದೆ.

6. ವಾಸ್ತವದಲ್ಲಿ ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸೂಕ್ತಗಳನ್ನು ಓದಿ ಕೇಳಿಸಲು ಆರಂಭಿಸುವ ತನಕ, ಅವರ ಜನಾಂಗದ ಎಲ್ಲರೂ ಅವರನ್ನು 'ಅಮೀನ್'(ಪ್ರಾಮಾಣಿಕ) ಮತ್ತು 'ಸಾದಿಕ್' (ಸತ್ಯಸಂಧ) ಎಂದು ಕರೆಯುತ್ತಿದ್ದರು. ಅವರ ಸತ್ಯಸಂಧತೆಯ ಬಗ್ಗೆ ಅವರಿಗೆ ಪೂರ್ಣ ವಿಶ್ವಾಸವಿತ್ತು. ಆದರೆ ಅವರು ಅಲ್ಲಾಹನ ಸಂದೇಶವನ್ನು ತಲಪಿಸಲು ಆರಂಭಿಸಿದ ತಕ್ಷಣ ಅವರ ಜನಾಂಗದವರು ಅವರನ್ನು ನಿರಾಕರಿಸಿದರು. ಆದರೆ ಈ ಬದಲಾದ ಪರಿಸ್ಥಿತಿಯಲ್ಲೂ ವೈಯಕ್ತಿಕವಾಗಿ ಅವರನ್ನು ಸುಳ್ಳುಗಾರನೆಂದು ಸಾರುವ ಧೈರ್ಯ ಯಾರಿಗೂ ಇರಲಿಲ್ಲ. ಯಾವುದೇ ಲೌಕಿಕ ವ್ಯವಹಾರಗಳ ವೇಳೆ ಅವರು ಸುಳ್ಳಾಡಿದ್ದಾರೆ ಎಂಬಂತಹ ಆರೋಪವನ್ನು ಅವರ ಕಟ್ಟಾ ವಿರೋಧಿಯೂ ಎಂದೂ ಅವರ ಮೇಲೆ ಹೊರಿಸಿರಲಿಲ್ಲ. ಅವರ ಪ್ರವಾದಿತ್ವವನ್ನು ಮಾತ್ರ ಅವರು ಸುಳ್ಳಾಗಿಸಿದರು. ಅಬೂಜಹಲ್ ಅವರ ಕಡು ವೈರಿಯಾಗಿದ್ದ ಹ. ಅಲೀಯವರು(ರ) ಉಲ್ಲೇಖಿಸಿರುವಂತೆ ಅವನು ಒಮ್ಮೆ ಪ್ರವಾದಿವರ್ಯರೊಂದಿಗೆ(ಸ) ಮಾತನಾಡುತ್ತಾ ಹೀಗೆಂದನು, "ನಾವು ನಿಮ್ಮನ್ನು ಸುಳ್ಳು ಹೇಳುವವರೆನ್ನುವುದಿಲ್ಲ. ಆದರೆ ನೀವು ಮುಂದಿಡುತ್ತಿರುವ ವಿಚಾರ ಸುಳ್ಳೆನ್ನುತ್ತೇವೆ."

7. ಅರ್ಥಾತ್- ಇವರು ವಿಶ್ವಾಸವಿಡುವಂತಾಗಲು ಯಾವುದಾದರೂ ದೃಷ್ಟಾಂತವನ್ನು ತೋರಿಸಬೇಕು ಎಂಬ ಬಗ್ಗೆ ಚಿಂತಿತರಾಗದಿರಿ. ಮಾನವರೆಲ್ಲರೂ ಸನ್ಮಾರ್ಗಿಗಳಾಗಿಯೇ ತೀರಬೇಕು ಎಂದು ಅಲ್ಲಾಹನು ಬಯಸಿದ್ದರೆ ಅವನು ಎಲ್ಲರನ್ನೂ ಸತ್ಯವಿಶ್ವಾಸಿಗಳಾಗಿಯೇ ಸೃಷ್ಟಿಸುತ್ತಿದ್ದ. ಹಾಗಿದ್ದರೆ ಪ್ರವಾದಿಗಳನ್ನು ಕಳುಹಿಸುವ ಹಾಗೂ ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳ ನಡುವೆ ಸಂಘರ್ಷವೇರ್ಪಡಿಸುವ ಔಚಿತ್ಯವೇ ಇರಲಿಲ್ಲ.

36. ನಿಶ್ಚಯವಾಗಿಯೂ ಆಲಿಸುವವರು ಮಾತ್ರ ಸತ್ಯಾಹ್ವಾನಕ್ಕೆ ಓಗೊಡುತ್ತಾರೆ. ಇನ್ನು ಸತ್ತವರ ಮಾತು[8] ಅವರನ್ನಂತು ಅಲ್ಲಾಹನು ಸಮಾಧಿಗಳಿಂದಲೇ ಎಬ್ಬಿಸುವನು. ತರುವಾಯ ಅವರು (ಅವನ ನ್ಯಾಯಾಲಯದ ಮುಂದೆ ಹಾಜರಾಗಲಿಕ್ಕಾಗಿ) ಮರಳಿ ತರಲ್ಪಡು ವರು.

إِنَّمَا يَسْتَجِيبُ الَّذِينَ يَسْمَعُونَ ۘ وَالْمَوْتَىٰ
يَبْعَثُهُمُ اللَّهُ ثُمَّ إِلَيْهِ يُرْجَعُونَ ﴿٣٦﴾

وقف غفران ۔ وقف منزل ۔

37. ಈ ಪ್ರವಾದಿಯ ಮೇಲೆ ಏನಾದರೂ ಕುರುಹು ಏಕೆ ಇಳಿಸಲ್ಪಡಲಿಲ್ಲವೆಂದು ಇವರು ಕೇಳುತ್ತಾರೆ. ಹೇಳಿರಿ, ಅಲ್ಲಾಹನು ಕುರುಹನ್ನಿಳಿಸಲು ಸಂಪೂರ್ಣ ಶಕ್ತನಾಗಿದ್ದಾನೆ. ಆದರೆ ಇವರಲ್ಲಿ ಹೆಚ್ಚಿನವರು ತಿಳಿಗೇಡಿಗಳಾಗಿದ್ದಾರೆ.[9]

وَقَالُوا لَوْلَا نُزِّلَ عَلَيْهِ آيَةٌ مِّن رَّبِّهِ ۚ
قُلْ إِنَّ اللَّهَ قَادِرٌ عَلَىٰ أَن يُنَزِّلَ آيَةً
وَلَٰكِنَّ أَكْثَرَهُمْ لَا يَعْلَمُونَ ﴿٣٧﴾

عند البعض على يسمعون

38. ಭೂಮಿಯ ಮೇಲೆ ಚಲಿಸುವ ಪ್ರಾಣಿಗಳನ್ನೂ ವಾಯುವಿನಲ್ಲಿ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳನ್ನೂ ನೋಡಿಕೊಳ್ಳಿರಿ. ಇವೆಲ್ಲವೂ ನಿಮ್ಮಂತೆಯೇ ಇರುವ ವರ್ಗಗಳು. ನಾವು ಅವುಗಳ ವಿಧಿಲಿಖಿತದಲ್ಲೇನೂ ಲೋಪಗೊಳಿಸಲಿಲ್ಲ. ಅನಂತರ ಇವೆಲ್ಲ ತಮ್ಮ ಪ್ರಭುವಿನ ಕಡೆಗೆ ಒಟ್ಟುಗೂಡಿಸಲ್ಪಡುತ್ತವೆ.

وَمَا مِن دَابَّةٍ فِي الْأَرْضِ وَلَا طَائِرٍ
يَطِيرُ بِجَنَاحَيْهِ إِلَّا أُمَمٌ أَمْثَالُكُم ۚ
مَّا فَرَّطْنَا فِي الْكِتَابِ مِن شَيْءٍ ۚ ثُمَّ
إِلَىٰ رَبِّهِمْ يُحْشَرُونَ ﴿٣٨﴾

39. ಆದರೆ ನಮ್ಮ ನಿದರ್ಶನಗಳನ್ನು ಸುಳ್ಳಾಗಿಸುವವರು ಕಿವುಡರೂ ಮೂಕರೂ ಆಗಿರುತ್ತಾರೆ. ಅಂಧಕಾರಗಳಲ್ಲಿ ಬಿದ್ದಿರುತ್ತಾರೆ. ಅಲ್ಲಾಹನು ತನಗಿಷ್ಟ ಬಂದವರನ್ನು ಪಥಭ್ರಷ್ಟಗೊಳಿಸುತ್ತಾನೆ ಮತ್ತು ತನಗಿಷ್ಟ ಬಂದವರನ್ನು ಸನ್ಮಾರ್ಗಕ್ಕೆ ಹಾಕಿ ಬಿಡುತ್ತಾನೆ.[10]

وَالَّذِينَ كَذَّبُوا بِآيَاتِنَا صُمٌّ وَبُكْمٌ فِي
الظُّلُمَاتِ ۗ مَن يَشَإِ اللَّهُ يُضْلِلْهُ ۖ وَمَن
يَشَأْ يَجْعَلْهُ عَلَىٰ صِرَاطٍ مُّسْتَقِيمٍ ﴿٣٩﴾

40. ಇವರೊಡನೆ ಹೇಳಿರಿ- ನೀವು ತುಸು ಆಲೋಚಿಸಿ ಹೇಳಿರಿ. ನಿಮ್ಮ ಮೇಲೆ ಎಂದಾದರೂ ಅಲ್ಲಾಹನ ಕಡೆಯಿಂದ

قُلْ أَرَأَيْتَكُمْ إِنْ أَتَاكُمْ عَذَابُ اللَّهِ أَوْ
أَتَتْكُمُ السَّاعَةُ أَغَيْرَ اللَّهِ تَدْعُونَ

8. ಆರಿಸುವವರು ಎಂದರೆ ಆತ್ಮಸಾಕ್ಷಿ ಜಾಗೃತವಾಗಿರುವವರು. ತಮ್ಮ ಬುದ್ಧಿ ಮತ್ತು ವಿಚಾರಕ್ಕೆ ತಿಲಾಂಜಲಿಯಿತ್ತು ಹೃದಯದ ಕವಾಟಗಳಿಗೆ ಪಕ್ಷಪಾತ ಮತ್ತು ನಿಷ್ಕ್ರಿಯತೆಯ ಬೀಗ ಜಡಿದುಕೊಳ್ಳದೇ ಇರುವವರು. ಮರಣ ಹೊಂದಿರುವವರೆಂದರೆ ಅಂಧಾನುಯಾಯಿಯಾಗಿ ಹಿಂದಿನವರು ಅನುಸರಿಸಿದ ಮಾರ್ಗವನ್ನೇ ಕುರುಡನಂತೆ ಅನುಸರಿಸುವವರು. ಅದಕ್ಕೆ ವ್ಯತಿರಿಕ್ತವಾದ ಯಾವುದೇ ಮಾತನ್ನು ಅದು ಅಪ್ಪಟ ಸತ್ಯವೇ ಆಗಿದ್ದರೂ ಅವರು ಸ್ವೀಕರಿಸಲು ಸಿದ್ಧರಾಗುವುದಿಲ್ಲ.

9. ಕುರುಹು ಎಂದರೆ ಅನುಭವಕ್ಕೆ ಬರುವ ಪವಾಡ. ಅಲ್ಲಾಹನು ತನ್ನ ಕುರುಹನ್ನು ತೋರಿಸದೇ ಇರಲು ಕಾರಣ ಅಸಾಮರ್ಥ್ಯವಲ್ಲ. ಬದಲಾಗಿ ಅದಕ್ಕೆ ಬೇರೆಯೇ ಕಾರಣವಿದೆ. ತಮ್ಮ ಅಜ್ಞಾನದಿಂದಾಗಿ ಅವರಿಗದು ತಿಳಿದಿಲ್ಲ ಎಂದು ತಿಳಿಯಪಡಿಸುವುದೇ ಈ ಸೂಕ್ತದ ಉದ್ದೇಶ.

10. ಅಲ್ಲಾಹನು ಪಥಭ್ರಷ್ಟಗೊಳಿಸುವುದೆಂದರೆ ಅಜ್ಞಾನಪ್ರಿಯನಾದ ಒಬ್ಬ ವ್ಯಕ್ತಿಗೆ ಅಲ್ಲಾಹನ ದೃಷ್ಟಾಂತಗಳ ಬಗ್ಗೆ ಅಧ್ಯಯನ ಮಾಡುವ ಅವಕಾಶವನ್ನು ಕರುಣಿಸದೇ ಇರುವುದಾಗಿದೆ. ಪಕ್ಷಪಾತ ಪೀಡಿತನಾದ ಮತ್ತು ವಾಸ್ತವಪ್ರಿಯನಲ್ಲದ ವಿದ್ಯಾರ್ಥಿಯೊಬ್ಬನು ಸತ್ಯದ ದೃಷ್ಟಾಂತಗಳನ್ನು ಕಂಡರೂ ಅದು ಅವನ ಕಣ್ಣಿನಿಂದ ಮರೆಯಾಗಿರುವುದು. ತಪ್ಪುತಿಳುವಳಿಕೆಗಳಲ್ಲಿ ಸಿಲುಕಿಸುವಂತಹ ವಸ್ತುಗಳು ಅವನನ್ನು ಸತ್ಯದಿಂದ ಬಹಳ ದೂರ ಕೊಂಡೊಯ್ಯುವಂತೆ ಮಾಡುವುದು. ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹನು ಸನ್ಮಾರ್ಗದರ್ಶನ ನೀಡುವುದೆಂದರೆ ಸತ್ಯಾನ್ವೇಷಕನೊಬ್ಬನಿಗೆ ಜ್ಞಾನ ಮೂಲಗಳಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಕರುಣಿಸುವುದು. ಅಲ್ಲಾಹನ ದೃಷ್ಟಾಂತಗಳಲ್ಲಿ ಸತ್ಯವನ್ನು ತಲುಪುವಂತಹ ಗುರುತುಗಳು ಅವನಿಗೆ ಗೋಚರಿಸುವಂತೆ ಮಾಡುವುದು.

إِنْ كُنْتُمْ صٰدِقِيْنَ ۞٤٠

ಯಾವುದಾದರೊಂದು ವಿಪತ್ತು ಬಂದೆರಗಿದಾಗ ಅಥವಾ ನಿಮ್ಮ ಕೊನೆಯ ಘಳಿಗೆಯು ಬಂದಾಗ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಕೂಗಿ ಕರೆಯುತ್ತೀರಾ? ನೀವು ಸತ್ಯವಾದಿಗಳಾಗಿದ್ದರೆ ಹೇಳಿರಿ.

بَلْ إِيَّاهُ تَدْعُوْنَ فَيَكْشِفُ مَا تَدْعُوْنَ
إِلَيْهِ إِنْ شَآءَ وَتَنْسَوْنَ مَا تُشْرِكُوْنَ ۞٤١

41. ಆಗ ನೀವು ಅಲ್ಲಾಹನನ್ನೇ ಕೂಗಿ ಕರೆಯುತ್ತೀರಿ. ಅನಂತರ ಅವನಿಚ್ಛಿಸಿದರೆ ಈ ವಿಪತ್ತನ್ನು ನಿಮ್ಮ ಮೇಲಿನಿಂದ ದೂರೀಕರಿಸುತ್ತಾನೆ. ಇಂತಹ ಸಂದರ್ಭಗಳಲ್ಲಿ ನೀವು ಸ್ವಯಂ ಕಲ್ಪಿಸಿ ಕೊಂಡಿರುವ ಭಾಗೀದಾರರನ್ನು ಮರೆತು ಬಿಡುತ್ತೀರಿ.[11]

وَلَقَدْ أَرْسَلْنَآ إِلٰٓى أُمَمٍ مِّنْ قَبْلِكَ
فَأَخَذْنٰهُمْ بِالْبَأْسَآءِ وَالضَّرَّآءِ
لَعَلَّهُمْ يَتَضَرَّعُوْنَ ۞٤٢

42. ನಾವು ನಿಮಗಿಂತ ಮೊದಲು ಅನೇಕ ಜನಾಂಗಗಳಿಗೆ ಸಂದೇಶವಾಹಕರನ್ನು ಕಳುಹಿಸಿದೆವು. ಆ ಜನಾಂಗಗಳು ವಿನಯದಿಂದ ನಮ್ಮ ಮುಂದೆ ಬಾಗುವಂತೆ ಅವರನ್ನು ಕಷ್ಟ ಕಾರ್ಪಣ್ಯಗಳಲ್ಲಿ ಸಿಲುಕಿಸಿದೆವು.

فَلَوْلَآ إِذْ جَآءَهُمْ بَأْسُنَا تَضَرَّعُوْا وَلٰكِنْ
قَسَتْ قُلُوْبُهُمْ وَزَيَّنَ لَهُمُ الشَّيْطٰنُ مَا
كَانُوْا يَعْمَلُوْنَ ۞٤٣

43. ನಮ್ಮ ಕಡೆಯಿಂದ ಅವರ ಮೇಲೆ ಕಷ್ಟ ಬಂದಾಗ ಅವರೇಕೆ ವಿನಯ ತೋರಲಿಲ್ಲ? ಆದರೆ ಅವರ ಹೃದಯಗಳು ಇನ್ನಷ್ಟು ಕಠಿಣವಾದವು ಮತ್ತು ನೀವು ಮಾಡುತ್ತಿರುವುದೆಲ್ಲಾ ಚೆನ್ನಾಗಿದೆ ಯೆಂದು ಶೈತಾನನು ಅವರನ್ನು ಸಮಾಧಾನ ಪಡಿಸಿದನು.

فَلَمَّا نَسُوْا مَا ذُكِّرُوْا بِهٖ فَتَحْنَا عَلَيْهِمْ
أَبْوَابَ كُلِّ شَيْءٍ ۭ حَتّٰٓى إِذَا فَرِحُوْا بِمَآ أُوْتُوْٓا
أَخَذْنٰهُمْ بَغْتَةً فَإِذَا هُمْ مُّبْلِسُوْنَ ۞٤٤

44. ಅನಂತರ ಅವರು, ತಮಗೆ ಕೊಡಲ್ಪಟ್ಟ ಬುದ್ಧಿವಾದವನ್ನು ಮರೆತು ಬಿಟ್ಟಾಗ ನಾವು ಅವರಿಗಾಗಿ ಎಲ್ಲ ವಿಧದ ಸಂಪನ್ನತೆಯ ದ್ವಾರಗಳನ್ನು ತೆರೆದು ಬಿಟ್ಟೆವು. ಅವರಿಗೆ ದಯಪಾಲಿಸಲ್ಪಟ್ಟ ಕೊಡುಗೆಗಳಲ್ಲಿ ಅವರು ಚೆನ್ನಾಗಿ ಮಗ್ನರಾಗಿದ್ದಾಗ ನಾವು ಹಠಾತ್ತನೆ ಅವರನ್ನು ಹಿಡಿದು ಕೊಂಡೆವು. ಆಗ ಅವರು ಯಾವುದೇ ಒಳಿತಿನ ಬಗ್ಗೆ ನಿರಾಶರಾಗಿದ್ದರು.

فَقُطِعَ دَابِرُ الْقَوْمِ الَّذِيْنَ ظَلَمُوْا ۭ
وَالْحَمْدُ لِلّٰهِ رَبِّ الْعٰلَمِيْنَ ۞٤٥

45. ಹೀಗೆ ಅಕ್ರಮವೆಸಗಿದವರ ಮೂಲವೇ ಕಡಿದು ಹಾಕಲ್ಪಟ್ಟಿತು. ಸರ್ವಸ್ತುತಿಯು ಸರ್ವಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ.

11. ಅರ್ಥಾತ್- ಈ ಕುರುಹು ನಿಮ್ಮ ವ್ಯಕ್ತಿತ್ವದಲ್ಲೇ ಅಡಕವಾಗಿದೆ. ಯಾವುದಾದರೂ ದೊಡ್ಡ ಆತಂಕ ನಿಮಗೆ ಎದುರಾದರೆ, ಮರಣ ತನ್ನ ಭೀಕರ ಸ್ವರೂಪದೊಂದಿಗೆ ನಿಮ್ಮ ಮುಂದೆ ಬಂದು ನಿಂತಾಗ ದೇವನಲ್ಲದೆ ಬೇರಾರ ಆಶ್ರಯವೂ ನಿಮಗೆ ಕಾಣಿಸುವುದಿಲ್ಲ. ದೊಡ್ಡ ದೊಡ್ಡ ಬಹುದೇವಾರಾಧಕರೂ ಆಗ ತಮ್ಮ ಆರಾಧ್ಯರುಗಳನ್ನು ಮರೆತು ಏಕದೇವನನ್ನು ಕೂಗಿ ಕರೆಯುತ್ತಾರೆ. ಅಪ್ಪಟ ನಾಸ್ತಿಕನಾಗಿರುವವನೂ ಅಂತಹ ಸಂದರ್ಭದಲ್ಲಿ ದೇವನ ಮುಂದೆ ಕೈ ಚಾಚಿ ಮೊರೆಯಿಡುತ್ತಾನೆ. ದೇವೋಪಾಸನೆ ಮತ್ತು ಏಕದೇವತ್ವದ ಸಾಕ್ಷ್ಯವಹಿಸುವ ಗುಣ ಪ್ರತಿಯೊಬ್ಬನ ವ್ಯಕ್ತಿತ್ವದಲ್ಲೂ ಇದೆ ಎಂಬುದಕ್ಕೆ ಇದುವೇ ಅತ್ಯಂತ ದೊಡ್ಡ ಪ್ರಮಾಣವಾಗಿದೆ. ಅದರ ಮೇಲೆ ಅಲಕ್ಷ್ಯ ಮತ್ತು ಅಜ್ಞಾನದ ಎಷ್ಟೇ ತೆರೆಗಳನ್ನು ಎಳೆದರೂ ಸರಿಯೇ. ಯಾವಾಗಲಾದರೊಮ್ಮೆ ಅದು ಮೇಲೆದ್ದು ಗೋಚರಿಸಿಯೇ ತೀರುತ್ತದೆ.

46. ಓ ಪೈಗಂಬರರೇ, ಇವರೊಡನೆ ಕೇಳಿರಿ- ಅಲ್ಲಾಹನು ನಿಮ್ಮ ದೃಷ್ಟಿಯನ್ನೂ ಶ್ರವಣವನ್ನೂ ನಿಮ್ಮಿಂದ ಕಸಿದುಕೊಂಡು ನಿಮ್ಮ ಹೃದಯಗಳಿಗೆ ಮುದ್ರೆಯೊತ್ತಿಬಿಟ್ಟರೆ[12] ಈ ಶಕ್ತಿಗಳನ್ನು ನಿಮಗೆ ಮರಳಿ ಕೊಡಿಸಲು ಅಲ್ಲಾಹನ ಹೊರತು ಇನ್ನಾವ ದೇವನಿದ್ದಾನೆ? ನಾವು ಪದೇ ಪದೇ ನಮ್ಮ ನಿದರ್ಶನಗಳನ್ನು ಹೇಗೆ ಇವರ ಮುಂದೆ ಇರಿಸುತ್ತೇವೆ ಮತ್ತು ಇವರು ಅವುಗಳನ್ನು ಕಂಡೂ ಕಾಣದಂತೆ ಹೇಗೆ ವರ್ತಿಸುತ್ತಾರೆಂಬುದನ್ನು ನೋಡಿರಿ.

قُلْ أَرَءَيْتُمْ إِنْ أَخَذَ اللَّهُ سَمْعَكُمْ وَ
أَبْصَارَكُمْ وَخَتَمَ عَلَىٰ قُلُوبِكُمْ مَنْ إِلَٰهٌ
غَيْرُ اللَّهِ يَأْتِيكُمْ بِهِ ۗ انْظُرْ كَيْفَ
نُصَرِّفُ الْآيَاتِ ثُمَّ هُمْ يَصْدِفُونَ ﴿٤٦﴾

47. ಹೇಳಿರಿ- ಅಲ್ಲಾಹನ ಕಡೆಯಿಂದ ನಿಮ್ಮ ಮೇಲೆ ಅಕಸ್ಮಾತ್ ಅಥವಾ ಪ್ರತ್ಯಕ್ಷ ಯಾತನೆ ಬಂದೆರಗಿದರೆ ಅತ್ಯಾಚಾರಿಗಳ ವಿನಾ ಇನ್ನಾರಾದರೂ ನಾಶ ಹೊಂದುವರೇ ಎಂದು ಯೋಚಿಸಿದಿರಾ?

قُلْ أَرَءَيْتَكُمْ إِنْ أَتَاكُمْ عَذَابُ اللَّهِ
بَغْتَةً أَوْ جَهْرَةً هَلْ يُهْلَكُ إِلَّا
الْقَوْمُ الظَّالِمُونَ ﴿٤٧﴾

48. ನಾವು ಎಲ್ಲ ಸಂದೇಶವಾಹಕರನ್ನು ಸಜ್ಜನರಿಗೆ ಸುವಾರ್ತೆ ನೀಡುವವರೂ ದುರ್ಜನರಿಗೆ ಎಚ್ಚರಿಗೆ ಕೊಡುವವರೂ ಆಗಿ ಮಾತ್ರ ಕಳುಹಿಸುತ್ತೇವೆ. ಆ ಬಳಿಕ ಅವರ ಮಾತನ್ನು ನಂಬಿ, ತಮ್ಮ ಕರ್ಮವಿಧಾನವನ್ನು ಸರಿಪಡಿಸಿಕೊಂಡವರಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೂ ಇರುವುದಿಲ್ಲ.

وَمَا نُرْسِلُ الْمُرْسَلِينَ إِلَّا مُبَشِّرِينَ
وَمُنْذِرِينَ ۖ فَمَنْ آمَنَ وَأَصْلَحَ فَلَا
خَوْفٌ عَلَيْهِمْ وَلَا هُمْ يَحْزَنُونَ ﴿٤٨﴾

49. ನಮ್ಮ ನಿದರ್ಶನಗಳನ್ನು ಸುಳ್ಳಾಗಿಸುವವರು ತಮ್ಮ ನಿರಾಕರಣೆಯ ಫಲವಾಗಿ ಶಿಕ್ಷೆ ಅನುಭವಿಸಿಯೇ ತೀರುವರು.

وَالَّذِينَ كَذَّبُوا بِآيَاتِنَا يَمَسُّهُمُ الْعَذَابُ
بِمَا كَانُوا يَفْسُقُونَ ﴿٤٩﴾

50. ಓ ಪೈಗಂಬರರೇ, ಇವರೊಡನೆ ಹೇಳಿರಿ- "ನನ್ನಲ್ಲಿ ಅಲ್ಲಾಹನ ಖಜಾನೆಗಳಿವೆಯೆಂದು ನಾನು ನಿಮ್ಮೊಡನೆ ಹೇಳುವುದಿಲ್ಲ. ನಾನು ಪರೋಕ್ಷಜ್ಞಾನಿಯೂ ಅಲ್ಲ. ನಾನು ದೇವಚರನೆಂದೂ ಹೇಳುವುದಿಲ್ಲ. ನಾನು ನನ್ನ ಮೇಲೆ ಅವತೀರ್ಣಗೊಳ್ಳುತ್ತಿರುವ 'ದಿವ್ಯವಾಣಿ'ಯ ಅನುಸರಣೆಯನ್ನು ಮಾತ್ರ ಮಾಡುತ್ತಿದ್ದೇನೆ" ಮತ್ತು ಇವರೊಡನೆ, "ಕುರುಡನೂ ದೃಷ್ಟಿಯುಳ್ಳವನೂ ಸರಿಸಮಾನನಾಗಿರಲು ಸಾಧ್ಯವೇ? ನೀವು ವಿವೇಚಿಸುವುದಿಲ್ಲವೇ?" ಎಂದು ಕೇಳಿರಿ.

قُلْ لَا أَقُولُ لَكُمْ عِنْدِي خَزَائِنُ اللَّهِ
وَلَا أَعْلَمُ الْغَيْبَ وَلَا أَقُولُ لَكُمْ إِنِّي
مَلَكٌ ۖ إِنْ أَتَّبِعُ إِلَّا مَا يُوحَىٰ إِلَيَّ ۚ قُلْ هَلْ
يَسْتَوِي الْأَعْمَىٰ وَالْبَصِيرُ ۚ أَفَلَا تَتَفَكَّرُونَ ﴿٥٠﴾

51 ಓ ಪೈಗಂಬರರೇ, ತಮ್ಮ ಪ್ರಭುವಿನ ಮುಂದೆ ಆತನ ಹೊರತು (ಅಧಿಕಾರಬಲವುಳ್ಳ) ಸಹಾಯಕರು ಅಥವಾ ಶಿಫಾರಸು

وَأَنْذِرْ بِهِ الَّذِينَ يَخَافُونَ أَنْ يُحْشَرُوا
إِلَىٰ رَبِّهِمْ ۙ لَيْسَ لَهُمْ مِنْ دُونِهِ وَلِيٌّ وَلَا

12. ಮನಸ್ಸಿನ ಮೇಲೆ ಬೀಗ ಜಡಿಯುವುದೆಂದರೆ ಯೋಚಿಸುವ ಮತ್ತು ತಿಳಿಯುವ ಸಾಮರ್ಥ್ಯಗಳನ್ನು ಕಿತ್ತುಕೊಳ್ಳುವುದಾಗಿದೆ.

شَفِيعٌ لَّعَلَّهُمْ يَتَّقُونَ ﴿٥١﴾

ಮಾಡುವವರು ಯಾರೂ ಇಲ್ಲದಂತಹ ಸ್ಥಿತಿಯಲ್ಲಿ ಹಾಜರು ಗೊಳಿಸಲ್ಪಡಲಿದ್ದೇವೆಂದು ಭಯಪಡುವವರಿಗೆ ನೀವು ಇದರ (ಈ ದಿವ್ಯ ಬೋಧನೆಯ) ಮೂಲಕ ಉಪದೇಶ ನೀಡಿರಿ. ಪ್ರಾಯಶಃ (ಈ ಉಪದೇಶದಿಂದ ಜಾಗೃತರಾಗಿ) ಇವರು ದೇವಭಯದ ನೀತಿ ಅನುಸರಿಸಲೂ ಬಹುದು.

وَلَا تَطْرُدِ الَّذِينَ يَدْعُونَ رَبَّهُم بِالْغَدَاةِ
وَالْعَشِيِّ يُرِيدُونَ وَجْهَهُ ۖ مَا عَلَيْكَ مِنْ
حِسَابِهِم مِّن شَيْءٍ وَمَا مِنْ حِسَابِكَ
عَلَيْهِم مِّن شَيْءٍ فَتَطْرُدَهُمْ فَتَكُونَ
مِنَ الظَّالِمِينَ ﴿٥٢﴾

52. ಯಾರು ತಮ್ಮ ಪ್ರಭುವನ್ನು ಸಂಜೆ ಮುಂಜಾನೆಗಳಲ್ಲಿ ಪ್ರಾರ್ಥಿಸುತ್ತಾರೋ ಹಾಗೂ ಅವನ ಸಂಪ್ರೀತಿಯನ್ನರಸುತ್ತಿರು ತ್ತಾರೋ ಅವರನ್ನು ನಿಮ್ಮಿಂದ ದೂರಕ್ಕೆ ಅಟ್ಟಬೇಡಿರಿ. ಅವರ ಲೆಕ್ಕದಲ್ಲಿನ ಯಾವ ಭಾರವೂ ನಿಮ್ಮ ಮೇಲಿಲ್ಲ ಮತ್ತು ನಿಮ್ಮ ಲೆಕ್ಕದಲ್ಲಿನ ಯಾವ ಭಾರವೂ ಅವರ ಮೇಲಿಲ್ಲ. ಹೀಗಿದ್ದರೂ ನೀವು ಅವರನ್ನು ದೂರಕ್ಕೆ ಅಟ್ಟಿದರೆ ನೀವು ಅಕ್ರಮಿಗಳಲ್ಲಿ ಗಣಿಸಲ್ಪಡುವಿರಿ.

وَكَذَٰلِكَ فَتَنَّا بَعْضَهُم بِبَعْضٍ لِّيَقُولُوا أَهَٰؤُلَاءِ
مَنَّ اللَّهُ عَلَيْهِم مِّن بَيْنِنَا ۗ أَلَيْسَ اللَّهُ
بِأَعْلَمَ بِالشَّاكِرِينَ ﴿٥٣﴾

53. ವಾಸ್ತವದಲ್ಲಿ ನಾವು ಇದೇ ರೀತಿಯಲ್ಲಿ ಇವರ ಪೈಕಿ ಕೆಲವರನ್ನು ಕೆಲವರ ಮೂಲಕ ಪರೀಕ್ಷೆಗೊಳಪಡಿಸಿದ್ದೇವೆ.[13] ಇದು ಅವರು ಇವರನ್ನು ಕಂಡು, "ನಮ್ಮ ಪೈಕಿ ಅಲ್ಲಾಹನ ಅನುಗ್ರಹವಾದುದು ಇವರ ಮೇಲೆಯೇ?" ಎಂದು ಕೇಳುವಂತಾಗಲಿಕ್ಕಾಗಿ. ಹೌದು, ಅಲ್ಲಾಹನು ತನ್ನ ಕೃತಜ್ಞ ದಾಸರನ್ನು ಇವರಿಗಿಂತ ಚೆನ್ನಾಗಿ ಅರಿಯುವುದಿಲ್ಲವೇ?

وَإِذَا جَاءَكَ الَّذِينَ يُؤْمِنُونَ بِآيَاتِنَا فَقُلْ
سَلَامٌ عَلَيْكُمْ ۖ كَتَبَ رَبُّكُمْ عَلَىٰ نَفْسِهِ
الرَّحْمَةَ ۖ أَنَّهُ مَنْ عَمِلَ مِنكُمْ سُوءًا
بِجَهَالَةٍ ثُمَّ تَابَ مِن بَعْدِهِ وَأَصْلَحَ
فَأَنَّهُ غَفُورٌ رَّحِيمٌ ﴿٥٤﴾

54. ನಮ್ಮ ನಿದರ್ಶನಗಳ ಮೇಲೆ ವಿಶ್ವಾಸವಿಡುವವರು ನಿಮ್ಮ ಬಳಿಗೆ ಬಂದಾಗ ಅವರೊಡನೆ ಹೇಳಿರಿ- ನಿಮ್ಮ ಮೇಲೆ ಶಾಂತಿ ಇದೆ. ನಿಮ್ಮ ಪ್ರಭು ಔದಾರ್ಯ ನೀತಿಯನ್ನು ತನ್ನ ಮೇಲೆ ವಿಧಿಸಿಕೊಂಡಿದ್ದಾನೆ. ನಿಮ್ಮಲ್ಲಾರಾದರೂ ತಿಳಿಗೇಡಿತನದಿಂದ ದೋಷಮಾಡಿ, ಆ ಬಳಿಕ ಪಶ್ಚಾತ್ತಾಪ ಪಟ್ಟರೆ ಮತ್ತು ತನ್ನನ್ನು ಸುಧಾರಿಸಿಕೊಂಡರೆ, ಅವನು (ಅಲ್ಲಾಹನು) ಅವನನ್ನು ಕ್ಷಮಿಸುತ್ತಾನೆ ಮತ್ತು ಮೃದುನೀತಿಯನ್ನನುಸರಿಸುತ್ತಾನೆ.[14]

13. ಅರ್ಥಾತ್- ಸಮಾಜದಲ್ಲಿ ಕೆಳವರ್ಗದ ಬಡವರು ಮತ್ತು ನಿರ್ಗತಿಕರಿಗೆ ಮೊದಲು ಸತ್ಯವಿಶ್ವಾಸದ ಸೌಭಾಗ್ಯವನ್ನು ನೀಡುವ ಮೂಲಕ ನಾವು ಸೊತ್ತು ಮತ್ತು ಘನತೆಯ ಬಗ್ಗೆ ಅಹಂಭಾವ ಹೊಂದಿರುವವರನ್ನು ಪರೀಕ್ಷೆಗೆ ಗುರಿಪಡಿಸಿದ್ದೇವೆ.

14. ಆ ಕಾಲದಲ್ಲಿ ಪ್ರವಾದಿವರ್ಯರ(ಸ) ಮೇಲೆ ವಿಶ್ವಾಸವಿರಿಸಿದ್ದ ವ್ಯಕ್ತಿಗಳಲ್ಲಿ ಅನೇಕರು ಅಜ್ಞಾನ ಕಾಲದಲ್ಲಿ ಮಹಾ ಪಾಪಗಳನ್ನೆಸಗಿದವರಾಗಿದ್ದರು. ಇಸ್ಲಾಮ್ ಸ್ವೀಕಾರದ ನಂತರ ಅವರ ಜೀವನ ಸಂಪೂರ್ಣವಾಗಿ ಬದಲಾಗಿತ್ತು. ಆದರೆ ಇಸ್ಲಾಮಿನ ವಿರೋಧಿಗಳು ಅವರನ್ನು ಅವರ ಗತಕಾಲದ ದೋಷ ಮತ್ತು ವರ್ತನೆಗಳ ಬಗ್ಗೆ ನೆನಪಿಸಿ ಪೀಡಿಸುತ್ತಿದ್ದರು. ಅದಕ್ಕಾಗಿ ಸತ್ಯವಿಶ್ವಾಸಿಗಳಿಗೆ ಸಾಂತ್ವನ ನೀಡುವಂತೆ ಇಲ್ಲಿ ಹೇಳಲಾಗುತ್ತಿದೆ. ಪಶ್ಚಾತ್ತಾಪ ಪಟ್ಟು ತನ್ನನ್ನು ಸುಧಾರಿಸಿಕೊಂಡವರನ್ನು ಅವರ ಗತ ಪಾಪಗಳ ಕಾರಣಕ್ಕಾಗಿ ಹಿಡಿಯುವಂತಹ ಜಾಯಮಾನ ಅಲ್ಲಾಹನದಲ್ಲ ಎಂದು ಅವರೊಡನೆ ಹೇಳಿರಿ ಎನ್ನಲಾಗುತ್ತಿದೆ.

55. (ಇದಕ್ಕೆ ಅವನ ಔದಾರ್ಯವೇ ಕಾರಣವಾಗಿರುತ್ತದೆ). ಹೀಗೆ ನಾವು ಅಪರಾಧಿಗಳ ಮಾರ್ಗವು ಸ್ಪಷ್ಟವಾಗಲಿಕ್ಕಾಗಿ ನಮ್ಮ ನಿದರ್ಶನಗಳನ್ನು ವಿವರಿಸುತ್ತೇವೆ.

وَكَذٰلِكَ نُفَصِّلُ الْاٰيٰتِ وَلِتَسْتَبِيْنَ
سَبِيْلُ الْمُجْرِمِيْنَ ﴿٥٥﴾

56. ಓ ಪೈಗಂಬರರೇ, ಇವರೊಡನೆ ಹೇಳಿರಿ- ನೀವು ಅಲ್ಲಾಹನ ಹೊರತು ಇತರ ಯಾರನ್ನು ಕರೆಯುತ್ತೀರೋ ಅವರ ಆರಾಧನೆ ಮಾಡುವುದನ್ನು ನನಗೆ ನಿಷೇಧಿಸಲಾಗಿದೆ. ಹೇಳಿರಿ- ನಾನು ನಿಮ್ಮ ಇಚ್ಛೆಗಳ ಅನುಸರಣೆ ಮಾಡಲಾರೆನು. ನಾನು ಹಾಗೆ ಮಾಡಿದರೆ ಪಥಭ್ರಷ್ಟನಾದೇನು, ಸನ್ಮಾರ್ಗ ಹೊಂದದವರಲ್ಲಾದೇನು.

قُلْ اِنِّيْ نُهِيْتُ اَنْ اَعْبُدَ الَّذِيْنَ تَدْعُوْنَ
مِنْ دُوْنِ اللّٰهِ ؕ قُلْ لَّاۤ اَتَّبِعُ اَهْوَآءَكُمْ ۙ قَدْ
ضَلَلْتُ اِذًا وَّمَاۤ اَنَا مِنَ الْمُهْتَدِيْنَ ﴿٥٦﴾

57. ಹೇಳಿರಿ- ನಾನು ನನ್ನ ಪ್ರಭುವಿನ ವತಿಯಿಂದ ಒಂದು ಪ್ರತ್ಯಕ್ಷ ಪ್ರಮಾಣದ ಮೇಲೆ ಸ್ಥಿರವಾಗಿದ್ದೇನೆ ಮತ್ತು ನೀವು ಅದನ್ನು ಸುಳ್ಳಾಗಿಸಿ ಬಿಟ್ಟಿರುವಿರಿ. ನೀವು ತವಕಪಡುತ್ತಿರುವ ವಿಷಯವೀಗ ನನ್ನ ಅಧಿಕಾರದಲ್ಲಿಲ್ಲ. ತೀರ್ಮಾನದ ಸಂಪೂರ್ಣ ಅಧಿಕಾರ ಅಲ್ಲಾಹನಿಗಿದೆ. ಅವನೇ ಸತ್ಯ ಸಂಗತಿಯನ್ನು ತಿಳಿಸುತ್ತಾನೆ. ಅವನು ತೀರ್ಪು ನೀಡುವವರಲ್ಲಿ ಅತ್ಯುತ್ತಮನು.

قُلْ اِنِّيْ عَلٰى بَيِّنَةٍ مِّنْ رَّبِّيْ وَكَذَّبْتُمْ
بِهٖ ؕ مَا عِنْدِيْ مَا تَسْتَعْجِلُوْنَ بِهٖ ؕ اِنِ
الْحُكْمُ اِلَّا لِلّٰهِ ؕ يَقُصُّ الْحَقَّ وَهُوَ
خَيْرُ الْفٰصِلِيْنَ ﴿٥٧﴾

58. ಹೇಳಿರಿ- ನೀವು ತವಕಪಡುತ್ತಿರುವ ವಸ್ತು ನನ್ನ ಅಧಿಕಾರದಲ್ಲಿರುತ್ತಿದ್ದರೆ ನನ್ನ ಮತ್ತು ನಿಮ್ಮ ನಡುವೆ ಎಂದೋ ತೀರ್ಮಾನವಾಗಿ ಬಿಡುತ್ತಿತ್ತು. ಆದರೆ ಅಕ್ರಮಿಗಳ ವಿಷಯದಲ್ಲಿ ಹೇಗೆ ವರ್ತಿಸಬೇಕೆಂದು ಅಲ್ಲಾಹನು ಚೆನ್ನಾಗಿ ಅರಿತಿರುತ್ತಾನೆ.

قُلْ لَّوْ اَنَّ عِنْدِيْ مَا تَسْتَعْجِلُوْنَ بِهٖ
لَقُضِيَ الْاَمْرُ بَيْنِيْ وَبَيْنَكُمْ ؕ وَاللّٰهُ
اَعْلَمُ بِالظّٰلِمِيْنَ ﴿٥٨﴾

59. ಪರೋಕ್ಷದ ಬೀಗದ ಕೈಗಳು ಅವನ ವಶದಲ್ಲೇ ಇವೆ. ಅವುಗಳನ್ನು ಅವನ ಹೊರತು ಇನ್ನಾರೂ ಅರಿಯರು. ನೆಲ ಜಲಗಳಲ್ಲಿರುವುದೆಲ್ಲವನ್ನೂ ಅವನು ತಿಳಿದಿರುತ್ತಾನೆ. ಮರದಿಂದ ಉದುರುವ ಒಂದು ಎಲೆಯ ಕುರಿತೂ ಭೂಮಿಯ ಅಂಧಕಾರಗಳಲ್ಲಿ ಹುದುಗಿರುವ ಒಂದು ಧಾನ್ಯದ ಬಗೆಗೂ ಅವನಿಗೆ ತಿಳಿಯದೆ ಇಲ್ಲ. ಒಣ-ಹಸಿಗಳೆಲ್ಲವೂ ಒಂದು ತೆರೆದ ಗ್ರಂಥದಲ್ಲಿ ಲಿಖಿತಗೊಂಡಿದೆ.

وَعِنْدَهٗ مَفَاتِحُ الْغَيْبِ لَا يَعْلَمُهَاۤ اِلَّا
هُوَ ؕ وَيَعْلَمُ مَا فِي الْبَرِّ وَالْبَحْرِ ؕ وَمَا
تَسْقُطُ مِنْ وَّرَقَةٍ اِلَّا يَعْلَمُهَا وَلَا حَبَّةٍ
فِيْ ظُلُمٰتِ الْاَرْضِ وَلَا رَطْبٍ وَّلَا يَابِسٍ
اِلَّا فِيْ كِتٰبٍ مُّبِيْنٍ ﴿٥٩﴾

60. ಅವನೇ ರಾತ್ರಿಕಾಲದಲ್ಲಿ ನಿಮ್ಮ ಪ್ರಾಣಹರಣ ಮಾಡುತ್ತಾನೆ ಮತ್ತು ಹಗಲಲ್ಲಿ ನೀವು ಮಾಡುತ್ತಿರುವುದನ್ನೆಲ್ಲ ಅವನು ಅರಿಯುತ್ತಾನೆ. ಅನಂತರ ಜೀವನಾವಧಿಯು ಪೂರ್ಣಗೊಳ್ಳಲಿಕ್ಕಾಗಿ ಮರುದಿನ ನಿಮ್ಮನ್ನು ಅದೇ ವ್ಯವಹಾರ ಜಗತ್ತಿಗೆ ಮರಳಿಸುತ್ತಾನೆ. ಕಟ್ಟ ಕಡೆಗೆ ನಿಮ್ಮ ಮರಳುವಿಕೆಯು ಆತನ ಕಡೆಗೇ ಇದೆ. ಅನಂತರ, ನೀವು ಏನು ಮಾಡುತ್ತಿದ್ದಿರೆಂಬುದನ್ನು ಅವನು ನಿಮಗೆ ತಿಳಿಸುವನು.

وَهُوَ الَّذِيْ يَتَوَفّٰىكُمْ بِالَّيْلِ وَيَعْلَمُ مَا
جَرَحْتُمْ بِالنَّهَارِ ثُمَّ يَبْعَثُكُمْ فِيْهِ
لِيُقْضٰۤى اَجَلٌ مُّسَمًّى ۚ ثُمَّ اِلَيْهِ مَرْجِعُكُمْ
ثُمَّ يُنَبِّئُكُمْ بِمَا كُنْتُمْ تَعْمَلُوْنَ ﴿٦٠﴾

61. ಅವನು ತನ್ನ ದಾಸರ ಮೇಲೆ ಸಂಪೂರ್ಣ ಅಧಿಕಾರವುಳ್ಳವನಾಗಿದ್ದಾನೆ ಮತ್ತು ನಿಮ್ಮ ಮೇಲೆ ಮೇಲ್ನೋಟವಿರಿಸುವವರನ್ನು (ದೇವ ಚರರನ್ನು) ನೇಮಕ ಮಾಡಿ ಕಳುಹಿಸುತ್ತಾನೆ. ಎಷ್ಟರ ವರೆಗೆಂದರೆ ನಿಮ್ಮಲ್ಲಿ ಯಾರಿಗಾದರೂ ಮರಣ ಆಸನ್ನವಾದಾಗ ಅವನಿಂದ ಕಳುಹಿಸಲ್ಪಟ್ಟ ದೇವಚರರು ಅವನ ಪ್ರಾಣಹರಣ ಮಾಡುತ್ತಾರೆ ಮತ್ತು ತಮ್ಮ ಕರ್ತವ್ಯವನ್ನು ನೆರವೇರಿಸುವುದರಲ್ಲಿ ಅವರು ಸ್ವಲ್ಪವೂ ಲೋಪ ಮಾಡುವುದಿಲ್ಲ.

وَهُوَ الْقَاهِرُ فَوْقَ عِبَادِهٖ وَيُرْسِلُ عَلَيْكُمْ حَفَظَةً ۭ حَتّٰٓى اِذَا جَاۗءَ اَحَدَكُمُ الْمَوْتُ تَوَفَّتْهُ رُسُلُنَا وَهُمْ لَا يُفَرِّطُوْنَ ﴿٦١﴾

62. ತರುವಾಯ ಸರ್ವರೂ ತಮ್ಮ ನೈಜ ಮಾಲಕನಾದ ಅಲ್ಲಾಹನ ಕಡೆಗೆ ಹಿಂದಿರುಗಿಸಲ್ಪಡುವರು. ಎಚ್ಚರಿಕೆ! ತೀರ್ಮಾನದ ಸಕಲ ಅಧಿಕಾರವು ಅವನಿಗೇ ಪ್ರಾಪ್ತವಿದೆ ಮತ್ತು ಅವನು ಅತಿ ಶೀಘ್ರವಾಗಿ ಲೆಕ್ಕ ಪರಿಶೋಧಿಸುವವನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ.

ثُمَّ رُدُّوْٓا اِلَى اللّٰهِ مَوْلٰىهُمُ الْحَقِّ ۭ اَلَا لَهُ الْحُكْمُ ۣ وَهُوَ اَسْرَعُ الْحٰسِبِيْنَ ﴿٦٢﴾

63. ಓ ಪೈಗಂಬರರೇ, ಇವರೊಡನೆ ಕೇಳಿರಿ- ನಿಮ್ಮನ್ನು ನೆಲಜಲಗಳ ಅಂಧಕಾರಗಳಲ್ಲಿ ಅಪಾಯಗಳಿಂದ ರಕ್ಷಿಸುವವನು ಯಾರು? ನೀವು (ಕಷ್ಟಕಾಲದಲ್ಲಿ) ನಡುಗುತ್ತಲೂ ಮೌನವಾಗಿಯೂ ಯಾರೊಡನೆ ಪ್ರಾರ್ಥಿಸುತ್ತೀರಿ? ಈ ಅನಿಷ್ಟದಿಂದ ನಮ್ಮನ್ನು ಪಾರು ಮಾಡಿಬಿಟ್ಟರೆ ನಾವು ನಿಶ್ಚಯವಾಗಿಯೂ ಕೃತಜ್ಞ ರಾಗುವೆವೆಂದು ಯಾರೊಡನೆ ಹೇಳುತ್ತೀರಿ?

قُلْ مَنْ يُّنَجِّيْكُمْ مِّنْ ظُلُمٰتِ الْبَرِّ وَالْبَحْرِ تَدْعُوْنَهٗ تَضَرُّعًا وَّخُفْيَةً ۚ لَىِٕنْ اَنْجٰىنَا مِنْ هٰذِهٖ لَنَكُوْنَنَّ مِنَ الشّٰكِرِيْنَ ﴿٦٣﴾

64. ಹೇಳಿರಿ- ನಿಮ್ಮನ್ನು ಇದರಿಂದಲೂ ಸಕಲ ವಿಪತ್ತುಗಳಿಂದಲೂ ರಕ್ಷಿಸುವವನು ಅಲ್ಲಾಹ್. ಇಷ್ಟಾಗಿಯೂ ನೀವು ಇತರರನ್ನು ಅವನ ಭಾಗೀದಾರರನ್ನಾಗಿ ಮಾಡುತ್ತೀರಿ.[15]

قُلِ اللّٰهُ يُنَجِّيْكُمْ مِّنْهَا وَمِنْ كُلِّ كَرْبٍ ثُمَّ اَنْتُمْ تُشْرِكُوْنَ ﴿٦٤﴾

15. ಅರ್ಥಾತ್- ಅಲ್ಲಾಹನೇ ಸರ್ವಾಧಿಕಾರಿಯಾಗಿದ್ದಾನೆ. ಪರಮಾಧಿಕಾರ ಉಳ್ಳವನು ಅವನು ಮಾತ್ರ. ಒಳಿತು-ಕೆಡುಕುಗಳೆಲ್ಲವೂ ಅವನ ನಿಯಂತ್ರಣದಲ್ಲಿವೆ. ಎಲ್ಲರ ವಿಧಿಯೂ ಅವನ ಹಸ್ತದಲ್ಲಿದೆ. ನಿಮ್ಮ ಮನಸ್ಸಿನಲ್ಲೇ ಇದಕ್ಕೆ ಪುರಾವೆಗಳಿವೆ. ನಿಮಗೆ ಕಷ್ಟಕಾಲ ಎದುರಾದಾಗ ಮತ್ತು ಭೌತಿಕ ಆಶ್ರಯಗಳೆಲ್ಲವೂ ಕಳಚಿ ಬೀಳುತ್ತಿರುವುದನ್ನು ಕಂಡಾಗ ನೀವು ದಾರಿಗಾಣದೆ ಅವನೆಡೆಗೇ ಮರಳುತ್ತೀರಿ. ಆದರೆ ಇಷ್ಟು ಸ್ಪಷ್ಟವಾದ ಲಕ್ಷಣ ಇದ್ದಾಗಲೂ ನೀವು ನಿರಾಧಾರವಾಗಿ ಬೇರೆಯವರನ್ನು ಅವನಿಗೆ ಸಹಭಾಗಿಗಳನ್ನಾಗಿ ಮಾಡಿದಿರಿ. ಅವನ ಜೀವನಾಧಾರದಿಂದ ನೀವು ಬೆಳೆಯುತ್ತೀರಿ. ಆದರೆ ಇತರರನ್ನು ಅನ್ನದಾತರನ್ನಾಗಿ ಮಾಡಿಕೊಳ್ಳುತ್ತೀರಿ. ಅವನ ಅನುಗ್ರಹದಿಂದ ನೀವು ನೆರವು ಪಡೆಯುತ್ತೀರಿ. ಆದರೆ ಬೇರೆಯವರನ್ನು ಸಹಾಯಕರೆಂದು ಕರೆಯುತ್ತೀರಿ. ನೀವು ಅವನ ದಾಸರೇ ಆಗಿದ್ದರೂ ಬೇರೆಯವರ ದಾಸ್ಯ ಕೈಗೊಳ್ಳುತ್ತೀರಿ. ಅವನೇ ನಿಮ್ಮ ಕಷ್ಟಹರಣ ಮಾಡುತ್ತಾನೆ. ಕಷ್ಟಕಾಲದಲ್ಲಿ ಅವನ ಮುಂದೆಯೇ ನೀವು ಮೊರೆಯಿಡುತ್ತೀರಿ. ಆದರೆ ಆ ಘಳಿಗೆ ಕಳೆದರೆ ಇತರರು ನಿಮ್ಮ ಸಂಕಟಹರರಾಗಿ ಮಾರ್ಪಡುತ್ತಾರೆ. ಇತರರ ಹೆಸರಲ್ಲಿಯೇ ನೀವು ಹರಕೆ ಇಡಲಾರಂಭಿಸುತ್ತೀರಿ.

65. ಹೇಳಿರಿ- ನಿಮಗೆ ನಿಮ್ಮ ಮೇಲ್ಭಾಗದಿಂದ ಅಥವಾ ನಿಮ್ಮ ಪಾದಗಳ ಕೆಳಗಿಂದ ಯಾವುದಾದರೂ ಯಾತನೆಯನ್ನು ಎರಗಿಸಲಿಕ್ಕೂ ಅಥವಾ ನಿಮ್ಮನ್ನು ಪಂಗಡಗಳನ್ನಾಗಿ ವಿಭಾಗಿಸಿ, ಒಂದು ಪಂಗಡಕ್ಕೆ ಇನ್ನೊಂದು ಪಂಗಡದ ಬಲದ ಸವಿಯನ್ನು ಉಣಿಸಲಿಕ್ಕೂ ಅವನು ಶಕ್ತನಾಗಿದ್ದಾನೆ. ಇವರು ವಾಸ್ತವಿಕತೆಯನ್ನು ಅರಿತುಕೊಳ್ಳಲೆಂದು ಯಾವ ರೀತಿಯಲ್ಲಿ ನಾವು, ಪದೇಪದೇ ವಿವಿಧ ರೀತಿಗಳಿಂದ ನಮ್ಮ ನಿದರ್ಶನಗಳನ್ನು ಅವರ ಮುಂದಿರಿಸುತ್ತಿರುವೆ ಎಂಬುದನ್ನು ನೋಡಿರಿ.

قُلْ هُوَ الْقَادِرُ عَلَىٰٓ أَن يَبْعَثَ عَلَيْكُمْ عَذَابًا مِّن فَوْقِكُمْ أَوْ مِن تَحْتِ أَرْجُلِكُمْ أَوْ يَلْبِسَكُمْ شِيَعًا وَيُذِيقَ بَعْضَكُم بَأْسَ بَعْضٍ ۗ انظُرْ كَيْفَ نُصَرِّفُ الْآيَاتِ لَعَلَّهُمْ يَفْقَهُونَ ﴿٦٥﴾

66. ನಿಮ್ಮ ಜನಾಂಗವು ಅದನ್ನು ನಿರಾಕರಿಸುತ್ತಲಿದೆ. ವಸ್ತುತಃ ಅದು ಪರಮಾರ್ಥವಾಗಿರುತ್ತದೆ. ಅವರೊಡನೆ ಹೇಳಿರಿ, "ನಾನು ನಿಮ್ಮ ಮೇಲೆ ಹೊಣೆಗಾರನಾಗಿ ನೇಮಿಸಲ್ಪಟ್ಟಿಲ್ಲ.[16]

وَكَذَّبَ بِهِ قَوْمُكَ وَهُوَ الْحَقُّ ۚ قُل لَّسْتُ عَلَيْكُم بِوَكِيلٍ ﴿٦٦﴾

67. ಪ್ರತಿಯೊಂದು ವಿಷಯವೂ ಪ್ರಕಟಗೊಳ್ಳುವ ಒಂದು ಕಾಲವು ನಿಶ್ಚಿತವಿದೆ. ಪರಿಣಾಮವು ಸದ್ಯದಲ್ಲೇ ನಿಮಗೆ ಸ್ವತಃ ತಿಳಿದು ಬರುವುದು."

لِّكُلِّ نَبَإٍ مُّسْتَقَرٌّ ۚ وَسَوْفَ تَعْلَمُونَ ﴿٦٧﴾

68. ಓ ಪೈಗಂಬರರೇ, ಜನರು ನಮ್ಮ ವಚನಗಳಲ್ಲಿ ದೋಷಾನ್ವೇಷಣೆಗೈಯುತ್ತಿರುವುದನ್ನು ನೀವು ಕಂಡಾಗ, ಅವರು ಈ ಮಾತುಕತೆಯನ್ನು ಬಿಟ್ಟು ಬೇರೆ ಮಾತುಗಳಲ್ಲಿ ತೊಡಗುವ ವರೆಗೂ ಅವರ ಬಳಿಯಿಂದ ದೂರ ಸರಿಯಿರಿ. ಒಂದು ವೇಳೆ ಶೈತಾನನು ನಿಮ್ಮನ್ನು ಮರವೆಗೆ ಒಳಪಡಿಸಿದರೆ ನಿಮಗೆ ಈ ಪ್ರಮಾದವು ಮನವರಿಕೆಯಾದ ಬಳಿಕ ಪುನಃ ಇಂತಹ ಅಕ್ರಮಿಗಳ ಹತ್ತಿರ ಕುಳಿತುಕೊಳ್ಳಬೇಡಿರಿ.

وَإِذَا رَأَيْتَ الَّذِينَ يَخُوضُونَ فِيٓ آيَاتِنَا فَأَعْرِضْ عَنْهُمْ حَتَّىٰ يَخُوضُوا فِي حَدِيثٍ غَيْرِهِ ۚ وَإِمَّا يُنسِيَنَّكَ الشَّيْطَانُ فَلَا تَقْعُدْ بَعْدَ الذِّكْرَىٰ مَعَ الْقَوْمِ الظَّالِمِينَ ﴿٦٨﴾

69. ಅವರ ಲೆಕ್ಕದಲ್ಲಿರುವ ಯಾವ ವಿಷಯದ ಹೊಣೆಗಾರಿಕೆಯೂ ಧರ್ಮನಿಷ್ಠರ ಮೇಲಿಲ್ಲ. ಆದರೆ ಅವರು ಅಪರಾಧ ನೀತಿಯಿಂದ ದೂರ ಸರಿಯಬಹುದೆಂದುಕೊಂಡು ಉಪದೇಶ ಮಾಡುವುದು ಅವರ ಕರ್ತವ್ಯವಾಗಿದೆ.

وَمَا عَلَى الَّذِينَ يَتَّقُونَ مِنْ حِسَابِهِم مِّن شَيْءٍ وَلَٰكِن ذِكْرَىٰ لَعَلَّهُمْ يَتَّقُونَ ﴿٦٩﴾

70. ತಮ್ಮ 'ಧರ್ಮ'ವನ್ನು ಆಟ-ವಿನೋದಗಳನ್ನಾಗಿ ಮಾಡಿಕೊಂಡವರನ್ನೂ ಇಹಜೀವನದಿಂದಾಗಿ ವಂಚನೆಗೊಳಗಾದವರನ್ನೂ ಬಿಟ್ಟು

وَذَرِ الَّذِينَ اتَّخَذُوا دِينَهُمْ لَعِبًا وَلَهْوًا وَغَرَّتْهُمُ الْحَيَاةُ الدُّنْيَا ۚ وَذَكِّرْ بِهِ

16. ಅರ್ಥಾತ್- ನೀವು ನೋಡದೆ ಇರುವುದನ್ನು ಬಲವಂತದಿಂದ ನಿಮಗೆ ತೋರಿಸುವುದು ಅಥವಾ ನೀವು ತಿಳಿಯದೇ ಇರುವುದನ್ನು ಒತ್ತಾಯಪೂರ್ವಕ ತಿಳಿಯಪಡಿಸುವುದು ನನ್ನ ಚಾಯಮಾನವಲ್ಲ. ಅಂತೆಯೇ ನೀವು ನೋಡಿ ತಿಳಿದುಕೊಳ್ಳದಿದ್ದರೆ ನಿಮ್ಮ ಮೇಲೆ ಯಾತನೆ ಎರಗುವಂತೆ ಮಾಡುವುದೂ ನನ್ನ ಕೆಲಸವಲ್ಲ.

ಬಿಡಿರಿ. ಆದರೆ ಈ ಕುರ್‌ಆನನ್ನು ಕೇಳಿಸುತ್ತಾ, ಯಾರೂ ತನ್ನ ಸ್ವಂತ ಕರ್ಮದ ಫಲವಾಗಿ ವಿಪತ್ತಿಗೆ ಸಿಲುಕದಂತೆ ಬೋಧನೆ ಮತ್ತು ಎಚ್ಚರಿಕೆ ನೀಡಿರಿ. ಹಾಗೆ ಸಿಲುಕಿಕೊಂಡಾಗ ಅವನನ್ನು ಅಲ್ಲಾಹನಿಂದ ರಕ್ಷಿಸುವ ಯಾವ ರಕ್ಷಕಮಿತ್ರನೂ ಶಿಫಾರಸು ದಾರನೂ ಇರಲಾರನು. ಅವನು ತನಗೆ ಸಾಧ್ಯವಿರುವ ಎಲ್ಲವನ್ನೂ ಪರಿಹಾರವಾಗಿ ಕೊಟ್ಟು ಬಿಡುಗಡೆಗೊಳ್ಳಬಯಸಿದರೆ ಅದನ್ನೂ ಅವನಿಂದ ಸ್ವೀಕರಿಸಲಾಗದು. ಏಕೆಂದರೆ ಇಂಥವರು ತಮ್ಮ ಸ್ವಂತ ಗಳಿಕೆಯ ಫಲವಾಗಿ ಹಿಡಿಯಲ್ಪಡುವರು. ಅವರಿಗೆ ಅವರ ಸತ್ಯಧಿಕ್ಕಾರದ ಪ್ರತಿಫಲವಾಗಿ ಕುದಿಯುತ್ತಿರುವ ನೀರು ಕುಡಿಯ ಲಿಕ್ಕೂ ವೇದನಾಯುಕ್ತ ಯಾತನೆ ಅನುಭವಿಸಲಿಕ್ಕೂ ಸಿಗುವುದು.

أَنْ تُبْسَلَ نَفْسٌ بِمَا كَسَبَتْ لَيْسَ لَهَا
مِنْ دُوْنِ اللّٰهِ وَلِيٌّ وَّلَا شَفِيْعٌ وَاِنْ
تَعْدِلْ كُلَّ عَدْلٍ لَّا يُؤْخَذْ مِنْهَا اُولٰٓئِكَ
الَّذِيْنَ اُبْسِلُوْا بِمَا كَسَبُوْا لَهُمْ شَرَابٌ
مِّنْ حَمِيْمٍ وَّعَذَابٌ اَلِيْمٌ بِمَا
كَانُوْا يَكْفُرُوْنَ ﴿٧٠﴾ ع

71. ಓ ಪೈಗಂಬರರೇ, ಅವರೊಡನೆ ಕೇಳಿರಿ:- ನಾವು ಅಲ್ಲಾಹನನ್ನು ಬಿಟ್ಟು, ನಮಗೆ ಲಾಭವನ್ನಾಗಲಿ, ನಷ್ಟವನ್ನಾಗಲಿ ಉಂಟು ಮಾಡಲಾಗದವರನ್ನು ಕರೆದು ಪ್ರಾರ್ಥಿಸಬೇಕೇ? ಅಲ್ಲಾಹನು ನಮಗೆ ನೇರ ಮಾರ್ಗವನ್ನು ತೋರಿಸಿರುವಾಗ ನಾವೀಗ ಹಿಂದಕ್ಕೆ ಮರಳಬೇಕೇ? ನಾವು ನಮ್ಮ ಸ್ಥಿತಿಯನ್ನು ಮರುಭೂಮಿಯಲ್ಲಿ ಶೈತಾನರಿಂದ ದಾರಿಗೆಡಿಸಲ್ಪಟ್ಟು "ಇತ್ತ ಬಾ, ಸನ್ಮಾರ್ಗ ಇಲ್ಲಿದೆ" ಎಂದು ತನ್ನ ಸಂಗಡಿಗರು ಕರೆಯುತ್ತಿದ್ದರೂ ಪರಿಭ್ರಾಂತನಾಗಿ ಅಲೆದಾಡುತ್ತಿರುವ ವ್ಯಕ್ತಿಯಂತೆ ಮಾಡಿಕೊಳ್ಳಬೇಕೇ? ಹೇಳಿರಿ - ವಾಸ್ತವದಲ್ಲಿ ಸರಿಯಾದ ಮಾರ್ಗದರ್ಶನವು ಕೇವಲ ಅಲ್ಲಾಹನ ಮಾರ್ಗದರ್ಶನವಾಗಿದೆ. "ವಿಶ್ವದೊಡೆಯನ ಮುಂದೆ ದಾಸ್ಯ-ಅನುಸರಣೆಯೊಂದಿಗೆ ಶಿರಬಾಗಿರಿ,

قُلْ اَنَدْعُوْا مِنْ دُوْنِ اللّٰهِ مَا لَا يَنْفَعُنَا
وَلَا يَضُرُّنَا وَنُرَدُّ عَلٰٓى اَعْقَابِنَا بَعْدَ اِذْ
هَدٰىنَا اللّٰهُ كَالَّذِى اسْتَهْوَتْهُ الشَّيٰطِيْنُ
فِى الْاَرْضِ حَيْرَانَ لَهٗٓ اَصْحٰبٌ يَّدْعُوْنَهٗٓ
اِلَى الْهُدَى ائْتِنَا قُلْ اِنَّ هُدَى اللّٰهِ
هُوَ الْهُدٰى وَاُمِرْنَا لِنُسْلِمَ لِرَبِّ الْعٰلَمِيْنَ ﴿٧١﴾

72. ನಮಾಝುನ್ನು ಸಂಸ್ಥಾಪಿಸಿರಿ ಮತ್ತು ಅವನ ಆಜ್ಞೋಲ್ಲಂಘನೆ ಯಿಂದ ದೂರವಿರಿ. ನೀವು ಅವನ ಕಡೆಗೇ ಒಟ್ಟುಗೂಡಿಸಲ್ಪಡುವಿರಿ" ಎಂದು ನಮಗೆ ಅವನ ಕಡೆಯಿಂದ ಆದೇಶ ಸಿಕ್ಕಿರುತ್ತದೆ.

وَاَنْ اَقِيْمُوا الصَّلٰوةَ وَاتَّقُوْهُ وَهُوَ
الَّذِىٓ اِلَيْهِ تُحْشَرُوْنَ ﴿٧٢﴾

73. ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿದವನು ಅವನೇ.[17]

وَهُوَ الَّذِىْ خَلَقَ السَّمٰوٰتِ وَالْاَرْضَ

17. ಅಲ್ಲಾಹನು ಭೂಮಿ-ಆಕಾಶಗಳನ್ನು ಸತ್ಯದೊಂದಿಗೆ ಸೃಷ್ಟಿಸಿದ್ದಾನೆ ಅಥವಾ ದಿಟವಾಗಿ ಸೃಷ್ಟಿಸಿದ್ದಾನೆ ಎಂಬ ಉಲ್ಲೇಖ ಕುರ್‌ಆನಿನಲ್ಲಿ ಅಲ್ಲಲ್ಲಿ ಬಂದಿದೆ. ಅರ್ಥಾತ್, ಭೂಮಿ-ಆಕಾಶಗಳನ್ನು ಕೇವಲ ಆಟ-ವಿನೋದಗಳಿಗಾಗಿ ಸೃಷ್ಟಿಸಲಾಗಿಲ್ಲ. ಮನಸ್ಸಿಗೆ ಬಂದಷ್ಟು ಹೊತ್ತು ಆಟವಾಡಿ ಅನಂತರ ಮುರಿದು ಬಿಸಾಕುವಂತಹ ಮಕ್ಕಳ ಆಟಿಕೆ ಇದಲ್ಲ. ಇದು ಯುಕ್ತಿಪೂರ್ಣವಾದ ಗಂಭೀರತೆಯಿಂದ ಕೂಡಿದ ಒಂದು ಕೆಲಸವಾಗಿದೆ. ಇದರ ಹಿಂದೆ ಒಂದು ಮಹದುದ್ದೇಶವಿದೆ. ಅದರ ಒಂದು ಘಟ್ಟ ಕಳೆದ ಬಳಿಕ ನಿಸರ್ಗದ ಸೃಷ್ಟಿಕರ್ತ ಅದರ ಪರಿಶೀಲನೆ ನಡೆಸುವುದು ಅನಿವಾರ್ಯವಾಗುತ್ತದೆ. ಅದರ ಪರಿಣಾಮದ ಆಧಾರದಲ್ಲೇ ಮತ್ತೊಂದು ಯುಗಕ್ಕೆ ಬುನಾದಿ ಹಾಕಲಾಗುತ್ತದೆ. ಅಲ್ಲಾಹನು ನಿಸರ್ಗದ ಸಂಪೂರ್ಣ ವ್ಯವಸ್ಥೆಯನ್ನು ಸತ್ಯದ ಭದ್ರ ಬುನಾದಿಗಳೊಂದಿಗೆ ಸೃಷ್ಟಿಸಿದ್ದಾನೆಂಬುದು ಇದರ ಇನ್ನೊಂದು ಅರ್ಥ. ಅದರಲ್ಲಿನ ಪ್ರತಿಯೊಂದು ವಸ್ತುವೂ ನ್ಯಾಯ, ಯುಕ್ತಿ ಮತ್ತು ಸತ್ಯದ ನಿಯಮಗಳಿಗೆ ಬದ್ಧವಾಗಿದೆ. ಮಿಥ್ಯ ವ್ಯವಸ್ಥೆಗೆ ಇಲ್ಲಿ ಬೇರೂರಿ

ಪುನರುತ್ಥಾನವಾಗಬೇಕೆಂದು ಅವನು ಎಂದು ಹೇಳುವನೋ ಅಂದೇ ಅದು ಸಂಭವಿಸುವುದು. ಅವನ ಅಪ್ಪಣೆಯು ಪರಮ ಸತ್ಯ. ಸೂರ್(ಕಹಳೆ) ಊದಲ್ಪಡುವಂದು ಸಾರ್ವಭೌಮತೆ ಅವನದ್ದೇ ಆಗಿರುವುದು. ಅವನು ಪರೋಕ್ಷ ಮತ್ತು ಪ್ರತ್ಯಕ್ಷ ಜ್ಞಾನಿ,[18] ಧೀಮಂತ ಮತ್ತು ಸೂಕ್ಷ್ಮಜ್ಞನು.

بِالْحَقِّ ۖ وَيَوْمَ يَقُولُ كُن فَيَكُونُ ۚ قَوْلُهُ
الْحَقُّ ۚ وَلَهُ الْمُلْكُ يَوْمَ يُنفَخُ فِي الصُّورِ ۚ
عَالِمُ الْغَيْبِ وَالشَّهَادَةِ ۚ وَهُوَ الْحَكِيمُ الْخَبِيرُ ﴿٧٣﴾

74. ಇಬ್‌ರಾಹೀಮ್ ತನ್ನ ತಂದೆ ಆಝರರನೊಡನೆ, "ನೀವು ವಿಗ್ರಹಗಳನ್ನು ದೇವರನ್ನಾಗಿ ಮಾಡುತ್ತೀರಾ? ನಾನಂತು ನಿಮ್ಮನ್ನೂ ನಿಮ್ಮ ಜನಾಂಗವನ್ನೂ ವ್ಯಕ್ತವಾದ ಪಥಭ್ರಷ್ಟತೆಯಲ್ಲಿ ಕಾಣುತ್ತಿರುವೆನು" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ.

وَإِذْ قَالَ إِبْرَاهِيمُ لِأَبِيهِ آزَرَ أَتَتَّخِذُ
أَصْنَامًا آلِهَةً ۖ إِنِّي أَرَاكَ وَقَوْمَكَ
فِي ضَلَالٍ مُّبِينٍ ﴿٧٤﴾

75. ನಾವು ಇಬ್‌ರಾಹೀಮರಿಗೆ ಇದೇ ರೀತಿಯಲ್ಲಿ ಭೂಮಿ-ಆಕಾಶಗಳ ಸಾಮ್ರಾಜ್ಯ ವ್ಯವಸ್ಥೆಯನ್ನು ತೋರಿಸಿಕೊಡುತ್ತಿದ್ದೆವು, ಅವರು ದೃಢವಿಶ್ವಾಸವುಳ್ಳವರಲ್ಲಾಗಬೇಕೆಂದು.

وَكَذَٰلِكَ نُرِي إِبْرَاهِيمَ مَلَكُوتَ السَّمَاوَاتِ
وَالْأَرْضِ وَلِيَكُونَ مِنَ الْمُوقِنِينَ ﴿٧٥﴾

76. ಒಮ್ಮೆ ರಾತ್ರಿ ಕಾಲವು ಅವರನ್ನಾವರಿಸಿದಾಗ ಅವರೊಂದು ನಕ್ಷತ್ರವನ್ನು ಕಂಡರು. "ಇದು ನನ್ನ ಪ್ರಭು" ಎಂದರು. ಆದರೆ ಅದು ಅಸ್ತಮಿಸಿದಾಗ, "ನಾನು ಅಸ್ತಮಿಸುವವರಿಗೆ ಮಾರು ಹೋಗುವುದಿಲ್ಲ" ಎಂದರು.

فَلَمَّا جَنَّ عَلَيْهِ اللَّيْلُ رَأَىٰ كَوْكَبًا ۖ قَالَ هَٰذَا
رَبِّي ۖ فَلَمَّا أَفَلَ قَالَ لَا أُحِبُّ الْآفِلِينَ ﴿٧٦﴾

77. ಅನಂತರ ಚಂದ್ರನು ಪ್ರಕಾಶಿಸುತ್ತಿರುವುದು ಕಂಡಾಗ, "ಇದು ನನ್ನ ಪ್ರಭು" ಎಂದರು. ಆದರೆ ಅದೂ ಮುಳುಗಿದಾಗ, "ನನ್ನ ಪ್ರಭು ನನಗೆ ಮಾರ್ಗದರ್ಶನವನ್ನೀಯದಿರುತ್ತಿದ್ದರೆ ನಾನೂ ಪಥಭ್ರಷ್ಟರಲ್ಲಾಗುತ್ತಿದ್ದೆ" ಎಂದರು.

فَلَمَّا رَأَى الْقَمَرَ بَازِغًا قَالَ هَٰذَا رَبِّي ۖ
فَلَمَّا أَفَلَ قَالَ لَئِن لَّمْ يَهْدِنِي رَبِّي
لَأَكُونَنَّ مِنَ الْقَوْمِ الضَّالِّينَ ﴿٧٧﴾

78. ತರುವಾಯ ಸೂರ್ಯನನ್ನು ಪ್ರಕಾಶಮಯವಾಗಿ ಕಂಡು, "ಇದೇ ನನ್ನ ಪ್ರಭು; ಇದು ಎಲ್ಲಕ್ಕಿಂತಲೂ ದೊಡ್ಡದಾಗಿದೆ" ಎಂದರು.

فَلَمَّا رَأَى الشَّمْسَ بَازِغَةً قَالَ هَٰذَا رَبِّي

ಬೆಳೆಯಲು ಆಸ್ಪದವೇ ಇಲ್ಲ. ಮಿಥ್ಯ ವ್ಯವಸ್ಥೆಯ ವಾಹಕರಿಗೆ ಅಲ್ಲಾಹನು ಒಂದು ಅವಕಾಶವನ್ನು ಕರುಣಿಸಿದರೆ ಬೇರೆ ವಿಷಯ. ಅವರು ತಮ್ಮ ಮಿಥ್ಯ, ಅಕ್ರಮ ಮತ್ತು ದುರ್ಮಾರ್ಗಗಳನ್ನು ಬೆಳೆಸಲು ಸಾಧ್ಯವೇ ಎಂದು ಪ್ರಯತ್ನಿಸಿ ನೋಡಲಿ. ಕೊನೆಗೊಂದು ದಿನ ಭೂಮಿಯು ತನ್ನೊಳಗೆ ಹುದುಗಿರುವ ಮಿಥ್ಯದ ಪ್ರತಿಯೊಂದು ಬೀಜವನ್ನೂ ಕಿತ್ತೆಸೆಯುವುದು. ಈ ಪೈಶಾಚಿಕ ವೃಕ್ಷದ ಪೋಷಣೆ ಮತ್ತು ನೀರಾವರಿಗೆ ನಾನು ಮಾಡಿದ ಪ್ರಯತ್ನವೆಲ್ಲವೂ ವ್ಯಥಾ ನಷ್ಟವಾಯಿತು, ಎಂದು ಕೊನೆಗೆ ಪ್ರತಿಯೊಬ್ಬ ಮಿಥ್ಯದ ವಾಹಕನಿಗೂ ತೋರದೆ ಇರಲಾರದು. ಇದರ ಮೂರನೆಯ ಅರ್ಥವೇನೆಂದರೆ ದೇವನು ಸಕಲ ನಿಸರ್ಗವನ್ನು ಸತ್ಯದ ಆಧಾರದಲ್ಲೇ ಸೃಷ್ಟಿಸಿದ್ದಾನೆ. ತನಗೆ ಅದರ ಮೇಲಿರುವ ಹಕ್ಕಿನ ಆಧಾರದಲ್ಲಿ ಅವನು ಅದನ್ನು ಪರಿಪಾಲಿಸುತ್ತಿದ್ದಾನೆ. ಅವನು ಮಾತ್ರ ತಾನು ಸೃಷ್ಟಿಸಿರುವ ನಿಸರ್ಗದ ಮೇಲೆ ಅಧಿಕಾರ ಹೊಂದಿರುವುದರಿಂದ ಇಲ್ಲಿ ಅವನ ಆಜ್ಞೆಯಷ್ಟೇ ಪಾಲಿಸಲ್ಪಡುತ್ತದೆ. ಬೇರಾರಿಗೂ ಇಲ್ಲಿ ಆಜ್ಞಾಧಿಕಾರವಿಲ್ಲ.

18. ಗೈಬ್: (ಪರೋಕ್ಷ): ಅರ್ಥಾತ್ ಸೃಷ್ಟಿಗಳಿಂದ ಮರೆಯಾಗಿರುವ ಎಲ್ಲಾ ವಿಷಯಗಳು. ಶಹಾದತ್(ಪ್ರತ್ಯಕ್ಷ) : ಎಲ್ಲಾ ಸೃಷ್ಟಿಗಳಿಗೂ ಗೋಚರಿಸುವ ಸುವ್ಯಕ್ತ ವಿಷಯಗಳು.

هٰذَآ اَكۡبَرُ ۚ فَلَمَّآ اَفَلَتۡ قَالَ يٰقَوۡمِ
اِنِّىۡ بَرِىۡٓءٌ مِّمَّا تُشۡرِكُوۡنَ ٧٨

ಆದರೆ ಅದೂ ಅಸ್ತಮಿಸಿದಾಗ ಇಬ್‌ರಾಹೀಮರು ಉದ್ಗರಿಸಿದರು:- "ಓ ನನ್ನ ಜನಾಂಗಬಾಂಧವರೇ, ನೀವು ದೇವನ ಸಹಭಾಗಿಯಾಗಿಸುವವುಗಳಿಂದೆಲ್ಲ ನಾನು ವಿರಕ್ತನು.[19]

اِنِّىۡ وَجَّهۡتُ وَجۡهِىَ لِلَّذِىۡ فَطَرَ السَّمٰوٰتِ
وَالۡاَرۡضَ حَنِيۡفًا وَّمَاۤ اَنَا مِنَ الۡمُشۡرِكِيۡنَ ٧٩

79. ನಾನು ಏಕನಿಷ್ಠೆಯಿಂದ ನನ್ನ ಮುಖವನ್ನು ಭೂಮಿ-ಆಕಾಶಗಳನ್ನು ಸೃಷ್ಟಿಸಿದವನ ಕಡೆಗೆ ತಿರುಗಿಸಿದೆನು. ನಾನು ಎಷ್ಟು ಮಾತ್ರಕ್ಕೂ ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿ ಮಾಡುವವರಲ್ಲಿ ಸೇರಿದವನಲ್ಲ."

وَحَآجَّهٗ قَوۡمُهٗ ؕ قَالَ اَتُحَآجُّوۡٓنِّىۡ فِى اللّٰهِ
وَقَدۡ هَدٰٮنِ ؕ وَلَاۤ اَخَافُ مَا تُشۡرِكُوۡنَ
بِهٖۤ اِلَّاۤ اَنۡ يَّشَآءَ رَبِّىۡ شَيۡـًٔـا ؕ وَسِعَ رَبِّىۡ
كُلَّ شَىۡءٍ عِلۡمًا ؕ اَفَلَا تَتَذَكَّرُوۡنَ ٨٠

80. ಅವರ ಜನಾಂಗವು ಅವರೊಂದಿಗೆ ಜಗಳಾಡತೊಡಗಿದಾಗ ಅವರು ಆ ಜನಾಂಗದೊಡನೆ, "ನೀವು ಅಲ್ಲಾಹನ ವಿಷಯದಲ್ಲಿ ನನ್ನೊಡನೆ ಜಗಳಾಡುತ್ತೀರಾ? ವಸ್ತುತಃ ಅಲ್ಲಾಹನು ನನಗೆ ಸನ್ಮಾರ್ಗದರ್ಶನ ಮಾಡಿರುತ್ತಾನೆ ಮತ್ತು ನೀವು (ಅಲ್ಲಾಹನೊಂದಿಗೆ) ಸಹಭಾಗಿಗಳನ್ನಾಗಿರಿಸಿಕೊಂಡವರನ್ನು ನಾನು ಭಯಪಡುವುದಿಲ್ಲ. ನನ್ನ ಪ್ರಭು ಇಚ್ಛಿಸಿದುದು ಮಾತ್ರ ಆಗಲು ಸಾಧ್ಯವಿದೆ. ನನ್ನ ಪ್ರಭುವಿನ ಜ್ಞಾನವು ಪ್ರತಿಯೊಂದು ವಸ್ತುವನ್ನಾವರಿಸಿಕೊಂಡಿದೆ. ಇನ್ನೇನು ನೀವು ಎಚ್ಚರಗೊಳ್ಳಲಾರಿರಾ?[20]

وَكَيۡفَ اَخَافُ مَاۤ اَشۡرَكۡتُمۡ وَلَا تَخَافُوۡنَ
اَنَّكُمۡ اَشۡرَكۡتُمۡ بِاللّٰهِ مَا لَمۡ يُنَزِّلۡ بِهٖ
عَلَيۡكُمۡ سُلۡطٰنًا ؕ فَاَىُّ الۡفَرِيۡقَيۡنِ اَحَقُّ
بِالۡاَمۡنِ ۚ اِنۡ كُنۡتُمۡ تَعۡلَمُوۡنَ ۘ ٨١

81. ಅಲ್ಲಾಹನು ಯಾವ ಆಧಾರ ಪ್ರಮಾಣವನ್ನೂ ಇಳಿಸದ ವಸ್ತುಗಳನ್ನು ಅಲ್ಲಾಹನೊಂದಿಗೆ ದೇವತ್ವದಲ್ಲಿ ಸಹಭಾಗಿಗಳನ್ನಾಗಿ ಮಾಡಲು ನೀವು ಭಯಪಡುವುದಿಲ್ಲ. ಹೀಗಿರುತ್ತ ನೀವು ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿಸಿದವುಗಳನ್ನು ನಾನೇಕೆ ಭಯಪಡಲಿ? ನಮ್ಮೆರಡು ಪಂಗಡಗಳ ಪೈಕಿ ಹೆಚ್ಚು ನಿರ್ಭಯತೆ ಮತ್ತು ಮನಶ್ಶಾಂತಿಗೆ ಅರ್ಹರು ಯಾರು? ನೀವು ಬಲ್ಲವರಾಗಿದ್ದರೆ ಹೇಳಿರಿ.

اَلَّذِيۡنَ اٰمَنُوۡا وَلَمۡ يَلۡبِسُوۡۤا اِيۡمَانَهُمۡ بِظُلۡمٍ
اُولٰۤـئِكَ لَهُمُ الۡاَمۡنُ وَهُمۡ مُّهۡتَدُوۡنَ ٨٢

82. ವಾಸ್ತವದಲ್ಲಿ ಯಾರು ವಿಶ್ವಾಸವಿಟ್ಟು ತಮ್ಮ ವಿಶ್ವಾಸವನ್ನು ಅಕ್ರಮದೊಂದಿಗೆ ಕಲುಷಿತ ಗೊಳಿಸದಿರುವರೋ ಅವರಿಗೇ ಶಾಂತಿ ಇದೆ ಮತ್ತು ಅವರು ಮಾತ್ರ ಸನ್ಮಾರ್ಗದಲ್ಲಿರುತ್ತಾರೆ."

19. ಇಲ್ಲಿ ಹ. ಇಬ್‌ರಾಹೀಮ್‌ರನ್ನು(ಅ) ಅವರ ಪ್ರವಾದಿತ್ವಕ್ಕೆ ಮೊದಲು ವಾಸ್ತವಿಕತೆಯೆಡೆಗೆ ತಲುಪಲು ಕಾರಣವಾದ ಅವರ ಆರಂಭದ ಚಿಂತನಾಶೈಲಿಯನ್ನು ಪ್ರಸ್ತಾಪಿಸಲಾಗಿದೆ. ಎಲ್ಲೆಡೆಯೂ ಬಹುದೇವಾರಾಧನೆಯೇ ಆವರಿಸಿಕೊಂಡಿರುವ ವಾತಾವರಣದಲ್ಲಿ ಜನಿಸಿದ, ಬುದ್ಧಿಸ್ತಿಮಿತದಲ್ಲಿರುವ ವಿಚಾರ ಪೂರ್ಣವಾದ ಓರ್ವ ವ್ಯಕ್ತಿ ನಿಸರ್ಗದ ದೃಷ್ಟಾಂತಗಳನ್ನು ನೋಡಿ ಅವುಗಳ ಬಗ್ಗೆ ಸರಿಯಾದ ಚಿಂತನೆ ನಡೆಸಿ ವಾಸ್ತವಿಕತೆಯನ್ನು ಅರಿಯುವಲ್ಲಿ ಸಫಲನಾದ ರೀತಿಯನ್ನು ಇಲ್ಲಿ ವರ್ಣಿಸಲಾಗಿದೆ.

20. ಮೂಲದಲ್ಲಿ 'ತದಕ್ಕುರ್' ಎಂಬ ಪದ ಪ್ರಯೋಗವಾಗಿದೆ. ಅರ್ಥಾತ್ ಅಲಕ್ಷ್ಯ ಮತ್ತು ಮರೆಗುಳಿತನಕ್ಕೆ ಈಡಾಗಿರುವ ವ್ಯಕ್ತಿ ಜಾಗೃತನಾಗಿ ತಾನು ಅಲಕ್ಷ್ಯವಾಗಿರುವುದು ಯಾವುದರ ಬಗ್ಗೆ ಎಂದು ತಿಳಿದುಕೊಳ್ಳುವುದಾಗಿದೆ. ಆದ್ದರಿಂದ 'ಅಫಲಾ ತದಕ್ಕರೂನ್' ಎಂಬುದನ್ನು ನಾವು 'ನೀವು ಎಚ್ಚರಗೊಳ್ಳಲಾರಿರಾ?' ಎಂದು ಅನುವಾದಿಸಿದ್ದೇವೆ.

83. ನಾವು ಇಬ್‌ರಾಹೀಮರಿಗೆ ಅವರ ಜನಾಂಗದೆದುರು ದಯ ಪಾಲಿಸಿದ್ದ ಆಧಾರ ಪ್ರಮಾಣ ಇದೇ ಆಗಿತ್ತು. ನಾವು ನಮಗಿಷ್ಟ ಬಂದವರಿಗೆ ಉನ್ನತ ಪದವಿಗಳನ್ನು ದಯಪಾಲಿಸುತ್ತೇವೆ. ವಾಸ್ತವದಲ್ಲಿ ನಿಮ್ಮ ಪ್ರಭು ಪರಮ ಧೀಮಂತನೂ ಸರ್ವಜ್ಞನೂ ಆಗಿರುತ್ತಾನೆ.

وَتِلْكَ حُجَّتُنَآ اٰتَيْنٰهَآ اِبْرٰهِيْمَ عَلٰى قَوْمِهٖ ؕ
نَرْفَعُ دَرَجٰتٍ مَّنْ نَّشَآءُ ؕ اِنَّ رَبَّكَ
حَكِيْمٌ عَلِيْمٌ ﴿۸۳﴾

84. ಮುಂದೆ ನಾವು ಇಬ್‌ರಾಹೀಮರಿಗೆ ಇಸ್‌ಹಾಕ್ ಮತ್ತು ಯಅ್‌ಕೂಬರಂಥ ಸಂತತಿಗಳನ್ನು ನೀಡಿದೆವು. ಪ್ರತಿಯೊಬ್ಬರಿಗೂ ಸನ್ಮಾರ್ಗದರ್ಶನ ಮಾಡಿದೆವು. ಅದಕ್ಕಿಂತ ಮುಂಚೆ ನೂಹರಿಗೆ ತೋರಿಸಿದ್ದ (ಮಾರ್ಗವೇ ಅದಾಗಿತ್ತು) ಮತ್ತು ಅವರದೇ ಪೀಳಿಗೆಯಿಂದ ನಾವು ದಾವೂದ್, ಸುಲೈಮಾನ್, ಅಯ್ಯೂಬ್, ಯೂಸುಫ್, ಮೂಸಾ ಮತ್ತು ಹಾರೂನರಿಗೆ (ಸನ್ಮಾರ್ಗ ನೀಡಿದೆವು.) ಈ ರೀತಿ ನಾವು ಸಜ್ಜನರಿಗೆ ಅವರ ಸತ್ಕರ್ಮದ ಫಲ ನೀಡುತ್ತೇವೆ.

وَوَهَبْنَا لَهٗۤ اِسْحٰقَ وَيَعْقُوْبَ ؕ كُلًّا هَدَيْنَا ۚ
وَنُوْحًا هَدَيْنَا مِنْ قَبْلُ وَمِنْ ذُرِّيَّتِهٖ
دَاوٗدَ وَسُلَيْمٰنَ وَاَيُّوْبَ وَيُوْسُفَ وَمُوْسٰى
وَهٰرُوْنَ ؕ وَكَذٰلِكَ نَجْزِى الْمُحْسِنِيْنَ ﴿۸۴﴾

85. (ಅವರ ವಂಶದಿಂದಲೇ) ಝಕರಿಯ್ಯಾ, ಯಹ್ಯಾ, ಈಸಾ ಮತ್ತು ಇಲ್ಯಾಸರಿಗೆ (ಮಾರ್ಗದರ್ಶನ ಮಾಡಿದೆವು.) ಅವರೆಲ್ಲರೂ ಸಜ್ಜನರಾಗಿದ್ದರು.

وَزَكَرِيَّا وَيَحْيٰى وَعِيْسٰى وَاِلْيَاسَ ؕ كُلٌّ
مِّنَ الصّٰلِحِيْنَ ﴿۸۵﴾

86. (ಅವರದೇ ಸಂತಾನದಿಂದ) ಇಸ್ಮಾಈಲ್, ಅಲ್‌ಯಸಅ್, ಯೂನುಸ್ ಮತ್ತು ಲೂತರಿಗೆ (ಸನ್ಮಾರ್ಗದರ್ಶನ ಮಾಡಿದೆವು). ಅವರಲ್ಲಿ ಪ್ರತಿಯೊಬ್ಬರಿಗೆ ನಾವು ಸಕಲ ಜಗತ್ತಿನವರ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದೆವು.

وَاِسْمٰعِيْلَ وَالْيَسَعَ وَيُوْنُسَ وَلُوْطًا ؕ وَ
كُلًّا فَضَّلْنَا عَلَى الْعٰلَمِيْنَ ﴿۸۶﴾

87. ಮಾತ್ರವಲ್ಲದೆ ಅವರ ಪೂರ್ವಜರು, ಅವರ ಮಕ್ಕಳು ಮತ್ತು ಅವರ ಬಂಧುಬಳಗದವರಲ್ಲಿ ಅನೇಕರನ್ನು ನಾವು ಅನುಗ್ರಹಿಸಿದೆವು. ಅವರನ್ನು ನಮ್ಮ ಸೇವೆಗಾಗಿ ಆಯ್ದುಕೊಂಡೆವು ಮತ್ತು ಅವರಿಗೆ ಸನ್ಮಾರ್ಗದರ್ಶನ ನೀಡಿದೆವು.

وَمِنْ اٰبَآئِهِمْ وَذُرِّيّٰتِهِمْ وَاِخْوَانِهِمْ ۚ
وَاجْتَبَيْنٰهُمْ وَهَدَيْنٰهُمْ اِلٰى صِرَاطٍ مُّسْتَقِيْمٍ ﴿۸۷﴾

88. ಅಲ್ಲಾಹನ ಮಾರ್ಗದರ್ಶನವಿದು. ತನ್ಮೂಲಕ ಅವನು ತನ್ನ ದಾಸರ ಪೈಕಿ ತನಗಿಷ್ಟ ಬಂದವರಿಗೆ ಸನ್ಮಾರ್ಗದರ್ಶನ ಮಾಡುತ್ತಾನೆ. ಆದರೆ, ಅವರೆಲ್ಲಾದರೂ 'ದೇವ ಸಹಭಾಗಿತ್ವ' ಮಾಡುತ್ತಿದ್ದರೆ ಅವರು ಮಾಡಿದ್ದೆಲ್ಲ ವ್ಯರ್ಥವಾಗುತ್ತಿತ್ತು.

ذٰلِكَ هُدَى اللّٰهِ يَهْدِيْ بِهٖ مَنْ يَّشَآءُ
مِنْ عِبَادِهٖ ؕ وَلَوْ اَشْرَكُوْا لَحَبِطَ عَنْهُمْ
مَّا كَانُوْا يَعْمَلُوْنَ ﴿۸۸﴾

89. ಅವರನ್ನೇ ನಾವು ಗ್ರಂಥ, ಹುಕ್ಮ್ (ಶಾಸನಾಧಿಕಾರ) ಮತ್ತು

اُولٰٓئِكَ الَّذِيْنَ اٰتَيْنٰهُمُ الْكِتٰبَ وَالْحُكْمَ

ಪ್ರವಾದಿತ್ವ ನೀಡಿ ಅನುಗ್ರಹಿಸಿದ್ದೆವು.[21] ಇದೀಗ ಇವರು ಇದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವವರಾದರೆ, (ಚಿಂತಿಲ್ಲ) ನಾವು ಈ 'ಭವ್ಯ ಕೊಡುಗೆ'ಯನ್ನು, ಅದನ್ನು ನಿರಾಕರಿಸದ ಇತರ ಕೆಲವರಿಗೆ ಒಪ್ಪಿಸಿದ್ದೇವೆ.

وَالنُّبُوَّةَ ۚ فَإِنْ يَكْفُرْ بِهَا هَٰؤُلَاءِ فَقَدْ
وَكَّلْنَا بِهَا قَوْمًا لَيْسُوا بِهَا بِكَافِرِينَ ﴿٨٩﴾

90. ಓ ಪೈಗಂಬರರೇ ಅವರೇ ಅಲ್ಲಾಹನ ವತಿಯಿಂದ ಸನ್ಮಾರ್ಗ ಹೊಂದಿದವರಾಗಿದ್ದರು. ನೀವು ಅವರ ಮಾರ್ಗದಲ್ಲೇ ನಡೆಯಿರಿ ಮತ್ತು "ನಾನು (ಧರ್ಮಪ್ರಚಾರ ಮತ್ತು ಸನ್ಮಾರ್ಗದರ್ಶನದ) ಈ ಕಾರ್ಯಕ್ಕಾಗಿ ನಿಮ್ಮಿಂದ ಯಾವುದೇ ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲ. ಇದು ಸಕಲ ಜಗತ್ತಿನವರಿಗಾಗಿರುವ ಒಂದು ಸಾರ್ವತ್ರಿಕ ಉಪದೇಶವಾಗಿರುತ್ತದೆ" ಎಂದು ಹೇಳಿರಿ.

أُولَٰئِكَ الَّذِينَ هَدَى اللَّهُ ۖ فَبِهُدَاهُمُ
اقْتَدِهْ ۗ قُلْ لَا أَسْأَلُكُمْ عَلَيْهِ أَجْرًا ۖ
إِنْ هُوَ إِلَّا ذِكْرَىٰ لِلْعَالَمِينَ ﴿٩٠﴾

91. ಇವರು ಅಲ್ಲಾಹನು ಯಾವ ಮಾನವನ ಮೇಲೂ ಏನನ್ನೂ ಅವತೀರ್ಣಗೊಳಿಸಿಲ್ಲವೆಂದು ಹೇಳುವಾಗ ಅಲ್ಲಾಹನ ಮಹಾನತೆಯನ್ನು ಚೆನ್ನಾಗಿ ಗ್ರಹಿಸಲಿಲ್ಲ. ಇವರೊಡನೆ ಕೇಳಿರಿ- ಮೂಸಾ ತಂದಿದ್ದ ಗ್ರಂಥ ಅದು ಸಕಲ ಮಾನವರಿಗಾಗಿ ಪ್ರಕಾಶವೂ ಮಾರ್ಗದರ್ಶನವೂ ಆಗಿತ್ತು. ಅದನ್ನು ನೀವು ಚೂರು ಚೂರುಗಳನ್ನಾಗಿ ಮಾಡಿಡುತ್ತೀರಿ. ಕೆಲವನ್ನು ತೋರಿಸಿ ಅಧಿಕಾಂಶವನ್ನು ಬಚ್ಚಿಡುತ್ತೀರಿ. ಅದರ ಮೂಲಕ ನೀವೂ ನಿಮ್ಮ ಪೂರ್ವಜರೂ ಅರಿತಿರದ ಜ್ಞಾನ ನಿಮಗೆ ನೀಡಲ್ಪಟ್ಟಿತ್ತು. ಅದನ್ನು ಅವತೀರ್ಣಗೊಳಿಸಿದವನಾದರೂ ಯಾರು?[22] ಅಲ್ಲಾಹ್ ಎಂದು ಮಾತ್ರ ಹೇಳಿಬಿಡಿರಿ. ಸಾಕು, ಅನಂತರ ಅವರನ್ನು ತಮ್ಮ ಕುತರ್ಕಗಳೊಂದಿಗೆ ಆಡುತ್ತಿರಲು ಬಿಡಿರಿ.

وَمَا قَدَرُوا اللَّهَ حَقَّ قَدْرِهِ إِذْ قَالُوا
مَا أَنْزَلَ اللَّهُ عَلَىٰ بَشَرٍ مِنْ شَيْءٍ ۗ قُلْ
مَنْ أَنْزَلَ الْكِتَابَ الَّذِي جَاءَ بِهِ مُوسَىٰ
نُورًا وَهُدًى لِلنَّاسِ ۖ تَجْعَلُونَهُ قَرَاطِيسَ
تُبْدُونَهَا وَتُخْفُونَ كَثِيرًا ۖ وَعُلِّمْتُمْ مَا لَمْ
تَعْلَمُوا أَنْتُمْ وَلَا آبَاؤُكُمْ ۖ قُلِ اللَّهُ ۖ
ثُمَّ ذَرْهُمْ فِي خَوْضِهِمْ يَلْعَبُونَ ﴿٩١﴾

92. (ಆ ಗ್ರಂಥದಂತೆಯೇ) ಇದು ನಾವು ಇಳಿಸಿರುವ ಇನ್ನೊಂದು ಗ್ರಂಥವಾಗಿದೆ, ಅತ್ಯಂತ ಶುಭ ಸಮೃದ್ಧಿಯುಳ್ಳದ್ದಾಗಿದೆ. ಇದಕ್ಕಿಂತ ಮುಂಚೆ ಬಂದುದನ್ನು ದೃಢೀಕರಿಸುತ್ತದೆ; ಇದರ ಮೂಲಕ

وَهَٰذَا كِتَابٌ أَنْزَلْنَاهُ مُبَارَكٌ مُصَدِّقُ
الَّذِي بَيْنَ يَدَيْهِ وَلِتُنْذِرَ أُمَّ الْقُرَىٰ

21. ಇಲ್ಲಿ ಪ್ರವಾದಿಗಳಿಗೆ ಮೂರು ವಸ್ತುಗಳನ್ನು ದಯಪಾಲಿಸಲಾದ ಪ್ರಸ್ತಾಪವಿದೆ. ಮೊದಲನೆಯದಾಗಿ ಗ್ರಂಥ ಅಥವಾ ಸನ್ಮಾರ್ಗದರ್ಶನ, ಎರಡನೆಯದಾಗಿ ಹುಕ್ಮ್ ಅರ್ಥಾತ್ ಸನ್ಮಾರ್ಗದರ್ಶನದ ಬಗ್ಗೆ ಸರಿಯಾದ ಪರಿಜ್ಞಾನ. ಅದರ ತತ್ವಗಳನ್ನು ಜೀವನದ ವ್ಯವಹಾರಗಳಿಗೆ ಅನ್ವಯಗೊಳಿಸುವ ಅರ್ಹತೆ ಮತ್ತು ಜೀವನದ ಸಮಸ್ಯೆಗಳ ಬಗ್ಗೆ ನಿರ್ಣಾಯಕ ಅಭಿಪ್ರಾಯ ತಾಳುವ ದೇವದತ್ತ ಸಾಮರ್ಥ್ಯ. ಮೂರನೆಯದಾಗಿ ಪ್ರವಾದಿತ್ವ. ಅರ್ಥಾತ್ ಸನ್ಮಾರ್ಗದರ್ಶನದ ಆಧಾರದಲ್ಲಿ ಅಲ್ಲಾಹನ ಸೃಷ್ಟಿಗಳಿಗೆ ಮಾರ್ಗದರ್ಶನ ಮಾಡುವ ಪದವಿ.

22. ಈ ಉತ್ತರವನ್ನು ಯಹೂದಿಯರಿಗೆ ನೀಡಲಾಗುತ್ತಿರುವುದರಿಂದ ಮೂಸಾರ(ಅ) ಮೇಲೆ ತೌರಾತನ್ನು ಅವತೀರ್ಣಗೊಳಿಸಿರುವುದನ್ನು ಆಧಾರ ರೂಪದಲ್ಲಿ ಸಮರ್ಪಿಸಲಾಗುತ್ತಿದೆ. ಏಕೆಂದರೆ ಅದನ್ನು ಅವರು ಸ್ವತಃ ಸಮ್ಮತಿಸುತ್ತಿದ್ದರು. ಹ. ಮೂಸಾರ(ಅ) ಮೇಲೆ ತೌರಾತ್ ಅವತೀರ್ಣಗೊಂಡಿತ್ತು ಎಂಬ ಅವರ ವಿಶ್ವಾಸವು, ದೇವನು ಯಾವುದೇ ಮನುಷ್ಯರ ಮೇಲೆ ಏನನ್ನೂ ಅವತೀರ್ಣಗೊಳಿಸಿಲ್ಲ ಎಂಬ ಅವರ ಮಾತನ್ನು ಅಲ್ಲಗಳೆಯಲು ಪರ್ಯಾಪ್ತವಿದೆ. ಕನಿಷ್ಠಪಕ್ಷ ಮನುಷ್ಯನ ಮೇಲೆ 'ದೇವವಾಣಿ' ಅವತೀರ್ಣಗೊಳ್ಳುತ್ತದೆ ಮತ್ತು ಅವತೀರ್ಣಗೊಂಡಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ.

وَمَنْ حَوْلَهَا ۚ وَالَّذِينَ يُؤْمِنُونَ بِالْآخِرَةِ
يُؤْمِنُونَ بِهِ ۖ وَهُمْ عَلَىٰ صَلَاتِهِمْ يُحَافِظُونَ ﴿٩٢﴾

ನೀವು ಈ ಕೇಂದ್ರ ನಗರ (ಅರ್ಥಾತ್ ಮಕ್ಕಾ) ಮತ್ತು ಇದರ ಸುತ್ತಮುತ್ತಲಿನ ನಿವಾಸಿಗಳಿಗೆ ಎಚ್ಚರಿಕೆ ನೀಡಲಿಕ್ಕಾಗಿ ಅವತೀರ್ಣಗೊಳಿಸಲ್ಪಟ್ಟಿರುತ್ತದೆ. ಪರಲೋಕದ ಮೇಲೆ ವಿಶ್ವಾಸವಿಡುವವರು ಈ ಗ್ರಂಥದ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಅವರು ತಮ್ಮ ನಮಾಝುನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

وَمَنْ أَظْلَمُ مِمَّنِ افْتَرَىٰ عَلَى اللَّهِ كَذِبًا
أَوْ قَالَ أُوحِيَ إِلَيَّ وَلَمْ يُوحَ إِلَيْهِ شَيْءٌ
وَمَنْ قَالَ سَأُنْزِلُ مِثْلَ مَا أَنْزَلَ اللَّهُ ۗ
وَلَوْ تَرَىٰ إِذِ الظَّالِمُونَ فِي غَمَرَاتِ الْمَوْتِ
وَالْمَلَائِكَةُ بَاسِطُو أَيْدِيهِمْ أَخْرِجُوا
أَنْفُسَكُمُ ۖ الْيَوْمَ تُجْزَوْنَ عَذَابَ الْهُونِ
بِمَا كُنْتُمْ تَقُولُونَ عَلَى اللَّهِ غَيْرَ الْحَقِّ
وَكُنْتُمْ عَنْ آيَاتِهِ تَسْتَكْبِرُونَ ﴿٩٣﴾

93. ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವನಿಗಿಂತ ಅಥವಾ ತನ್ನ ಮೇಲೆ ಯಾವುದೇ 'ದಿವ್ಯವಾಣಿ' ಅವತೀರ್ಣವಾಗಿರದಿದ್ದರೂ ನನಗೆ 'ದಿವ್ಯವಾಣಿ' ಬಂದಿದೆಯೆನ್ನುವವನಿಗಿಂತ ಅಥವಾ ಅಲ್ಲಾಹನು ಅವತೀರ್ಣಗೊಳಿಸಿರುವುದಕ್ಕೆ ಎದುರಾಗಿ ನಾನೂ ಇಂತಹದನ್ನು ಅವತೀರ್ಣಗೊಳಿಸಿ ತೋರಿಸಿ ಬಿಡುವೆನು ಎನ್ನುವವನಿಗಿಂತ ಹಿರಿಯ ಅಕ್ರಮಿ ಇನ್ನಾರಿದ್ದಾನೆ? ಅಕಟ! ನೀವು ಅಕ್ರಮಿಗಳನ್ನು, ಅವರು ಮರಣ ಸಂಕಟದಲ್ಲಿ ಮುಳುಗೇಳುತ್ತಿರುವ ಮತ್ತು ದೇವಚರರು ಕೈ ಚಾಚುತ್ತ, "ತನ್ನಿರಿ, ನಿಮ್ಮ ಪ್ರಾಣವನ್ನು ಹೊರ ತೆಗೆಯಿರಿ. ನೀವು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿ ವೃಥಾ ಒದರುತ್ತಿದ್ದುದರ ಹಾಗೂ ಅವನ ನಿದರ್ಶನಗಳ ವಿರುದ್ಧ ಉದ್ಧಟತನ ತೋರುತ್ತಿದ್ದುದರ ಫಲವಾಗಿ ಇಂದು ನಿಮಗೆ ಅಪಮಾನಕರ ಶಿಕ್ಷೆ ನೀಡಲಾಗುವುದು" ಎಂದು ಹೇಳುತ್ತಿರುವ ಸ್ಥಿತಿಯಲ್ಲಿ ನೋಡಲು ಶಕ್ತರಾಗುತ್ತಿದ್ದರೆ!

وَلَقَدْ جِئْتُمُونَا فُرَادَىٰ كَمَا خَلَقْنَاكُمْ أَوَّلَ
مَرَّةٍ وَتَرَكْتُمْ مَا خَوَّلْنَاكُمْ وَرَاءَ ظُهُورِكُمْ ۖ
وَمَا نَرَىٰ مَعَكُمْ شُفَعَاءَكُمُ الَّذِينَ زَعَمْتُمْ
أَنَّهُمْ فِيكُمْ شُرَكَاءُ ۚ لَقَدْ تَقَطَّعَ بَيْنَكُمْ
وَضَلَّ عَنْكُمْ مَا كُنْتُمْ تَزْعُمُونَ ﴿٩٤﴾

94. (ಅಲ್ಲಾಹ್ ಅಂದು ಹೀಗೆ ಹೇಳುವನು:) ಇದೋ ನಾವು ನಿಮ್ಮನ್ನು ಪ್ರಥಮ ಬಾರಿ ಒಬ್ಬಂಟಿಗರನ್ನಾಗಿ ಸೃಷ್ಟಿಸಿದಂತೆಯೇ ನೀವೀಗ ಒಬ್ಬಂಟಿಗರಾಗಿ ನಮ್ಮ ಮುಂದೆ ಹಾಜರಾಗಿಬಿಟ್ಟಿರಿ. ನಾವು ನಿಮಗೆ ಇಹಲೋಕದಲ್ಲಿ ಕೊಟ್ಟಿದ್ದುದನ್ನೆಲ್ಲ ನೀವು ಬಿಟ್ಟು ಬಂದಿರಿ. ಈಗ ನಿಮ್ಮೊಂದಿಗೆ ನಿಮ್ಮ ಕಾರ್ಯನಿರ್ವಹಣೆಯಲ್ಲಿ ಯಾರ ಪಾಲಿದೆಯೆಂದು ನೀವು ತಿಳಿದುಕೊಂಡಿದ್ದೀರೋ ಆ ನಿಮ್ಮ ಶಿಫಾರಸುದಾರರನ್ನು ನಾವು ಇಲ್ಲಿ ಕಾಣುತ್ತಿಲ್ಲ. ನಿಮ್ಮ ಪರಸ್ಪರ ಸಂಬಂಧಗಳು ಮುರಿದು ಹೋದವು. ನೀವು ಅಭಿಮಾನವಿರಿಸಿಕೊಂಡಿದ್ದವರೆಲ್ಲರೂ ನಿಮ್ಮಿಂದ ಮಾಯವಾಗಿಬಿಟ್ಟರು.

إِنَّ اللَّهَ فَالِقُ الْحَبِّ وَالنَّوَىٰ ۖ يُخْرِجُ الْحَيَّ
مِنَ الْمَيِّتِ وَمُخْرِجُ الْمَيِّتِ مِنَ الْحَيِّ ۚ

95. ಕಾಳು ಮತ್ತು ಗೊರಟನ್ನು ಸೀಳುವವನು ಅಲ್ಲಾಹ್.[23] ಅವನೇ ಸಜೀವಿಯನ್ನು ನಿರ್ಜೀವಿಯಿಂದ ಹೊರತೆಗೆಯುತ್ತಾನೆ ಮತ್ತು ನಿರ್ಜೀವಿಯನ್ನು ಸಜೀವಿಯಿಂದ ಹೊರತರುವವನಾಗಿರುತ್ತಾನೆ.[24]

23. ಅರ್ಥಾತ್- ಭೂತಳದಲ್ಲಿ ಬೀಜ ಟಿಸಿಲೊಡೆದು ಮೊಳಕೆ ಹೊರಬರುವಂತೆ ಮಾಡುವವನು.

24. ನಿರ್ಜೀವಿಯಿಂದ ಸಜೀವಿಯನ್ನು ಹೊರತರುವುದೆಂದರೆ ನಿರ್ಜೀವ ವಸ್ತುವಿನಿಂದ ಸಜೀವ ಸೃಷ್ಟಿಗಳನ್ನು ಸೃಷ್ಟಿಸುವುದು. ನಿರ್ಜೀವಿಯನ್ನು ಸಜೀವಿಯಿಂದ ಹೊರತೆಗೆಯುವುದೆಂದರೆ ಸಜೀವ ದೇಹಗಳಿಂದ ನಿರ್ಜೀವ ಪದಾರ್ಥಗಳನ್ನು ಹೊರತರುವುದು.

ಈ ಎಲ್ಲ ಕಾರ್ಯಗಳನ್ನು ಮಾಡುವವನಂತು ಅಲ್ಲಾಹ್. ಹೀಗಿರುತ್ತ ನೀವೆತ್ತ ದಾರಿತಪ್ಪಿ ಸಾಗುತ್ತಿರುವಿರಿ?

ذٰلِكُمُ اللّٰهُ فَاَنّٰى تُؤْفَكُوْنَ ﴿٩٥﴾

96. ಅವನೇ ಇರುಳಿನ ಪರದೆಯನ್ನು ಹರಿದು ಪ್ರಭಾತವನ್ನು ತರುತ್ತಾನೆ. ಅವನೇ ಇರುಳನ್ನು ನೆಮ್ಮದಿಯ ಕಾಲವನ್ನಾಗಿ ಮಾಡಿರುತ್ತಾನೆ. ಅವನೇ ಸೂರ್ಯ ಚಂದ್ರರ ಉದಯಾಸ್ತಗಳ ಗಣನೆಯನ್ನು ನಿಶ್ಚಯಿಸಿರುತ್ತಾನೆ. ಇವೆಲ್ಲ ಆ ಮಹಾ ಪ್ರತಾಪಿಯೂ ಸರ್ವಜ್ಞನೂ ನಿಶ್ಚಯಿಸಿರುವ ಕ್ರಮಗಳು.

فَالِقُ الْاِصْبَاحِ ۚ وَجَعَلَ الَّيْلَ سَكَنًا وَّالشَّمْسَ
وَالْقَمَرَ حُسْبَانًا ؕ ذٰلِكَ تَقْدِيْرُ الْعَزِيْزِ الْعَلِيْمِ ﴿٩٦﴾

97. ಅವನೇ ನಿಮಗೆ ನಕ್ಷತ್ರಗಳನ್ನು ಮರುಭೂಮಿಯ ಮತ್ತು ಸಾಗರಗಳ ಅಂಧಕಾರಗಳಲ್ಲಿ ದಾರಿ ತಿಳಿಯುವ ಸಾಧನವನ್ನಾಗಿ ಮಾಡಿದನು. ನೋಡಿರಿ, ನಾವು ಜ್ಞಾನವುಳ್ಳವರಿಗೆ ನಿದರ್ಶನ ಗಳನ್ನು[25] ಸುಸ್ಪಷ್ಟವಾಗಿ ತಿಳಿಸಿಬಿಟ್ಟಿರುತ್ತೇವೆ.

وَهُوَ الَّذِيْ جَعَلَ لَكُمُ النُّجُوْمَ لِتَهْتَدُوْا
بِهَا فِيْ ظُلُمٰتِ الْبَرِّ وَالْبَحْرِ ؕ قَدْ فَصَّلْنَا
الْاٰيٰتِ لِقَوْمٍ يَّعْلَمُوْنَ ﴿٩٧﴾

98. ಅವನೇ ನಿಮ್ಮನ್ನು ಒಂದೇ ವ್ಯಕ್ತಿಯಿಂದ ಸೃಷ್ಟಿಸಿದನು. ಪ್ರತಿಯೊಬ್ಬನಿಗೂ ಒಂದು ತಂಗುದಾಣವೂ ಇನ್ನೊಂದು ಅವನು ಒಪ್ಪಿಸಲ್ಪಡುವ ಜಾಗವೂ ಇದೆ. ಅರಿವುಳ್ಳವರಿಗೆ ಈ ನಿದರ್ಶನಗಳನ್ನು ನಾವು ಅಭಿವ್ಯಕ್ತಗೊಳಿಸಿರುತ್ತೇವೆ.

وَهُوَ الَّذِيْۤ اَنْشَاَكُمْ مِّنْ نَّفْسٍ وَّاحِدَةٍ
فَمُسْتَقَرٌّ وَّمُسْتَوْدَعٌ ؕ قَدْ فَصَّلْنَا الْاٰيٰتِ
لِقَوْمٍ يَّفْقَهُوْنَ ﴿٩٨﴾

99. ಅವನೇ ಆಕಾಶದಿಂದ ನೀರನ್ನು ಸುರಿಸಿದನು. ಅನಂತರ ಅದರ ಮೂಲಕ ಎಲ್ಲ ವಿಧದ ವನಸ್ಪತಿಗಳನ್ನು ಉತ್ಪಾದಿಸಿದನು. ಆ ಮೇಲೆ ಅದರಿಂದ ಹಚ್ಚ ಹಸುರಾದ ಹೊಲಗಳನ್ನೂ ವೃಕ್ಷಗಳನ್ನೂ ಉಂಟು ಮಾಡಿದನು. ಆ ಬಳಿಕ ಅವುಗಳಿಂದ ಹಲವು ಪದರು ಗಳಿಂದ ಹೊದಿಯಲ್ಪಟ್ಟ ಧಾನ್ಯಗಳನ್ನು ಹೊರ ತಂದನು ಮತ್ತು ಖರ್ಜೂರಗಳ ಮೊಗ್ಗುಗಳಿಂದ, ಭಾರದಿಂದಾಗಿ ಬಾಗುತ್ತಿರುವ ಫಲಗಳ ಗೊಂಚಲು ಗೊಂಚಲುಗಳನ್ನೇ ಉಂಟು ಮಾಡಿದನು. ದ್ರಾಕ್ಷೆ, ಝೈತೂನ್(ಇಪ್ಪೆ) ದಾಳಿಂಬೆಗಳ ತೋಟಗಳನ್ನು ಬೆಳೆಸಿದನು. ಅವುಗಳ ಫಲಗಳು ಪರಸ್ಪರ ಹೋಲುತ್ತಲೂ ಇವೆ ಮತ್ತು ಪ್ರತಿಯೊಂದರ ವೈಶಿಷ್ಟ್ಯಗಳು ವಿಭಿನ್ನವಾಗಿಯೂ ಇವೆ. ಈ ವೃಕ್ಷಗಳು ಫಲಬಿಡುವಾಗ ಅವುಗಳಲ್ಲಿ ಫಲ ಬರುವ ಮತ್ತು ಪಕ್ವವಾಗುವ ವಿದ್ಯಮಾನವನ್ನು ಸೂಕ್ಷ್ಮವಾಗಿ ಅವ ಲೋಕಿಸಿರಿ. ವಿಶ್ವಾಸವಿಡುವವರಿಗೆ ಇವುಗಳಲ್ಲಿ ನಿದರ್ಶನಗಳಿವೆ.

وَهُوَ الَّذِيْۤ اَنْزَلَ مِنَ السَّمَآءِ مَآءً ۚ فَاَخْرَجْنَا
بِهٖ نَبَاتَ كُلِّ شَيْءٍ فَاَخْرَجْنَا مِنْهُ خَضِرًا
نُّخْرِجُ مِنْهُ حَبًّا مُّتَرَاكِبًا ۚ وَمِنَ النَّخْلِ
مِنْ طَلْعِهَا قِنْوَانٌ دَانِيَةٌ وَّجَنّٰتٍ مِّنْ
اَعْنَابٍ وَّالزَّيْتُوْنَ وَالرُّمَّانَ مُشْتَبِهًا
وَّغَيْرَ مُتَشَابِهٍ ؕ اُنْظُرُوْۤا اِلٰى ثَمَرِهٖۤ اِذَاۤ اَثْمَرَ
وَيَنْعِهٖ ؕ اِنَّ فِيْ ذٰلِكُمْ لَاٰيٰتٍ لِّقَوْمٍ يُّؤْمِنُوْنَ ﴿٩٩﴾

25. ಅರ್ಥಾತ್- ದೇವನು ಏಕನಾಗಿದ್ದಾನೆ, ಬೇರಾರೂ ದೇವತ್ವದ ಗುಣವನ್ನು ಹೊಂದಿಲ್ಲ. ಯಾರಿಗೂ ದೇವನ ಪರಮಾಧಿಕಾರದಲ್ಲಿ ಪಾಲಿಲ್ಲ. ದೇವನಿಗೆ ಸಲ್ಲಬೇಕಾದಂತಹ ಹಕ್ಕುಗಳಲ್ಲಿ ಯಾವುದೇ ಹಕ್ಕಿಗೆ ಬೇರಾರೂ ಬಾಧ್ಯಸ್ಥರಾಗುವುದಿಲ್ಲ ಎಂಬ ವಾಸ್ತವಿಕತೆಯನ್ನು ಸೂಚಿಸುವಂತಹ ನಿದರ್ಶನಗಳು.

وَجَعَلُوْا لِلّٰهِ شُرَكَآءَ الْجِنَّ وَخَلَقَهُمْ وَ
خَرَقُوْا لَهٗ بَنِيْنَ وَبَنٰتٍۭ بِغَيْرِ عِلْمٍ ؕ
سُبْحٰنَهٗ وَتَعٰلٰى عَمَّا يَصِفُوْنَ ﴿۱۰۰﴾

100. ಇಷ್ಟಾಗಿಯೂ ಜನರು 'ಯಕ್ಷ'ರನ್ನು ಅಲ್ಲಾಹನಿಗೆ ಸಹಭಾಗಿಗಳಾಗಿಸಿ ಬಿಟ್ಟರು.[26] ವಸ್ತುತಃ ಅವನು ಅವರನ್ನು ಸೃಷ್ಟಿಸಿದವನು. ಆದರೆ ಅವರು ವಿಚಾರ ಮಾಡದೆ ಅವನಿಗೆ ಪುತ್ರ ಮತ್ತು ಪುತ್ರಿಯರನ್ನು ಕಲ್ಪಿಸಿಕೊಂಡರು. ವಸ್ತುತಃ ಅವನು ಇವರು ಹೇಳುತ್ತಿರುವ ವಿಷಯಗಳಿಂದ ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ.

بَدِيْعُ السَّمٰوٰتِ وَالْاَرْضِ ؕ اَنّٰى يَكُوْنُ
لَهٗ وَلَدٌ وَّلَمْ تَكُنْ لَّهٗ صَاحِبَةٌ ؕ وَخَلَقَ
كُلَّ شَىْءٍ ۚ وَهُوَ بِكُلِّ شَىْءٍ عَلِيْمٌ ﴿۱۰۱﴾

101. ಅವನು ಭೂಮಿ-ಆಕಾಶಗಳ ಕರ್ತೃ. ಅವನಿಗೊಬ್ಬ ಬಾಳ ಸಂಗಾತಿಯೇ ಇಲ್ಲದಿರುವಾಗ ಅವನಿಗೆ ಮಗನಾಗುವುದು ಹೇಗೆ? ಅವನು ಸರ್ವವನ್ನೂ ಸೃಷ್ಟಿಸಿದನು ಮತ್ತು ಅವನು ಸಕಲ ವಸ್ತುಗಳ ಜ್ಞಾನವುಳ್ಳವನು.

ذٰلِكُمُ اللّٰهُ رَبُّكُمْ ۚ لَآ اِلٰهَ اِلَّا هُوَ ۚ خَالِقُ
كُلِّ شَىْءٍ فَاعْبُدُوْهُ ۚ وَهُوَ عَلٰى كُلِّ
شَىْءٍ وَّكِيْلٌ ﴿۱۰۲﴾

102. ಅವನೇ ಅಲ್ಲಾಹ್, ನಿಮ್ಮ ಪ್ರಭು. ಅವನ ಹೊರತು ಅನ್ಯ ಆರಾಧ್ಯನಿಲ್ಲ. ಸಕಲ ವಸ್ತುಗಳ ಕರ್ತೃ. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ. ಅವನು ಸಕಲ ವಸ್ತುಗಳ ಹೊಣೆಗಾರನು.

لَا تُدْرِكُهُ الْاَبْصَارُ ؗ وَهُوَ يُدْرِكُ
الْاَبْصَارَ ۚ وَهُوَ اللَّطِيْفُ الْخَبِيْرُ ﴿۱۰۳﴾

103. ದೃಷ್ಟಿಗಳು ಅವನನ್ನು ಕಾಣಲಾರವು. ಆದರೆ ಅವನು ದೃಷ್ಟಿಗಳನ್ನು ಕಾಣುತ್ತಾನೆ. ಅವನು ಅತ್ಯಂತ ಸೂಕ್ಷ್ಮದರ್ಶಿಯೂ ಸೂಕ್ಷ್ಮಜ್ಞನೂ ಆಗಿರುತ್ತಾನೆ.

قَدْ جَآءَكُمْ بَصَآئِرُ مِنْ رَّبِّكُمْ ۚ فَمَنْ
اَبْصَرَ فَلِنَفْسِهٖ ۚ وَمَنْ عَمِىَ فَعَلَيْهَا ؕ وَمَآ
اَنَا عَلَيْكُمْ بِحَفِيْظٍ ﴿۱۰۴﴾

104. ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಅಂತರ್ದೃಷ್ಟಿಯ ಪ್ರಕಾಶಗಳು ಬಂದು ಬಿಟ್ಟಿವೆ. ಈಗ ಚೆನ್ನಾಗಿ ವೀಕ್ಷಿಸುವವನು ತನಗೇ ಹಿತವನ್ನು ಮಾಡಿಕೊಳ್ಳುವನು. ಅಂಧನಾಗಿದ್ದುಕೊಂಡವನು ಸ್ವತಃ ನಷ್ಟಹೊಂದುವನು. ನಾನು ನಿಮ್ಮ ಕಾವಲುಗಾರನೇನೂ ಅಲ್ಲ.[27]

26. ಅರ್ಥಾತ್- ನಿಸರ್ಗದ ವ್ಯವಸ್ಥೆಯನ್ನು ಕಾಪಾಡಲು ಮತ್ತು ಮನುಷ್ಯನ ವಿಧಿಯನ್ನು ರೂಪಿಸಲು ಅಲ್ಲಾಹನ ಜತೆಗೆ ಇತರ ಅಗೋಚರ ಶಕ್ತಿಗಳೂ ಭಾಗಿಯಾಗಿವೆ ಎಂದು ಅವರು ತಮ್ಮ ಭ್ರಮೆಗಳ ಮೂಲಕ ಕಲ್ಪಿಸಿಕೊಂಡರು. ಮಳೆಗೊಂದು ದೇವತೆ, ಬೆಳೆಗೊಂದು ದೇವತೆ, ಸಿರಿಗೊಂದು ದೇವತೆ, ರೋಗಕ್ಕೊಂದು ದೇವತೆ ಎಂದು ಮುಂತಾಗಿ ಅವರು ಕಲ್ಪಿಸಿಕೊಂಡರು. ಆತ್ಮ, ಪಿಶಾಚಿ, ರಾಕ್ಷಸರು, ದೇವತೆಗಳೇ ಮುಂತಾದ ಶ್ರದ್ಧೆ- ನಂಬಿಕೆಗಳು ಜಗತ್ತಿನ ಎಲ್ಲಾ ಬಹುದೇವಾರಾಧಕ ಸಮಾಜದಲ್ಲೂ ಕಂಡು ಬರುತ್ತದೆ.

27. ಇದು ಅಲ್ಲಾಹನ ವಚನವೇ ಆಗಿದ್ದರೂ ಈ ಮಾತನ್ನು ಪ್ರವಾದಿವರ್ಯರ(ಸ) ಮೂಲಕ ಹೇಳಿಸಲಾಗುತ್ತಿದೆ. ಇದು ಸೂರಃ ಫಾತಿಹಾ, ಅಲ್ಲಾಹನ ವಚನವಾಗಿದ್ದರೂ ಅಲ್ಲಾಹನ ದಾಸರ ಮೂಲಕ ಹೇಳಿಸಲಾಗಿರುವಂತೆಯೇ ಇದೆ. ನಾನು ನಿಮ್ಮ ಕಾವಲುಗಾರನೇನೂ ಅಲ್ಲ ಎಂದರೆ ಈ ಪ್ರಕಾಶವನ್ನು ನಿಮ್ಮ ಮುಂದೆ ಸಮರ್ಪಿಸಿ ಬಿಡುವುದಷ್ಟೇ ನನ್ನ ಕೆಲಸ. ಅನಂತರ ಕಣ್ತೆರೆದು ನೋಡುವುದು ಅಥವಾ ನೋಡದೇ ಇರುವುದು ನಿಮಗೆ ಬಿಟ್ಟದ್ದು. ಸ್ವತಃ ಕಣ್ಮುಚ್ಚಿಕೊಂಡಿರುವವರನ್ನು ಬಲವಂತದಿಂದ ಕಣ್ತೆರೆಯುವಂತೆ ಮಾಡುವುದು ಅಥವಾ ಏನನ್ನೂ ನೋಡದಿರುವವರನ್ನು ಬಲವಂತದಿಂದ ನೋಡುವಂತೆ ಮಾಡುವ ಕೆಲಸ ನನಗೆ ವಹಿಸಲಾಗಿಲ್ಲ.

105. ಹೀಗೆ ನಾವು ನಮ್ಮ ನಿದರ್ಶನಗಳನ್ನು ಆಗಾಗ ವಿವಿಧ ರೀತಿಗಳಲ್ಲಿ ವಿವರಿಸುತ್ತೇವೆ. "ನೀವು ಯಾರಿಂದಲೋ ಕಲಿತು ಬಂದಿದ್ದೀರಿ" ಎಂದು ಇವರು ಹೇಳಲಿಕ್ಕಾಗಿಯೂ ಜ್ಞಾನ ಹೊಂದಿದವರ ಮೇಲೆ ವಸ್ತುಸ್ಥಿತಿಯನ್ನು ಪ್ರಕಟಗೊಳಿಸಲಿಕ್ಕಾಗಿಯೂ ನಾವು ಹೀಗೆ ಮಾಡುತ್ತೇವೆ.

وَكَذَٰلِكَ نُصَرِّفُ الْآيَاتِ وَلِيَقُولُوا
دَرَسْتَ وَلِنُبَيِّنَهُ لِقَوْمٍ يَعْلَمُونَ ﴿١٠٥﴾

106. ಓ ಪೈಗಂಬರರೇ, ನಿಮ್ಮ ಪ್ರಭುವಿನ ವತಿಯಿಂದ ನಿಮ್ಮ ಮೇಲೆ ಅವತೀರ್ಣಗೊಂಡ 'ದಿವ್ಯವಾಣಿ'ಯನ್ನು ಅನುಸರಿಸಿರಿ. ಏಕೆಂದರೆ ಆ ಏಕ ಪ್ರಭುವಿನ ಹೊರತು ಅನ್ಯ ಆರಾಧ್ಯನಿಲ್ಲ ಮತ್ತು 'ಬಹುದೇವವಿಶ್ವಾಸಿ'ಗಳನ್ನು ನಿರ್ಲಕ್ಷಿಸಿರಿ.

اتَّبِعْ مَا أُوحِيَ إِلَيْكَ مِن رَّبِّكَ ۖ لَا إِلَٰهَ
إِلَّا هُوَ ۖ وَأَعْرِضْ عَنِ الْمُشْرِكِينَ ﴿١٠٦﴾

107. ಅಲ್ಲಾಹನು ಇಚ್ಛಿಸುತ್ತಿದ್ದರೆ ಅವರು 'ಬಹುದೇವಾರಾಧನೆ' ಮಾಡುತ್ತಿರಲಿಲ್ಲ. (ಅಂತಹ ವ್ಯವಸ್ಥೆಯನ್ನು ಅವನು ಸ್ವತಃ ಮಾಡಿಬಿಡುತ್ತಿದ್ದನು.) ನಾವು ನಿಮ್ಮನ್ನು ಅವರ ಕಾವಲುಗಾರರನ್ನಾಗಿ ನೇಮಕ ಮಾಡಿರುವುದಿಲ್ಲ ಮತ್ತು ನೀವು ಅವರ ಹೊಣೆಗಾರರೂ ಅಲ್ಲ.

وَلَوْ شَاءَ اللَّهُ مَا أَشْرَكُوا ۗ وَمَا جَعَلْنَاكَ
عَلَيْهِمْ حَفِيظًا ۖ وَمَا أَنتَ عَلَيْهِم بِوَكِيلٍ ﴿١٠٧﴾

108. (ಓ ಮುಸ್ಲಿಮರೇ,) ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರನ್ನು ತೆಗಳಬೇಡಿರಿ. ಇದರಿಂದ ಅವರು 'ಬಹುದೇವಾರಾಧನೆ'ಗಿಂತಲೂ ಮುಂದುವರಿದು ಅಜ್ಞಾನ ದಿಂದ ಅಲ್ಲಾಹನನ್ನು ತೆಗಳತೊಡಗುವರು. ನಾವು ಇದೇ ರೀತಿಯಲ್ಲಿ ಪ್ರತಿಯೊಂದು ಸಮುದಾಯಕ್ಕೆ ಅದರ ಕರ್ಮವನ್ನು ಚೆಲುವಾಗಿಸಿದ್ದೇವೆ. ಅನಂತರ ಅವರಿಗೆ ತಮ್ಮ ಪ್ರಭುವಿನ ಕಡೆಗೇ ಮರಳಿ ಸಾಗಲಿಕ್ಕಿದೆ. ಆಗ ಅವನು ಅವರೇನು ಮಾಡುತ್ತಿದ್ದ ರೆಂಬುದನ್ನು ಅವರಿಗೆ ತೋರಿಸಿಕೊಡುವನು.

وَلَا تَسُبُّوا الَّذِينَ يَدْعُونَ مِن دُونِ اللَّهِ
فَيَسُبُّوا اللَّهَ عَدْوًا بِغَيْرِ عِلْمٍ ۗ كَذَٰلِكَ
زَيَّنَّا لِكُلِّ أُمَّةٍ عَمَلَهُمْ ثُمَّ إِلَىٰ رَبِّهِم
مَّرْجِعُهُمْ فَيُنَبِّئُهُم بِمَا كَانُوا يَعْمَلُونَ ﴿١٠٨﴾

109. ನಮ್ಮ ಮುಂದೆ ಒಂದು ನಿದರ್ಶನವು (ಪವಾಡ) ಬಂದು ಬಿಟ್ಟರೆ ನಾವು ಅದರ ಮೇಲೆ ವಿಶ್ವಾಸವಿಡುವೆವೆಂದು ಇವರು ಆಣೆಯ ಮೇಲೆ ಆಣೆ ಹಾಕುತ್ತ ಹೇಳುತ್ತಾರೆ. ಓ ಪೈಗಂಬರರೇ, ನಿದರ್ಶನಗಳು ಅಲ್ಲಾಹನ ಬಳಿ ಇವೆಯೆಂದು ಹೇಳಿರಿ. ನಿದರ್ಶನ ಗಳು ಬಂದುಬಿಟ್ಟರೂ ಇವರು ವಿಶ್ವಾಸವಿಡುವವರಲ್ಲವೆಂದು ನಿಮಗೆ ತಿಳಿಯ ಪಡಿಸುವುದು ಹೇಗೆ?[28]

وَأَقْسَمُوا بِاللَّهِ جَهْدَ أَيْمَانِهِمْ لَئِن جَاءَتْهُمْ
آيَةٌ لَّيُؤْمِنُنَّ بِهَا ۚ قُلْ إِنَّمَا الْآيَاتُ عِندَ
اللَّهِ ۖ وَمَا يُشْعِرُكُمْ أَنَّهَا إِذَا جَاءَتْ
لَا يُؤْمِنُونَ ﴿١٠٩﴾

28. ತಮ್ಮ ಪಥಭ್ರಷ್ಟ ಸಹೋದರರು ನೇರಮಾರ್ಗಕ್ಕೆ ಬಂದು ಬಿಡುವಂತಹ ದೃಷ್ಟಾಂತವೊಂದು ಪ್ರಕಟವಾಗಬೇಕು ಎಂದು ಚಿಂತಾಕ್ರಾಂತರಾಗಿ ಹಂಬಲಿಸುತ್ತಿದ್ದ ಮುಸ್ಲಿಮರನ್ನುದ್ದೇಶಿಸಿ ಈ ಮಾತು ಹೇಳಲಾಗುತ್ತಿದೆ.

110. ಇವರು ಮೊದಲ ಬಾರಿ ಇದರ (ಈ ಗ್ರಂಥದ) ಮೇಲೆ ವಿಶ್ವಾಸ ವಿಡದಂತೆಯೇ ನಾವು ಇವರ ಹೃದಯಗಳನ್ನೂ ದೃಷ್ಟಿಗಳನ್ನೂ ತಿರುಗಿಸಿ ಬಿಡುತ್ತಿದ್ದೇವೆ. ತಮ್ಮ ಉದ್ಧಟತನದಲ್ಲೇ ಅಲೆದಾಡು ತ್ತಿರಲು ನಾವು ಇವರನ್ನು ಬಿಟ್ಟು ಬಿಡುತ್ತೇವೆ.

وَنُقَلِّبُ اَفۡـِٕدَتَهُمۡ وَاَبۡصَارَهُمۡ كَمَا لَمۡ يُؤۡمِنُوۡا بِهٖۤ اَوَّلَ مَرَّةٍ وَّنَذَرُهُمۡ فِىۡ طُغۡيَانِهِمۡ يَعۡمَهُوۡنَ ﴿١١٠﴾

111. *ನಾವು ಇವರ ಮೇಲೆ ದೇವಚರರನ್ನು ಅವತೀರ್ಣಗೊಳಿಸುತ್ತಿದ್ದರೂ ಸತ್ತವರು ಇವರೊಡನೆ ಮಾತಾಡುತ್ತಿದ್ದರೂ ಇವರ ಕಣ್ಣ ಮುಂದೆ ನಾವು ಅಖಿಲ ಜಗತ್ತಿನಲ್ಲಿರುವ ವಸ್ತುಗಳನ್ನು ಒಟ್ಟುಗೂಡಿಸುತ್ತಿದ್ದರೂ (ಇವರು ವಿಶ್ವಾಸವಿಡಬೇಕೆಂದು) ಅಲ್ಲಾಹನ ವಿಧಿ ಇಲ್ಲದಿರುತ್ತಿದ್ದರೆ ಇವರು ವಿಶ್ವಾಸವಿಡುತ್ತಿರಲಿಲ್ಲ. ಆದರೆ ಹೆಚ್ಚಿನವರು ಅವಿವೇಕದ ಮಾತುಗಳನ್ನಾಡುತ್ತಾರೆ.

وَلَوۡ اَنَّنَا نَزَّلۡنَاۤ اِلَيۡهِمُ الۡمَلٰۤـِٕكَةَ وَكَلَّمَهُمُ الۡمَوۡتٰى وَحَشَرۡنَا عَلَيۡهِمۡ كُلَّ شَىۡءٍ قُبُلًا مَّا كَانُوۡا لِيُؤۡمِنُوۡۤا اِلَّاۤ اَنۡ يَّشَآءَ اللّٰهُ وَلٰـكِنَّ اَكۡثَرَهُمۡ يَجۡهَلُوۡنَ ﴿١١١﴾

112. ನಾವಂತು ಇದೇ ರೀತಿಯಲ್ಲಿ ಮಾನವ ಶೈತಾನರನ್ನೂ 'ಯಕ್ಷ' ಶೈತಾನರನ್ನೂ ಪ್ರತಿಯೊಬ್ಬ ಪ್ರವಾದಿಯ ಶತ್ರುಗಳನ್ನಾಗಿ ಮಾಡಿರುವೆವು. ಇವರು ಮನಮೋಹಕ ಮಾತುಗಳನ್ನು ವಂಚನೆಯ ರೂಪದಲ್ಲಿ ಪರಸ್ಪರರ ಮನಸ್ಸಿನೊಳಗೆ ಇಳಿಸುತ್ತಿರುತ್ತಾರೆ. ಇವರು ಹಾಗೆ ಮಾಡಬಾರದೆಂದು ನಿಮ್ಮ ಪ್ರಭುವಿನ ವಿಧಿ ಇರುತ್ತಿದ್ದರೆ ಇವರು ಎಂದಿಗೂ ಹಾಗೆ ಮಾಡುತ್ತಿರಲಿಲ್ಲ. ಇವರು ತಮ್ಮ ಸ್ವಕಲ್ಪಿತ ಆರೋಪಗಳಲ್ಲೇ ಬಿದ್ದುಕೊಂಡಿರುವಂತೆ ಇವರನ್ನು ಇವರಷ್ಟಕ್ಕೆ ಬಿಟ್ಟುಬಿಡಿರಿ.

وَكَذٰلِكَ جَعَلۡنَا لِكُلِّ نَبِىٍّ عَدُوًّا شَيٰطِيۡنَ الۡاِنۡسِ وَالۡجِنِّ يُوۡحِىۡ بَعۡضُهُمۡ اِلٰى بَعۡضٍ زُخۡرُفَ الۡقَوۡلِ غُرُوۡرًا ؕ وَلَوۡ شَآءَ رَبُّكَ مَا فَعَلُوۡهُ فَذَرۡهُمۡ وَمَا يَفۡتَرُوۡنَ ﴿١١٢﴾

113. ಪರಲೋಕದ ಮೇಲೆ ವಿಶ್ವಾಸವಿಡದವರ ಹೃದಯಗಳಲ್ಲಿ ಇದರ (ಈ ಮನಮೋಹಕ ವಂಚನೆಯ) ಕಡೆಗೆ ಒಲವುಂಟಾಗಿ ಅವರು ಅದರಿಂದ ತೃಪ್ತರಾಗಲೆಂದೂ ಅವರು ಗಳಿಸಲಿಚ್ಛಿಸುವ ಕೆಡುಕು ಗಳನ್ನು ಗಳಿಸಿಕೊಳ್ಳಲೆಂದೂ (ನಾವು ಅವರನ್ನು ಇದನ್ನೆಲ್ಲ ಮಾಡಲು ಬಿಡುತ್ತೇವೆ.)[29]

وَلِتَصۡغٰۤى اِلَيۡهِ اَفۡـِٕدَةُ الَّذِيۡنَ لَا يُؤۡمِنُوۡنَ بِالۡاٰخِرَةِ وَلِيَرۡضَوۡهُ وَلِيَقۡتَرِفُوۡا مَا هُمۡ مُّقۡتَرِفُوۡنَ ﴿١١٣﴾

114. ವಸ್ತುಸ್ಥಿತಿ ಹೀಗಿರುವಾಗ ನಾನು ಅಲ್ಲಾಹನ ಹೊರತು ಬೇರಾವನಾದರೂ ತೀರ್ಮಾನ ಮಾಡುವವನನ್ನು ಹುಡುಕಬೇಕೇ? ವಸ್ತುತಃ ಅವನು ವಿವರಪೂರ್ಣವಾದ ಗ್ರಂಥವನ್ನು ನಿಮ್ಮ

اَفَغَيۡرَ اللّٰهِ اَبۡتَغِىۡ حَكَمًا وَّهُوَ الَّذِىۡۤ اَنۡزَلَ اِلَيۡكُمُ الۡكِتٰبَ مُفَصَّلًا ؕ وَالَّذِيۡنَ اٰتَيۡنٰهُمُ

***ಇಲ್ಲಿಂದ 8ನೆಯ ಕಾಂಡ ಆರಂಭ.**

29. 110ರಿಂದ 113ನೆಯ ಸೂಕ್ತದ ವರೆಗೆ ಹೇಳಲಾಗಿರುವ ವಿಚಾರವೇನೆಂದರೆ ಮನುಷ್ಯನಿಗೆ ಸಂಬಂಧಿಸಿದಂತೆ, ವಿಧಿಬದ್ಧವಾಗಿ ಮಾರ್ಗದರ್ಶನ ಮಾಡುವ ನಿಯಮ ಅಲ್ಲಾಹನ ಬಳಿಯಿಲ್ಲ. ಮರದಲ್ಲಿ ಹಣ್ಣುಗಳು ಮೂಡುವಂತೆ ಅಥವಾ ಸ್ವತಃ ಮನುಷ್ಯನ ತಲೆಯಲ್ಲೇ ಕೂದಲು ಬೆಳೆಯುವಂತೆ ನೈಸರ್ಗಿಕ ವಿಧಿಗೆ ಬದ್ಧನಾಗಿರುವ ಪ್ರಮೇಯ ಮನುಷ್ಯನಿಗಿಲ್ಲ. ಅವನನ್ನು ಲೋಕಕ್ಕೆ ಪರೀಕ್ಷೆಗೆಂದು ಕಳುಹಿಸಲಾಗಿದೆ. ಸನ್ಮಾರ್ಗ ಮತ್ತು ಪಥಭ್ರಷ್ಟತೆಗಳ ಪೈಕಿ ಯಾವುದನ್ನು ಬೇಕಾದರೂ ನೆಚ್ಚಿಕೊಳ್ಳುವ ಸ್ವಾಂತಂತ್ರ್ಯವನ್ನು ಅವನಿಗೆ ಪರೀಕ್ಷಾರ್ಥವಾಗಿ ನೀಡಲಾಗಿದೆ. ಅವನು ಸ್ವತಃ ದಾರಿತಪ್ಪಿ ನಡೆಯಬಯಸಿದರೆ ಅಲ್ಲಾಹನು ತನ್ನ ವಿಧಿಯಂತೆ ಬಲವಂತದಿಂದ ಅವನಿಗೆ ಮಾರ್ಗದರ್ಶನ ಮಾಡುವುದಿಲ್ಲ.

ಕಡೆಗೆ ಅವತೀರ್ಣಗೊಳಿಸಿರುತ್ತಾನೆ.[30] ನಿಮಗಿಂತ ಮೊದಲು ಗ್ರಂಥ ನೀಡಲ್ಪಟ್ಟವರು, ಈ ಗ್ರಂಥವು ನಿಮ್ಮ ಪ್ರಭುವಿನ ಕಡೆಯಿಂದಲೇ ಸತ್ಯಸಹಿತ ಅವತೀರ್ಣಗೊಂಡಿದೆ ಯೆಂಬುದನ್ನು ತಿಳಿದಿರುತ್ತಾರೆ. ಆದುದರಿಂದ ಸಂಶಯಗ್ರಸ್ತರಾದವರಲ್ಲಾಗಬೇಡಿರಿ.

الْكِتٰبَ يَعْلَمُوْنَ اَنَّهٗ مُنَزَّلٌ مِّنْ رَّبِّكَ
بِالْحَقِّ فَلَا تَكُوْنَنَّ مِنَ الْمُمْتَرِيْنَ ﴿١١٤﴾

115. ನಿಮ್ಮ ಪ್ರಭುವಿನ ವಚನವು ಸತ್ಯ ಮತ್ತು ನ್ಯಾಯದ ದೃಷ್ಟಿಯಿಂದ ಪರಿಪೂರ್ಣವಾಗಿದೆ. ಅವನ ಆದೇಶಗಳಲ್ಲಿ ಯಾರೂ ಬದಲಾವಣೆ ಮಾಡುವವರಿಲ್ಲ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَتَمَّتْ كَلِمَتُ رَبِّكَ صِدْقًا وَّعَدْلًا ۗ لَا
مُبَدِّلَ لِكَلِمٰتِهٖ ۚ وَهُوَ السَّمِيْعُ الْعَلِيْمُ ﴿١١٥﴾

116. ಓ ಪೈಗಂಬರರೇ, ನೀವು ಭೂ ನಿವಾಸಿಗಳಲ್ಲಿ ಹೆಚ್ಚಿನವರ ಹೇಳಿಕೆಯಂತೆ ನಡೆದರೆ ಅವರು ನಿಮ್ಮನ್ನು ಅಲ್ಲಾಹನ ಮಾರ್ಗದಿಂದ ತಪ್ಪಿಸಿ ಬಿಡುವರು. ಅವರಂತು ಕೇವಲ ಗುಮಾನಿಯನ್ನನುಸರಿಸಿ ಊಹಾಪೋಹೆಗಳ ಪ್ರಕಾರ ವರ್ತಿಸುತ್ತಾರೆ.

وَاِنْ تُطِعْ اَكْثَرَ مَنْ فِى الْاَرْضِ يُضِلُّوْكَ
عَنْ سَبِيْلِ اللّٰهِ ۗ اِنْ يَّتَّبِعُوْنَ اِلَّا الظَّنَّ
وَاِنْ هُمْ اِلَّا يَخْرُصُوْنَ ﴿١١٦﴾

117. ವಾಸ್ತವದಲ್ಲಿ ನಿಮ್ಮ ಪ್ರಭುವಿನ ಮಾರ್ಗದಿಂದ ಯಾರು ದೂರ ಸರಿದಿರುತ್ತಾನೆ ಮತ್ತು ಯಾರು ನೇರ ಮಾರ್ಗದಲ್ಲಿದ್ದಾನೆಂಬುದನ್ನು ಅವನು ಚೆನ್ನಾಗಿ ಅರಿತಿರುತ್ತಾನೆ.

اِنَّ رَبَّكَ هُوَ اَعْلَمُ مَنْ يَّضِلُّ عَنْ سَبِيْلِهٖ ۚ
وَهُوَ اَعْلَمُ بِالْمُهْتَدِيْنَ ﴿١١٧﴾

118. ನೀವು ಅಲ್ಲಾಹನ 'ಸೂಕ್ತ'ಗಳಲ್ಲಿ ವಿಶ್ವಾಸವಿರಿಸುತ್ತೀರಾದರೆ ಅಲ್ಲಾಹನ ನಾಮ ಉಚ್ಚರಿಸಲ್ಪಟ್ಟಿರುವ ಪ್ರಾಣಿಯ ಮಾಂಸವನ್ನು ತಿನ್ನಿರಿ.

فَكُلُوْا مِمَّا ذُكِرَ اسْمُ اللّٰهِ عَلَيْهِ اِنْ
كُنْتُمْ بِاٰيٰتِهٖ مُؤْمِنِيْنَ ﴿١١٨﴾

119. ನೀವು ಅಲ್ಲಾಹನ ನಾಮ ಉಚ್ಚರಿಸಲ್ಪಟ್ಟ ವಸ್ತುವನ್ನು ತಿನ್ನದಿರಲು ಕಾರಣವೇನು? ನಿಜವಾಗಿ ವಿವಶಾವಸ್ಥೆಯ ವಿನಾ ಇತರ ಎಲ್ಲ ಸ್ಥಿತಿಗಳಲ್ಲಿಯೂ ಅಲ್ಲಾಹನು ನಿಷೇಧಿಸಿರುವ ವಸ್ತುಗಳ ವಿವರವನ್ನು ನಿಮಗೆ ತಿಳಿಸಿಕೊಡಲಾಗಿದೆ. ನಿಶ್ಚಯವಾಗಿಯೂ ಹೆಚ್ಚಿನವರು ಜ್ಞಾನವಿಲ್ಲದೆ ಕೇವಲ ತಮ್ಮ ಅಭಿಲಾಷೆಗಳಿಂದಾಗಿ ಪಥಭ್ರಷ್ಟ ಮಾತುಗಳನ್ನಾಡುತ್ತಾರೆ. ಹದತಪ್ಪಿ ನಡೆಯುತ್ತಿರುವ ಇವರನ್ನು ನಿಮ್ಮ ಪ್ರಭು ಚೆನ್ನಾಗಿ ಬಲ್ಲನು.

وَمَا لَكُمْ اَلَّا تَاْكُلُوْا مِمَّا ذُكِرَ اسْمُ اللّٰهِ
عَلَيْهِ وَقَدْ فَصَّلَ لَكُمْ مَّا حَرَّمَ عَلَيْكُمْ اِلَّا
مَا اضْطُرِرْتُمْ اِلَيْهِ ۗ وَاِنَّ كَثِيْرًا لَّيُضِلُّوْنَ
بِاَهْوَآئِهِمْ بِغَيْرِ عِلْمٍ ۗ اِنَّ رَبَّكَ هُوَ
اَعْلَمُ بِالْمُعْتَدِيْنَ ﴿١١٩﴾

120. ನೀವು ಪ್ರತ್ಯಕ್ಷ ಮತ್ತು ಪರೋಕ್ಷ ಪಾಪಕಾರ್ಯಗಳಿಂದ ದೂರವಿರಿ. ಪಾಪ ಗಳಿಸುವವರು ತಮ್ಮ ಗಳಿಕೆಯ ಪ್ರತಿಫಲ ಪಡೆದೇ ತೀರುವರು.

وَذَرُوْا ظَاهِرَ الْاِثْمِ وَبَاطِنَهٗ ۗ اِنَّ الَّذِيْنَ
يَكْسِبُوْنَ الْاِثْمَ سَيُجْزَوْنَ بِمَا كَانُوْا
يَقْتَرِفُوْنَ ﴿١٢٠﴾

30. ಈ ಸೂಕ್ತದಲ್ಲಿ ಮಾತು ಪ್ರವಾದಿವರ್ಯರ(ಸ) ಮೂಲಕ ಪ್ರಕಟವಾಗಿದೆ. ಅಭಿಸಂಭೋದನೆ ಮುಸ್ಲಿಮರ ಕಡೆಗಿದೆ.

121. ಅಲ್ಲಾಹನ ನಾಮ ಉಚ್ಚರಿಸದೆ ವಧಿಸಲ್ಪಟ್ಟ ಪ್ರಾಣಿಯ ಮಾಂಸ ತಿನ್ನಬೇಡಿರಿ. ಹೀಗೆ ಮಾಡುವುದು ಧರ್ಮಭ್ರಷ್ಟತೆ. ನಿಮ್ಮೊಡನೆ ಜಗಳ ಮಾಡಲಿಕ್ಕಾಗಿ ಶೈತಾನರು ತಮ್ಮ ಸಂಗಾತಿಗಳ ಮನಸ್ಸಿನಲ್ಲಿ ಸಂಶಯ ಮತ್ತು ಆಕ್ಷೇಪಣೆಗಳನ್ನು ಉಂಟು ಮಾಡುತ್ತಾರೆ. ನೀವು ಅವರ ಅನುಸರಣೆ ಸ್ವೀಕರಿಸಿದರೆ, ಖಂಡಿತವಾಗಿಯೂ ನೀವು 'ಬಹುದೇವವಿಶ್ವಾಸಿ'ಗಳು

وَلَا تَأْكُلُوْا مِمَّا لَمْ يُذْكَرِ اسْمُ اللّٰهِ
عَلَيْهِ وَاِنَّهٗ لَفِسْقٌ ؕ وَاِنَّ الشَّيٰطِيْنَ
لَيُوْحُوْنَ اِلٰۤى اَوْلِيٰٓئِهِمْ لِيُجَادِلُوْكُمْ ۚ
وَاِنْ اَطَعْتُمُوْهُمْ اِنَّكُمْ لَمُشْرِكُوْنَ ﴿١٢١﴾

122. ಹಿಂದೆ ಸತ್ತಿದ್ದು, ಅನಂತರ ನಾವು ಜೀವದಾನ ಮಾಡಿ ಜನರ ಮಧ್ಯೆ ಜೀವನದ ಮಾರ್ಗದಲ್ಲಿ ಮುಂದುವರಿಯಲು ಬೇಕಾದ ಬೆಳಕನ್ನು ದಯಪಾಲಿಸಿದ ಓರ್ವ ವ್ಯಕ್ತಿಯು, ಅಂಧಕಾರದಲ್ಲಿ ಬಿದ್ದುಕೊಂಡಿರುವ ಮತ್ತು ಯಾವ ರೀತಿಯಲ್ಲಿಯೂ ಅವುಗಳಿಂದ ಎದ್ದು ಬಾರದ ವ್ಯಕ್ತಿಯಂತೆ ಆಗಬಲ್ಲನೇ?[31] ಸತ್ಯನಿಷೇಧಿಗಳಿಗೆ ಇದೇ ರೀತಿಯಲ್ಲಿ ಅವರ ಕರ್ಮಗಳು ಸುಂದರವಾಗಿ ತೋರುವಂತೆ ಮಾಡಲಾಗಿದೆ.

اَوَمَنْ كَانَ مَيْتًا فَاَحْيَيْنٰهُ وَجَعَلْنَا لَهٗ
نُوْرًا يَّمْشِيْ بِهٖ فِى النَّاسِ كَمَنْ مَّثَلُهٗ
فِى الظُّلُمٰتِ لَيْسَ بِخَارِجٍ مِّنْهَا ؕ كَذٰلِكَ
زُيِّنَ لِلْكٰفِرِيْنَ مَا كَانُوْا يَعْمَلُوْنَ ﴿١٢٢﴾

123. ಇದೇ ರೀತಿ ನಾವು ಪ್ರತಿಯೊಂದು ಊರಿನಲ್ಲಿ ತಮ್ಮ ವಂಚನೆ ಮತ್ತು ಕುತಂತ್ರಗಳ ಜಾಲವನ್ನು ಹರಡಲು ಅದರ ದೊಡ್ಡ ದೊಡ್ಡ ಅಪರಾಧಿಗಳನ್ನು ಹಚ್ಚಿಬಿಟ್ಟಿದ್ದೇವೆ. ವಾಸ್ತವದಲ್ಲಿ ಅವರು ತಮ್ಮ ಮೋಸದ ಜಾಲದಲ್ಲಿ ತಾವೇ ಸಿಕ್ಕಿ ಬೀಳುತ್ತಾರೆ. ಆದರೆ ಅವರಿಗೆ ಅದರ ಬೋಧವಿಲ್ಲ.

وَكَذٰلِكَ جَعَلْنَا فِىْ كُلِّ قَرْيَةٍ اَكٰبِرَ
مُجْرِمِيْهَا لِيَمْكُرُوْا فِيْهَا ؕ وَمَا يَمْكُرُوْنَ
اِلَّا بِاَنْفُسِهِمْ وَمَا يَشْعُرُوْنَ ﴿١٢٣﴾

124. ಅವರ ಮುಂದೆ ಯಾವುದಾದರೂ ನಿದರ್ಶನ ಬಂದಾಗ, "ಅಲ್ಲಾಹನ ಸಂದೇಶವಾಹಕರಿಗೆ ಸಿಕ್ಕಿರುವ ವಸ್ತು ಸ್ವತಃ ನಮಗೆ ಸಿಗುವವರೆಗೂ ನಾವು ವಿಶ್ವಾಸವಿರಿಸಲಾರೆವು" ಎಂದು ಅವರು ಹೇಳುತ್ತಾರೆ. ತನ್ನ ಸಂದೇಶವಾಹಕತ್ವದ ಕಾರ್ಯವನ್ನು ಯಾರಿಂದ ಹೇಗೆ ಮಾಡಿಸ ಬೇಕೆಂಬುದನ್ನು ಅಲ್ಲಾಹನು ಬಹಳ ಚೆನ್ನಾಗಿ ಬಲ್ಲನು. ಈ ಅಪರಾಧಿಗಳು ತಮ್ಮ ಧೂರ್ತತನದ ಫಲವಾಗಿ ಅಲ್ಲಾಹನ ಬಳಿ ಅವಮಾನಕ್ಕೆ ಹಾಗೂ ಕಠಿಣಯಾತನೆಗೊಳಗಾಗುವ ಕಾಲ ಸನ್ನಿಹಿತವಾಗಿದೆ.

وَاِذَا جَآءَتْهُمْ اٰيَةٌ قَالُوْا لَنْ نُّؤْمِنَ
حَتّٰى نُؤْتٰى مِثْلَ مَاۤ اُوْتِىَ رُسُلُ اللّٰهِ ؔۘ اَللّٰهُ
اَعْلَمُ حَيْثُ يَجْعَلُ رِسَالَتَهٗ ؕ سَيُصِيْبُ
الَّذِيْنَ اَجْرَمُوْا صَغَارٌ عِنْدَ اللّٰهِ وَعَذَابٌ
شَدِيْدٌۢ بِمَا كَانُوْا يَمْكُرُوْنَ ﴿١٢٤﴾

125. ಆದರೆ (ಸತ್ಯವೇನೆಂದರೆ) ಅಲ್ಲಾಹನು ಯಾರಿಗೆ ಸನ್ಮಾರ್ಗ ನೀಡಲಿಚ್ಛಿಸುತ್ತಾನೋ ಅವನ ಹೃದಯವನ್ನು ಇಸ್ಲಾಮಿಗಾಗಿ

فَمَنْ يُّرِدِ اللّٰهُ اَنْ يَّهْدِيَهٗ يَشْرَحْ صَدْرَهٗ
لِلْاِسْلَامِ ۚ وَمَنْ يُّرِدْ اَنْ يُّضِلَّهٗ يَجْعَلْ

31. ಅರ್ಥಾತ್- ಮಾನವೀಯತೆಯ ಪರಿಜ್ಞಾನ ಮೂಡಿದ ಮತ್ತು ಜ್ಞಾನದ ಬೆಳಕಿನ ಮೂಲಕ ದುರ್ಮಾರ್ಗಗಳ ನಡುವೆ ಸನ್ಮಾರ್ಗವನ್ನು ಸ್ಪಷ್ಟವಾಗಿ ಕಾಣುತ್ತಿರುವ ವ್ಯಕ್ತಿಯು, ಅಜ್ಞಾನ ಮತ್ತು ತಿಳಿಗೇಡಿತನದ ಕತ್ತಲಲ್ಲಿ ತೊಳಲಾಡುತ್ತಿರುವ ವ್ಯಕ್ತಿಗಳಂತೆ ಲೋಕದಲ್ಲಿ ಜೀವನ ಸಾಗಿಸುವನು ಎಂದು ನೀವು ಭಾವಿಸುವುದಾದರೂ ಹೇಗೆ?

ತೆರೆದು ಬಿಡುತ್ತಾನೆ ಮತ್ತು ಯಾರನ್ನು ಪಥಭ್ರಷ್ಟತೆಯಲ್ಲಿಡ ಲಿಚ್ಛಿಸುತ್ತಾನೋ ಅವನ ಹೃದಯವನ್ನು ಸಂಕೀರ್ಣಗೊಳಿಸುತ್ತಾನೆ. (ಇಸ್ಲಾಮಿನ ಬಗ್ಗೆ ಯೋಚಿಸುತ್ತಲೇ) ಅವನಿಗೆ, ತನ್ನ ಆತ್ಮವು ಆಕಾಶಕ್ಕೆ ಹಾರಿ ಹೋಗುತ್ತಿರುವುದೋ ಎಂದು ಭಾಸವಾಗುವಂತೆ ಅದನ್ನು ಅದುಮುತ್ತಾನೆ. ಹೀಗೆ ಅಲ್ಲಾಹನು(ಸತ್ಯದಿಂದ ಪರಾರಿ ಮತ್ತು ಆ ಕುರಿತು ತಿರಸ್ಕಾರದ)[32] ಮಾಲಿನ್ಯವನ್ನು ವಿಶ್ವಾಸವಿಡ ದವರ ಮೇಲೆ ಹೇರಿ ಬಿಡುತ್ತಾನೆ.

صَدْرَهٗ ضَيِّقًا حَرَجًا كَاَنَّمَا يَصَّعَّدُ فِى السَّمَآءِ ؕ كَذٰلِكَ يَجْعَلُ اللّٰهُ الرِّجْسَ عَلَى الَّذِيْنَ لَا يُؤْمِنُوْنَ ﴿۱۲۵﴾

126. ನಿಜವಾಗಿ ಈ ಮಾರ್ಗ ನಿಮ್ಮ ಪ್ರಭುವಿನ ನೇರ ಮಾರ್ಗವಾಗಿರು ತ್ತದೆ ಮತ್ತು ಉಪದೇಶವನ್ನು ಸ್ವೀಕರಿಸುವವರಿಗೆ ಅದರ ಕುರುಹುಗಳು ವಿವರಿಸಲ್ಪಟ್ಟಿವೆ.

وَهٰذَا صِرَاطُ رَبِّكَ مُسْتَقِيْمًا ؕ قَدْ فَصَّلْنَا الْاٰيٰتِ لِقَوْمٍ يَّذَّكَّرُوْنَ ﴿۱۲۶﴾

127. ಅವರ ಪ್ರಭುವಿನ ಬಳಿ ಅವರಿಗಾಗಿ ಶಾಂತಿ ಸದನವಿದೆ ಮತ್ತು ಅವರು ಕೈಗೊಂಡ ಸರಿಯಾದ ಕರ್ಮವಿಧಾನದ ಕಾರಣ ಅವನು ಅವರ ಸಂರಕ್ಷಕನಾಗಿರುತ್ತಾನೆ.

لَهُمْ دَارُ السَّلٰمِ عِنْدَ رَبِّهِمْ وَهُوَ وَلِيُّهُمْ بِمَا كَانُوْا يَعْمَلُوْنَ ﴿۱۲۷﴾

128. ಅಲ್ಲಾಹನು ಇವರೆಲ್ಲರನ್ನು ಸುತ್ತುವರಿದು ಒಟ್ಟುಗೂಡಿಸುವ ದಿನ 'ಯಕ್ಷ'ಶೈತಾನರನ್ನುದ್ದೇಶಿಸಿ, "ಓ 'ಯಕ್ಷ' ಕೂಟವೇ, ನೀವಂತು ಮಾನವ ವರ್ಗವನ್ನು ಚೆನ್ನಾಗಿ ಮೋಸ ಮಾಡಿದಿರಿ" ಎಂದು ಹೇಳುವನು. ಮನುಷ್ಯರ ಪೈಕಿ ಅವರ ಆಪ್ತ ಮಿತ್ರರಾದ ವರು "ಪ್ರಭೂ, ನಮ್ಮಲ್ಲಿ ಪ್ರತಿಯೊಬ್ಬನು ಇನ್ನೊಬ್ಬನನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾನೆ. ಈಗ ನೀನು ನಮಗಾಗಿ ನಿಶ್ಚಯಿಸಿದ್ದ ಕಾಲ ಘಟ್ಟಕ್ಕೆ ನಾವು ಬಂದು ತಲುಪಿದ್ದೇವೆ" ಎಂದು ಹೇಳುವರು. ಆಗ ಅಲ್ಲಾಹನು, "ಈಗ ನರಕಾಗ್ನಿಯೇ ನಿಮ್ಮ ವಾಸಸ್ಥಾನವಾಗಿದ್ದು ಅದರಲ್ಲಿ ನೀವು ಸದಾ ವಾಸಿಸುವಿರಿ" ಎಂದು ಹೇಳುವನು. ಅಲ್ಲಾಹನು ಯಾರನ್ನು ರಕ್ಷಿಸಲಿಚ್ಛಿಸುವನೋ ಅವರು ಮಾತ್ರ ಅದರಿಂದ ರಕ್ಷಣೆ ಹೊಂದುವರು. ನಿಶ್ಚಯವಾಗಿಯೂ ನಿಮ್ಮ ಪ್ರಭು ಮಹಾಧೀಮಂತನೂ ಸರ್ವಜ್ಞನೂ ಆಗಿರುತ್ತಾನೆ.

وَيَوْمَ يَحْشُرُهُمْ جَمِيْعًا ۚ يٰمَعْشَرَ الْجِنِّ قَدِ اسْتَكْثَرْتُمْ مِّنَ الْاِنْسِ ۚ وَقَالَ اَوْلِيٰٓؤُهُمْ مِّنَ الْاِنْسِ رَبَّنَا اسْتَمْتَعَ بَعْضُنَا بِبَعْضٍ وَّبَلَغْنَآ اَجَلَنَا الَّذِىْٓ اَجَّلْتَ لَنَا ؕ قَالَ النَّارُ مَثْوٰىكُمْ خٰلِدِيْنَ فِيْهَآ اِلَّا مَا شَآءَ اللّٰهُ ؕ اِنَّ رَبَّكَ حَكِيْمٌ عَلِيْمٌ ﴿۱۲۸﴾

129. ಹೀಗೆ ಅಕ್ರಮಿಗಳು (ಭೂಲೋಕದಲ್ಲಿ ಪರಸ್ಪರ ಕೂಡಿಕೊಂಡು) ಮಾಡುತ್ತಿದ್ದ ದುಡಿಮೆಯ ಕಾರಣದಿಂದ ನಾವು (ಪರಲೋಕದಲ್ಲಿ) ಅವರನ್ನು ಪರಸ್ಪರರ ಸಂಗಾತಿಗಳಾಗಿ ಮಾಡುವೆವು.

وَكَذٰلِكَ نُوَلِّىْ بَعْضَ الظّٰلِمِيْنَ بَعْضًا بِمَا كَانُوْا يَكْسِبُوْنَ ﴿۱۲۹﴾

32. ಈ ವಾಕ್ಯದಿಂದ ಸ್ಪಷ್ಟವಾಗುವುದೇನೆಂದರೆ ವಿಶ್ವಾಸವಿಡದವರ ಮನಸ್ಸನ್ನು ಅಲ್ಲಾಹನು ಇಸ್ಲಾಮಿನ ಮಟ್ಟಿಗೆ ಸಂಕುಚಿತಗೊಳಿಸುತ್ತಾನೆ ಮತ್ತು ಅವನು ಅವರಿಗೆ ಮಾರ್ಗದರ್ಶನ ಮಾಡಲಿಚ್ಛಿಸುವುದಿಲ್ಲ.

130\. "ಓ 'ಯಕ್ಷ' ಮತ್ತು ಮಾನವ ವರ್ಗವೇ, ನಿಮಗೆ ನನ್ನ ನಿದರ್ಶನ ಗಳನ್ನು ಕೇಳಿಸುತ್ತ ಇಂದಿನ ಪರಿಣಾಮದ ಬಗ್ಗೆ ಎಚ್ಚರಿಸಲಿಕ್ಕಾಗಿ ನಿಮ್ಮ ಬಳಿಗೆ ನಿಮ್ಮೊಳಗಿಂದಲೇ ಸಂದೇಶವಾಹಕರು ಬಂದಿರಲಿಲ್ಲವೇ?" (ಎಂದೂ ಆ ಸಂದರ್ಭದಲ್ಲಿ ಅಲ್ಲಾಹನು ಅವರೊಡನೆ ಕೇಳುವನು) ಅವರು, "ನಿಜ. ನಮ್ಮ ವಿರುದ್ಧ ನಾವೇ ಸಾಕ್ಷಿ ಹೇಳುತ್ತೇವೆ" ಎನ್ನುವರು. ಇಂದು ಲೌಕಿಕ ಜೀವನವು ಇವರನ್ನು ವಂಚನೆಗೊಳಪಡಿಸಿರುತ್ತದೆ. ಆದರೆ ಆಗ ಅವರು ನಾವು ಸತ್ಯನಿಷೇಧಿಗಳಾಗಿದ್ದೆವೆಂದು ತಮ್ಮ ವಿರುದ್ಧ ತಾವೇ ಸಾಕ್ಷಿ ಹೇಳುವರು.

يٰمَعْشَرَ الْجِنِّ وَالْاِنْسِ اَلَمْ يَاْتِكُمْ
رُسُلٌ مِّنْكُمْ يَقُصُّوْنَ عَلَيْكُمْ اٰيٰتِيْ
وَيُنْذِرُوْنَكُمْ لِقَآءَ يَوْمِكُمْ هٰذَا ؕ قَالُوْا
شَهِدْنَا عَلٰٓى اَنْفُسِنَا وَغَرَّتْهُمُ الْحَيٰوةُ
الدُّنْيَا وَشَهِدُوْا عَلٰٓى اَنْفُسِهِمْ اَنَّهُمْ
كَانُوْا كٰفِرِيْنَ ﴿۱۳۰﴾

131\. ನಿಮ್ಮ ಪ್ರಭು, ನಾಡಿನ ನಿವಾಸಿಗಳು ವಾಸ್ತವಿಕತೆಯ ಬಗ್ಗೆ ಬೋಧ ರಹಿತರಾಗಿದ್ದಾಗ ಅಕ್ರಮವಾಗಿ ಆ ನಾಡುಗಳನ್ನು ನಾಶ ಗೊಳಿಸುವವನಾಗಿರಲಿಲ್ಲ (ಎಂಬುದು ಸಾಬೀತಾಗಲಿಕ್ಕಾಗಿ ಅವರಿಂದ ಈ ಸಾಕ್ಷ್ಯವನ್ನು ಪಡೆಯಲಾಗುವುದು)

ذٰلِكَ اَنْ لَّمْ يَكُنْ رَّبُّكَ مُهْلِكَ الْقُرٰى
بِظُلْمٍ وَّ اَهْلُهَا غٰفِلُوْنَ ﴿۱۳۱﴾

132\. ಪ್ರತಿಯೊಬ್ಬನ ಸ್ಥಾನವು ಅವನ ಕರ್ಮಕ್ಕನುಸಾರವಾಗಿರುತ್ತದೆ ಮತ್ತು ನಿಮ್ಮ ಪ್ರಭು ಜನರ ಕರ್ಮಗಳ ಬಗ್ಗೆ ಅಲಕ್ಷ್ಯ ನಾಗಿರುವುದಿಲ್ಲ.

وَلِكُلٍّ دَرَجٰتٌ مِّمَّا عَمِلُوْا ؕ وَمَا رَبُّكَ
بِغَافِلٍ عَمَّا يَعْمَلُوْنَ ﴿۱۳۲﴾

133\. ನಿಮ್ಮ ಪ್ರಭು ನಿರಪೇಕ್ಷನು ಮತ್ತು ದಯೆಯು ಅವನ ಧೋರಣೆಯಾಗಿದೆ. ಅವನು ನಿಮ್ಮನ್ನು ಬೇರೆ ಕೆಲವರ ವಂಶದಿಂದ ಉದ್ಭೂತಗೊಳಿಸಿದಂತೆ ಅವನಿಚ್ಛಿಸಿದರೆ ನಿಮ್ಮನ್ನು ನೀಗಿಸಿ ನಿಮ್ಮ ಸ್ಥಾನದಲ್ಲಿ ತನಗಿಷ್ಟ ಬಂದವರನ್ನು ತರಬಲ್ಲನು.

وَرَبُّكَ الْغَنِيُّ ذُو الرَّحْمَةِ ؕ اِنْ يَّشَاْ يُذْهِبْكُمْ
وَيَسْتَخْلِفْ مِنْۢ بَعْدِكُمْ مَّا يَشَآءُ كَمَآ
اَنْشَاَكُمْ مِّنْ ذُرِّيَّةِ قَوْمٍ اٰخَرِيْنَ ﴿۱۳۳﴾

134\. ನಿಮಗೆ ಯಾವುದರ ವಾಗ್ದಾನ ಮಾಡಲಾಗುತ್ತಿದೆಯೋ ಅದು ಬಂದೇ ತೀರುವುದು ಖಚಿತ. ನೀವು ಅಲ್ಲಾಹನನ್ನು ಮಣಿಸುವ ಸಾಮರ್ಥ್ಯವನ್ನು ಹೊಂದಿಲ್ಲ.

اِنَّ مَا تُوْعَدُوْنَ لَاٰتٍ ۙ وَّمَآ اَنْتُمْ
بِمُعْجِزِيْنَ ﴿۱۳۴﴾

135\. ಓ ಪೈಗಂಬರರೇ, ಹೇಳಿರಿ: "ಜನರೇ, ನೀವು ನಿಮ್ಮ ಸ್ಥಾನದಲ್ಲಿ ಕಾರ್ಯನಿರತರಾಗಿರಿ, ನಾನೂ ನನ್ನ ಸ್ಥಾನದಲ್ಲಿ ಕಾರ್ಯ ನಿರತನಾಗಿ ರುತ್ತೇನೆ. ಅಂತಿಮ ಪರಿಣಾಮ ಯಾರ ಪಾಲಿಗೆ ಹಿತಕರ ವಾಗಿರುವುದೆಂಬುದು ಸದ್ಯವೇ ನಿಮಗೆ ತಿಳಿದು ಬರುವುದು. ನಿಶ್ಚಯವಾಗಿಯೂ ಅಕ್ರಮಿಗಳು ಎಂದಿಗೂ ಯಶಸ್ಸು ಪಡೆಯಲಾರರು."

قُلْ يٰقَوْمِ اعْمَلُوْا عَلٰى مَكَانَتِكُمْ اِنِّيْ
عَامِلٌ ۚ فَسَوْفَ تَعْلَمُوْنَ ۙ مَنْ تَكُوْنُ لَهٗ
عَاقِبَةُ الدَّارِ ؕ اِنَّهٗ لَا يُفْلِحُ الظّٰلِمُوْنَ ﴿۱۳۵﴾

136\. ಇವರು ಅಲ್ಲಾಹನಿಗೆ, ಸ್ವತಃ ಆತನೇ ಉಂಟುಮಾಡಿದ ಹೊಲ

وَجَعَلُوْا لِلّٰهِ مِمَّا ذَرَاَ مِنَ الْحَرْثِ وَالْاَنْعَامِ

ಮತ್ತು ಜಾನುವಾರುಗಳಲ್ಲಿ ಒಂದಂಶವನ್ನು ನಿಶ್ಚಯಿಸಿದ್ದಾರೆ ಮತ್ತು ಇದು ಅಲ್ಲಾಹನಿಗೆ ಮತ್ತು ಇದು ನಾವು ನಿಶ್ಚಯಿಸಿಕೊಂಡಿರುವ ಸಹಭಾಗಿಗಳಿಗೆಂದು ತಾವೇ ಹೇಳಿಕೊಳ್ಳುತ್ತಾರೆ. ಆ ಬಳಿಕ ಇವರು ತಮ್ಮ ಸಹಭಾಗಿಗಳಿಗೆ ನಿಶ್ಚಯಿಸಿದ ಪಾಲು ಅಲ್ಲಾಹನಿಗೆ ಮುಟ್ಟುವುದಿಲ್ಲ. ಆದರೆ ಅಲ್ಲಾಹನಿಗೆ ನಿಶ್ಚಯಿಸಿದ ಪಾಲು ಇವರ ಸಹಭಾಗಿಗಳಿಗೆ ತಲುಪಿಬಿಡುತ್ತದೆ.[33] ಎಂತಹ ಕೆಟ್ಟ ತೀರ್ಮಾನ ಮಾಡುತ್ತಾರಿವರು.

نَصِيبًا فَقَالُوا هَٰذَا لِلَّهِ بِزَعْمِهِمْ وَهَٰذَا لِشُرَكَائِنَا ۖ فَمَا كَانَ لِشُرَكَائِهِمْ فَلَا يَصِلُ إِلَى اللَّهِ ۖ وَمَا كَانَ لِلَّهِ فَهُوَ يَصِلُ إِلَىٰ شُرَكَائِهِمْ ۗ سَاءَ مَا يَحْكُمُونَ ﴿١٣٦﴾

137. ಇದೇ ರೀತಿಯಲ್ಲಿ ಅನೇಕ 'ಬಹುದೇವವಿಶ್ವಾಸಿ'ಗಳಿಗೆ ಅವರ ಸಹಭಾಗಿಗಳು ತಮ್ಮ ಮಕ್ಕಳ ವಧೆಯನ್ನು ಮನೋಹರಗೊಳಿಸಿಬಿಟ್ಟಿದ್ದಾರೆ.[34] ಇದು, ಅವರನ್ನು ವಿನಾಶಕ್ಕೊಳಪಡಿಸಲಿಕ್ಕಾಗಿ ಮತ್ತು ಅವರ ಪಾಲಿಗೆ ಅವರ ಧರ್ಮವನ್ನು ಸಂದೇಹಾಸ್ಪದಗೊಳಿಸಲಿಕ್ಕಾಗಿ.[35] ಅಲ್ಲಾಹನಿಚ್ಛಿಸುತ್ತಿದ್ದರೆ ಇವರು ಹಾಗೆ ಮಾಡುತ್ತಿರಲಿಲ್ಲ. ಆದುದರಿಂದ ಇವರು ತಮ್ಮ ಸುಳ್ಳು ಸೃಷ್ಟನೆಯಲ್ಲೇ ಬಿದ್ದಿರಲಿಕ್ಕಾಗಿ ಇವರನ್ನು ಬಿಟ್ಟುಬಿಡಿರಿ.

وَكَذَٰلِكَ زَيَّنَ لِكَثِيرٍ مِّنَ الْمُشْرِكِينَ قَتْلَ أَوْلَادِهِمْ شُرَكَاؤُهُمْ لِيُرْدُوهُمْ وَلِيَلْبِسُوا عَلَيْهِمْ دِينَهُمْ ۖ وَلَوْ شَاءَ اللَّهُ مَا فَعَلُوهُ ۖ فَذَرْهُمْ وَمَا يَفْتَرُونَ ﴿١٣٧﴾

33. ಅವರು ದೇವನ ಹೆಸರಲ್ಲಿ ಪ್ರತ್ಯೇಕಿಸಲಾದ ಪಾಲಿನಲ್ಲೂ ತರತರದ ಕುತಂತ್ರಗಳನ್ನು ನಡೆಸಿ ಕಡಿತಗೊಳಿಸುತ್ತಿದ್ದರು. ಎಲ್ಲಾ ವಿಧದಿಂದಲೂ ತಮ್ಮ ಸ್ವಯಂಕೃತ ದೇವ ಸಹಭಾಗಿಗಳ ಅಂಶವನ್ನು ಹೆಚ್ಚಿಸಲು ಅವರು ಪ್ರಯತ್ನಿಸುತ್ತಿದ್ದರು. ಉದಾ: ಧಾನ್ಯ ಮತ್ತು ಹಣ್ಣುಹಂಪಲುಗಳನ್ನು ದೇವನ ಹೆಸರಲ್ಲಿ ಪ್ರತ್ಯೇಕಗೊಳಿಸುವ ಸಂದರ್ಭದಲ್ಲಿ ಸ್ವಲ್ಪ ಭಾಗ ಬಿದ್ದುಬಿಟ್ಟರೆ ಅದನ್ನು ತಮ್ಮ ಸಹಭಾಗಿಗಳ ಪಾಲಿಗೆ ಸೇರಿಸುತ್ತಿದ್ದರು. ಸಹಭಾಗಿಗಳ ಪಾಲು ಬಿದ್ದುಬಿಟ್ಟರೆ ಅಥವಾ ದೇವನಿಗಾಗಿ ಪ್ರತ್ಯೇಕಿಸಲಾದ ಭಾಗಕ್ಕೆ ಸೇರಿಬಿಟ್ಟರೆ ಅದನ್ನು ಮರಳಿ ಪಡೆದು ಕೊಳ್ಳುತ್ತಿದ್ದರು. ಹರಕೆ ಮಾಡಲಾದ ಧಾನ್ಯವನ್ನು ಉಪಯೋಗಿಸಬೇಕಾದಂತಹ ಅನಿವಾರ್ಯತೆ ಎದುರಾದರೆ ದೇವನ ಪಾಲನ್ನು ತಿಂದು ಬಿಡುತ್ತಿದ್ದರು. ಆದರೆ ತಮ್ಮ ಸಹಭಾಗಿಗಳ ಅಂಶಕ್ಕೆ ಕೈಯನ್ನೂ ತಾಗಿಸುತ್ತಿರಲಿಲ್ಲ. ಅದರಿಂದ ಯಾವ ಆಪತ್ತು ಬಂದೆರಗಬಹುದೋ ಎಂದು ಅವರು ಹೆದರುತ್ತಿದ್ದರು.

34. ಇಲ್ಲಿ 'ಸಹಭಾಗಿಗಳು' ಎಂಬ ಪದ ಪೂರ್ವೋಕ್ತ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿಲ್ಲ. ಪರಸ್ಪರರು ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. 136ನೆಯ ಸೂಕ್ತದಲ್ಲಿ ಸಹಭಾಗಿಗಳು ಎಂಬ ಪದ ಅವರ ಆರಾಧ್ಯರುಗಳು ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಅವರ ಶಿಫಾರಸು, ಮಧ್ಯವರ್ತಿತನ ಮತ್ತು ಪ್ರಭಾವದ ಮೂಲಕವೇ ಅನುಗ್ರಹ ಪ್ರಾಪ್ತವಾಗುತ್ತದೆಂದು ಅವರು ಭಾವಿಸುತ್ತಿದ್ದರು. ಅನುಗ್ರಹ ಪ್ರಾಪ್ತಿಗಾಗಿ ಸ್ತುತಿಸುವಾಗ ಆ ಆರಾಧ್ಯರುಗಳನ್ನೂ ಅವರು ದೇವನ ಸಹಭಾಗಿಗಳನ್ನಾಗಿ ಮಾಡುತ್ತಿದ್ದರು. ಆದರೆ ಈ ಸೂಕ್ತದಲ್ಲಿ 'ಸಹಭಾಗಿಗಳು' ಎಂಬ ಪದವನ್ನು ಶಿಶುಹತ್ಯೆಯ ಪದ್ಧತಿಯನ್ನು ಜಾರಿಗೊಳಿಸಿದ ಮನುಷ್ಯರ ಪಾಲಿಗೆ ಬಳಸಲಾಗಿದೆ. ಈ ಬರ್ಬರ ಪದ್ಧತಿಯನ್ನು ಜನರ ಪಾಲಿಗೆ ಧರ್ಮಸಮ್ಮತ ಮತ್ತು ಪ್ರಿಯಕರವಾಗಿ ಮಾಡಿದ ನರಪಿಶಾಚಿಗಳ ಕುರಿತು ಈ ಪದವನ್ನು ಉಪಯೋಗಿಸಲಾಗಿದೆ. ಶಿಶು ಹತ್ಯೆಯ ಮೂರು ವಿಧಿಗಳು ಅರಬರಲ್ಲಿ ಜಾರಿಯಲ್ಲಿದ್ದವು. ಕುರ್‌ಆನಿನಲ್ಲಿ ಆ ಮೂರೂ ಪದ್ಧತಿಗಳ ಕಡೆಗೆ ಸೂಚಿಸಲಾಗಿದೆ-

i) ಹೆಣ್ಣು ಶಿಶು ಹತ್ಯೆ: ಯಾರೂ ತನ್ನ ಅಳಿಯನಾಗಬಾರದು. ಗೋತ್ರ ಕಲಹದ ವೇಳೆ ಹೆಣ್ಮಕ್ಕಳು ಶತ್ರುಗಳ ಕೈ ಸೇರಬಾರದು. ಅಥವಾ ಇನ್ನಾವುದೇ ಕಾರಣದಿಂದ ಅವರು ತನ್ನ ಮಾನನಷ್ಟಕ್ಕೆ ಕಾರಣವಾಗಬಾರದು ಎಂಬುದೇ ಇದರ ಉದ್ದೇಶ.

ii) ಶಿಶು ಹತ್ಯೆ: ಅವರ ಪೋಷಣೆಯ ಭಾರವನ್ನು ಸಹಿಸಲು ಸಾಧ್ಯವಾಗದಿರುವುದು. ಆರ್ಥಿಕ ಮೂಲಗಳ ಕೊರತೆಯಿಂದಾಗಿ ಅವರು ಹೊರಲಾರದ ಹೊರೆಯಾಗಿ ಮಾರ್ಪಡುವುದು.

iii) ತಮ್ಮ ಆರಾಧ್ಯರುಗಳ ಸಂಪ್ರೀತಿಗಾಗಿ ಮಕ್ಕಳನ್ನು ಬಲಿ ಕೊಡುವುದು.

35. ಅಜ್ಞಾನ ಕಾಲದ ಅರಬರು ತಮ್ಮನ್ನು ಇಬ್‌ರಾಹೀಮ್ ಮತ್ತು ಇಸ್ಮಾಈಲರ(ಅ) ಅನುಯಾಯಿಗಳು ಎನ್ನುತ್ತಿದ್ದರು. ಆದ್ದರಿಂದ ತಾವು ಪಾಲಿಸುತ್ತಿರುವ ಧರ್ಮ, ದೇವನ ದೃಷ್ಟಿಯಲ್ಲಿ ಅತ್ಯಂತ ಪ್ರಿಯವಾದುದೆಂದು ಅವರು ಭಾವಿಸುತ್ತಿದ್ದರು. ಆದರೆ ಅವರ ಧರ್ಮದಲ್ಲಿ ಶತಮಾನಗಳಿಂದ ಧಾರ್ಮಿಕ ಮುಖಂಡರು, ಗೋತ್ರದ ನಾಯಕರು, ಕುಟುಂಬದ ಹಿರಿಯರೇ ಮುಂತಾದ ವ್ಯಕ್ತಿಗಳು ವಿವಿಧ ಬಗೆಯ

138. ಇವರು, ಈ ಪ್ರಾಣಿಗಳೂ ಈ ಹೊಲಗಳೂ ಸುರಕ್ಷಿತವಾಗಿವೆ. ಇವುಗಳನ್ನು ನಾವು ಉಣಿಸಲಿಚ್ಛಿಸುವವರು ಮಾತ್ರ ಉಣ್ಣಬಹುದು ಎನ್ನುತ್ತಾರೆ. ವಸ್ತುತಃ ಈ ನಿರ್ಬಂಧವು ಇವರ ಸ್ವಕಲ್ಪಿತವಾಗಿದೆ. ಹಾಗೆಯೇ ಕೆಲವು ಪ್ರಾಣಿಗಳ ಮೇಲೆ ಸವಾರಿ ಮಾಡುವುದೂ ಭಾರ ಹೇರುವುದೂ ನಿಷೇಧಿಸಲ್ಪಟ್ಟಿದೆ ಮತ್ತು ಇವರು ಅಲ್ಲಾಹನ ನಾಮವನ್ನುಚ್ಚರಿಸದ ಕೆಲವು ಪ್ರಾಣಿಗಳೂ ಇವೆ. ಇವೆಲ್ಲವೂ ಅವರು ಅಲ್ಲಾಹನ ಮೇಲೆ ಹೊರಿಸಿರುವ ಆರೋಪಗಳು. ಅಲ್ಲಾಹನು ಅವರಿಗೆ ಈ ಸುಳ್ಳಾರೋಪಗಳ ಪ್ರತಿಫಲವನ್ನು ಸದ್ಯದಲ್ಲೇ ಕೊಡುವನು.

وَقَالُوا هَٰذِهِ أَنْعَامٌ وَحَرْثٌ حِجْرٌ لَا
يَطْعَمُهَا إِلَّا مَنْ نَشَاءُ بِزَعْمِهِمْ وَأَنْعَامٌ
حُرِّمَتْ ظُهُورُهَا وَأَنْعَامٌ لَا يَذْكُرُونَ
اسْمَ اللَّهِ عَلَيْهَا افْتِرَاءً عَلَيْهِ ۚ سَيَجْزِيهِمْ
بِمَا كَانُوا يَفْتَرُونَ ﴿١٣٨﴾

139. ಈ ಪ್ರಾಣಿಗಳ ಹೊಟ್ಟೆಯೊಳಗಿರುವುದು ನಮ್ಮ ಪುರುಷರಿಗೆ ಕಾದಿರಿಸಿದ್ದೆಂದೂ ನಮ್ಮ ಸ್ತ್ರೀಯರಿಗೆ ಅದು ನಿಷಿದ್ಧವಾಗಿರುತ್ತದೆಂದೂ, ಅದು ಸತ್ತಿದ್ದರೆ ಮಾತ್ರ ಉಭಯತ್ರರೂ ಅದನ್ನು ತಿನ್ನುವುದರಲ್ಲಿ ಭಾಗಿಗಳಾಗಬಹುದೆಂದೂ ಅವರು ಹೇಳುತ್ತಾರೆ. ಅವರ ಈ ಕಲ್ಪಿತ ಮಾತುಗಳಿಗಾಗಿ ಅವರ ಪ್ರತಿಫಲವನ್ನು ಅಲ್ಲಾಹನು ಅವರಿಗೆ ಕೊಟ್ಟೇ ತೀರುವನು. ನಿಶ್ಚಯವಾಗಿಯೂ ಅವನು ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ.

وَقَالُوا مَا فِي بُطُونِ هَٰذِهِ الْأَنْعَامِ خَالِصَةٌ
لِذُكُورِنَا وَمُحَرَّمٌ عَلَىٰ أَزْوَاجِنَا ۖ وَإِنْ
يَكُنْ مَيْتَةً فَهُمْ فِيهِ شُرَكَاءُ ۚ سَيَجْزِيهِمْ
وَصْفَهُمْ ۚ إِنَّهُ حَكِيمٌ عَلِيمٌ ﴿١٣٩﴾

140. ನಿಶ್ಚಯವಾಗಿಯೂ ತಮ್ಮ ಮಕ್ಕಳನ್ನು ಅಜ್ಞಾನ ಮತ್ತು ತಿಳಿಗೇಡಿತನದಿಂದ ವಧಿಸಿದವರೂ ಅಲ್ಲಾಹನು ಪ್ರದಾನ ಮಾಡಿದ ಅನ್ನಾಹಾರವನ್ನು ಸುಳ್ಳು ಸೃಷ್ಟನೆಯೊಂದಿಗೆ ನಿಷೇಧ ಮಾಡಿಕೊಂಡವರೂ ನಷ್ಟದಲ್ಲಿ ಬಿದ್ದರು. ನಿಶ್ಚಯವಾಗಿಯೂ ಅವರು ಪಥಭ್ರಷ್ಟರಾದರು ಮತ್ತು ಎಷ್ಟು ಮಾತ್ರಕ್ಕೂ ಅವರು ಸನ್ಮಾರ್ಗ ಹೊಂದುವವರಲ್ಲಾಗಿರಲಿಲ್ಲ.

قَدْ خَسِرَ الَّذِينَ قَتَلُوا أَوْلَادَهُمْ سَفَهًا
بِغَيْرِ عِلْمٍ وَحَرَّمُوا مَا رَزَقَهُمُ اللَّهُ افْتِرَاءً
عَلَى اللَّهِ ۚ قَدْ ضَلُّوا وَمَا كَانُوا مُهْتَدِينَ ﴿١٤٠﴾

141. ತರತರದ ಉದ್ಯಾನಗಳನ್ನೂ ದ್ರಾಕ್ಷಾ ತೋಟಗಳನ್ನೂ ಖರ್ಜೂರ ತೋಟಗಳನ್ನೂ ಬೆಳೆಗಳನ್ನೂ ಬೆಳೆಸಿದವನು ಅಲ್ಲಾಹನೇ. ಅವುಗಳಿಂದ ತರತರದ ಆಹಾರ ಪದಾರ್ಥಗಳು ಸಿಗುತ್ತವೆ. ಝೈತೂನ್ (ಇಪ್ಪೆ) ಮತ್ತು ದಾಳಿಂಬೆಗಳ ಮರಗಳನ್ನೂ ಬೆಳೆಸಿದನು. ಅವುಗಳ ಫಲಗಳು ಆಕಾರದಲ್ಲಿ ಏಕ ಪ್ರಕಾರವಾಗಿದ್ದು ರುಚಿಯಲ್ಲಿ ಭಿನ್ನವಾಗಿರುತ್ತವೆ. ಅವುಗಳು ಫಲಿಸಿದಾಗ ಫಲಗಳನ್ನು ತಿನ್ನಿರಿ. ಅವುಗಳ ಬೆಳೆಯನ್ನು ಕೊಯ್ದಾಗ ಅಲ್ಲಾಹನ ಹಕ್ಕನ್ನು ಸಂದಾಯ ಮಾಡಿರಿ ಮತ್ತು ದುರ್ವ್ಯಯ ಮಾಡಬೇಡಿರಿ. ದುರ್ವ್ಯಯ ಮಾಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ.

وَهُوَ الَّذِي أَنْشَأَ جَنَّاتٍ مَعْرُوشَاتٍ وَغَيْرَ
مَعْرُوشَاتٍ وَالنَّخْلَ وَالزَّرْعَ مُخْتَلِفًا
أُكُلُهُ وَالزَّيْتُونَ وَالرُّمَّانَ مُتَشَابِهًا وَغَيْرَ
مُتَشَابِهٍ ۚ كُلُوا مِنْ ثَمَرِهِ إِذَا أَثْمَرَ وَ
آتُوا حَقَّهُ يَوْمَ حَصَادِهِ ۖ وَلَا تُسْرِفُوا ۚ
إِنَّهُ لَا يُحِبُّ الْمُسْرِفِينَ ﴿١٤١﴾

ನಂಬಿಕೆ, ಪದ್ಧತಿ ಮತ್ತು ಕಟ್ಟಳೆಗಳನ್ನು ಸೇರಿಸುತ್ತಾ ಬಂದಿದ್ದರು. ಅನಂತರದ ಪೀಳಿಗೆಗಳು ಅದನ್ನು ತಮ್ಮ ಧರ್ಮದ ಅವಿಭಾಜ್ಯ ಅಂಗವೆಂದು ಭಾವಿಸಿದವು. ಹೀಗೆ ಅವರ ಧರ್ಮ ಸಂಪೂರ್ಣವಾಗಿ ಸಂದೇಹಾಸ್ಪದವಾಯಿತು.

142. ಜಾನುವಾರುಗಳಲ್ಲಿ ಸವಾರಿ ಮತ್ತು ಹೊರೆ ಹೊರುವುದಕ್ಕಾಗಿ ಉಪಯೋಗವಾಗುವವುಗಳನ್ನೂ ತಿನ್ನಲು ಮತ್ತು ಹಾಸಲು ಉಪಯೋಗವಾಗುವವುಗಳನ್ನೂ[36] ಉಂಟುಮಾಡಿದವನು ಅವನೇ. ಅಲ್ಲಾಹನು ನಿಮಗೆ ದಯಪಾಲಿಸಿದ ವಸ್ತುಗಳಿಂದ ತಿನ್ನಿರಿ ಮತ್ತು ಶೈತಾನನನ್ನು ಅನುಸರಿಸಬೇಡಿರಿ. ನಿಜವಾಗಿಯೂ ಅವನು ನಿಮ್ಮ ಪ್ರತ್ಯಕ್ಷ ಶತ್ರು.

وَمِنَ الْأَنْعَامِ حَمُولَةً وَفَرْشًا ۚ كُلُوا مِمَّا رَزَقَكُمُ اللَّهُ وَلَا تَتَّبِعُوا خُطُوَاتِ الشَّيْطَانِ ۚ إِنَّهُ لَكُمْ عَدُوٌّ مُبِينٌ ﴿١٤٢﴾

143. ಇವು ಎಂಟು ಗಂಡು ಹೆಣ್ಣುಗಳು. ಎರಡು ಕುರಿಯ ಜಾತಿಯಿಂದ ಮತ್ತು ಎರಡು ಆಡಿನ ಜಾತಿಯಿಂದ. ಓ ಪೈಗಂಬರರೇ, ಇವರೊಡನೆ ಕೇಳಿರಿ - ಅಲ್ಲಾಹನು ನಿಷೇಧಿಸಿರುವುದು ಇವುಗಳ ಗಂಡನ್ನೇ ಅಥವಾ ಹೆಣ್ಣನ್ನೇ? ಅಥವಾ ಕುರಿಗಳ ಮತ್ತು ಆಡುಗಳ ಹೊಟ್ಟೆಯೊಳಗಿರುವ ಮರಿಗಳನ್ನೇ? ನೀವು ಸತ್ಯವಂತರಾಗಿದ್ದರೆ ಸರಿಯಾದ ಜ್ಞಾನದೊಂದಿಗೆ ನನಗೆ ತಿಳಿಸಿರಿ.

ثَمَانِيَةَ أَزْوَاجٍ ۖ مِنَ الضَّأْنِ اثْنَيْنِ وَمِنَ الْمَعْزِ اثْنَيْنِ ۗ قُلْ آلذَّكَرَيْنِ حَرَّمَ أَمِ الْأُنْثَيَيْنِ أَمَّا اشْتَمَلَتْ عَلَيْهِ أَرْحَامُ الْأُنْثَيَيْنِ ۖ نَبِّئُونِي بِعِلْمٍ إِنْ كُنْتُمْ صَادِقِينَ ﴿١٤٣﴾

144. ಇದೇ ರೀತಿಯಲ್ಲಿ ಎರಡು ಒಂಟೆಯ ಜಾತಿಯಿಂದ ಮತ್ತು ಎರಡು ದನದ ಜಾತಿಯಿಂದ ಇವೆ. ಕೇಳಿರಿ; ಅಲ್ಲಾಹನು ನಿಷೇಧಿಸಿರುವುದು ಇವುಗಳ ಗಂಡನ್ನೇ ಅಥವಾ ಹೆಣ್ಣನ್ನೇ ಅಥವಾ ಒಂಟೆ ಮತ್ತು ದನದ ಹೊಟ್ಟೆಯೊಳಗಿರುವ ಕರುಗಳನ್ನೇ? ಅಲ್ಲಾಹನು ಇವುಗಳನ್ನು ನಿಷೇಧಿಸಿದ ಆಜ್ಞೆ ಕೊಟ್ಟಾಗ ನೀವು ಉಪಸ್ಥಿತರಿದ್ದಿರಾ? ಜ್ಞಾನವಿಲ್ಲದೆ ಜನರನ್ನು ತಪ್ಪು ದಾರಿಗೆಳೆಯಲಿಕ್ಕಾಗಿ ಅಲ್ಲಾಹನ ಮೇಲೆ ಮಿಥ್ಯಾರೋಪ ಹೊರಿಸುವವನಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? ನಿಶ್ಚಯವಾಗಿಯೂ ಅಲ್ಲಾಹನು ಇಂತಹ ಅಕ್ರಮಿಗಳಿಗೆ ಮಾರ್ಗದರ್ಶನವನ್ನೀಯುವುದಿಲ್ಲ.

وَمِنَ الْإِبِلِ اثْنَيْنِ وَمِنَ الْبَقَرِ اثْنَيْنِ ۗ قُلْ آلذَّكَرَيْنِ حَرَّمَ أَمِ الْأُنْثَيَيْنِ أَمَّا اشْتَمَلَتْ عَلَيْهِ أَرْحَامُ الْأُنْثَيَيْنِ ۖ أَمْ كُنْتُمْ شُهَدَاءَ إِذْ وَصَّاكُمُ اللَّهُ بِهَٰذَا ۚ فَمَنْ أَظْلَمُ مِمَّنِ افْتَرَىٰ عَلَى اللَّهِ كَذِبًا لِيُضِلَّ النَّاسَ بِغَيْرِ عِلْمٍ ۗ إِنَّ اللَّهَ لَا يَهْدِي الْقَوْمَ الظَّالِمِينَ ﴿١٤٤﴾

145. ಓ ಪೈಗಂಬರರೇ, ಅವರೊಡನೆ ಹೇಳಿರಿ- ನನ್ನ ಬಳಿ ಬಂದಿರುವ 'ದಿವ್ಯವಾಣಿ'ಯಲ್ಲಂತೂ ಶವ ಅಥವಾ ಸುರಿಸಲ್ಪಟ್ಟ ರಕ್ತ ಅಥವಾ ಹಂದಿಯ ಮಾಂಸ- ಅದು ಮಲಿನವಾಗಿರುವುದರಿಂದ- ಅಥವಾ ಅಲ್ಲಾಹನ ಹೊರತು ಇತರರ ಹೆಸರಲ್ಲಿ ಬಲಿಕೊಡಲ್ಪಟ್ಟುದು[37] ಅದು ಧರ್ಮಭ್ರಷ್ಟವಾಗಿರುವುದರಿಂದ ಇವಲ್ಲದೆ ಇನ್ನಾವ ವಸ್ತುವೂ ತಿನ್ನುವವನಿಗೆ ನಿಷಿದ್ಧವಾಗಿರುವುದನ್ನು ನಾನು

قُلْ لَا أَجِدُ فِي مَا أُوحِيَ إِلَيَّ مُحَرَّمًا عَلَىٰ طَاعِمٍ يَطْعَمُهُ إِلَّا أَنْ يَكُونَ مَيْتَةً أَوْ دَمًا مَسْفُوحًا أَوْ لَحْمَ خِنْزِيرٍ فَإِنَّهُ رِجْسٌ أَوْ فِسْقًا أُهِلَّ لِغَيْرِ اللَّهِ بِهِ ۚ

36. ಅರ್ಥಾತ್- ಅವುಗಳ ತೊಗಲು ಮತ್ತು ರೋಮಗಳಿಂದ ಹಾಸನ್ನು ತಯಾರಿಸಲಾಗುತ್ತದೆ.

37. ಇದರ ಅರ್ಥ ಇವುಗಳನ್ನುಳಿದು ಬೇರಾವುದೇ ತಿನ್ನುವ ವಸ್ತು ಶರೀಅತ್‌ನಲ್ಲಿ ನಿಷಿದ್ಧವಲ್ಲ ಎಂದಲ್ಲ. ಬದಲಾಗಿ ನೀವು ನಿಷಿದ್ಧ

ಕಾಣುವುದಿಲ್ಲ. ಆದರೆ ಒಬ್ಬನು ವಿವಶಾವಸ್ಥೆಯಲ್ಲಿ ಆಜ್ಞೋಲ್ಲಂಘನೆಯ ಉದ್ದೇಶವಿಲ್ಲದೆ (ಇವುಗಳ ಪೈಕಿ ಏನನ್ನಾದರೂ ತಿಂದರೆ) ಮತ್ತು ಅಗತ್ಯದ ಮೇರೆಯನ್ನು ಮೀರದೆ ಇದ್ದರೆ ನಿಶ್ಚಯವಾಗಿಯೂ ನಿಮ್ಮ ಪ್ರಭು ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

فَمَنِ اضْطُرَّ غَيْرَ بَاغٍ وَّلَا عَادٍ فَإِنَّ
رَبَّكَ غَفُورٌ رَّحِيمٌ ﴿١٤٥﴾

146. ಯಹೂದಿತ್ವವನ್ನು ಸ್ವೀಕರಿಸಿಕೊಂಡವರ ಮೇಲೆ ನಾವು ಎಲ್ಲ ಉಗುರುಳ್ಳ ಪ್ರಾಣಿಗಳನ್ನು ನಿಷೇಧಿಸಿದ್ದೆವು. ಬೆನ್ನು ಅಥವಾ ಕರುಳುಗಳಿಗೆ ತಗಲಿದ ಅಥವಾ ಎಲುಬಿಗೆ ತಾಗಿಕೊಂಡಿರುವ ಕೊಬ್ಬಿನ ಹೊರತು ದನ ಮತ್ತು ಆಡಿನ ಕೊಬ್ಬನ್ನೂ (ನಿಷಿದ್ಧ ಗೊಳಿಸಿದ್ದೆವು). ನಾವು ಅವರಿಗೆ ಅವರ ಭಂಡಾಯಕ್ಕೆ ಕೊಟ್ಟ ಶಿಕ್ಷೆಯಿದು.[38] ನಿಶ್ಚಯವಾಗಿಯೂ ನಾವು ಹೇಳುವುದೆಲ್ಲ ಪರಮ ಸತ್ಯವೇ ಆಗಿರುತ್ತದೆ.

وَعَلَى الَّذِينَ هَادُوا حَرَّمْنَا كُلَّ ذِي
ظُفُرٍ ۖ وَمِنَ الْبَقَرِ وَالْغَنَمِ حَرَّمْنَا عَلَيْهِمْ
شُحُومَهُمَا إِلَّا مَا حَمَلَتْ ظُهُورُهُمَا أَوِ
الْحَوَايَا أَوْ مَا اخْتَلَطَ بِعَظْمٍ ۚ ذَٰلِكَ جَزَيْنَاهُم
بِبَغْيِهِمْ ۖ وَإِنَّا لَصَادِقُونَ ﴿١٤٦﴾

147. ಇನ್ನವರು ನಿಮ್ಮನ್ನು ಸುಳ್ಳಾಗಿಸಿದರೆ, ಅವರೊಡನೆ ಹೇಳಿರಿ- ನಿಮ್ಮ ಪ್ರಭುವಿನ ಕೃಪಾಶ್ರಯವು ಅತಿ ವಿಶಾಲವಾಗಿದೆ ಮತ್ತು ಅವನ ಶಿಕ್ಷೆಯನ್ನು ತಡೆಗಟ್ಟಲು ಅಪರಾಧಿಗಳಿಂದ ಸಾಧ್ಯವಾಗದು.

فَإِن كَذَّبُوكَ فَقُل رَّبُّكُمْ ذُو رَحْمَةٍ
وَاسِعَةٍ ۖ وَلَا يُرَدُّ بَأْسُهُ عَنِ الْقَوْمِ
الْمُجْرِمِينَ ﴿١٤٧﴾

148. (ನಿಮ್ಮ ಈ ಮಾತುಗಳಿಗೆ ಉತ್ತರವಾಗಿ) ಈ 'ಬಹುದೇವವಿಶ್ವಾಸಿ' ಗಳು, "ಅಲ್ಲಾಹನು ಇಚ್ಛಿಸುತ್ತಿದ್ದರೆ ನಾವೂ 'ದೇವಸಹಭಾಗಿತ್ವ' ಮಾಡುತ್ತಿರಲಿಲ್ಲ ನಮ್ಮ ಪೂರ್ವಿಕರೂ ಮಾಡುತ್ತಿರಲಿಲ್ಲ ಮತ್ತು ನಾವು ಯಾವ ವಸ್ತುಗಳನ್ನೂ ನಿಷಿದ್ಧಗೊಳಿಸುತ್ತಿರಲಿಲ್ಲ" ಎಂದು ಖಂಡಿತ ಹೇಳುವರು.[39] ಇವರಿಗಿಂತ ಮುಂಚಿನವರೂ ಇದೇ ತರದ ಮಾತುಗಳನ್ನು ಸೃಷ್ಟಿಸಿ ಸತ್ಯವನ್ನು ತಿರಸ್ಕರಿಸಿದರು. ಕೊನೆಗೆ ಅವರು ನಮ್ಮ ಯಾತನೆಯ ಸವಿಯನ್ನು ಆಸ್ವದಿಸಿ ಕೊಂಡರು. ಅವರೊಡನೆ ಹೇಳಿರಿ- "ನಿಮ್ಮ ಹತ್ತಿರ ನಮ್ಮ ಮುಂದಿರಿಸತಕ್ಕ ಜ್ಞಾನವೇನಾದರೂ ಇದೆಯೇ? ನೀವಂತು ಕೇವಲ ಗುಮಾನಿಯಂತೆ ನಡೆಯುತ್ತೀರಿ ಮತ್ತು ಬರೇ ಊಹಾಪೋಹೆ ಗಳನ್ನಿರಿಸುತ್ತೀರಿ."

سَيَقُولُ الَّذِينَ أَشْرَكُوا لَوْ شَاءَ اللَّهُ مَا
أَشْرَكْنَا وَلَا آبَاؤُنَا وَلَا حَرَّمْنَا مِن شَيْءٍ ۚ
كَذَٰلِكَ كَذَّبَ الَّذِينَ مِن قَبْلِهِمْ حَتَّىٰ
ذَاقُوا بَأْسَنَا ۗ قُلْ هَلْ عِندَكُم مِّنْ عِلْمٍ
فَتُخْرِجُوهُ لَنَا ۖ إِن تَتَّبِعُونَ إِلَّا الظَّنَّ وَ
إِنْ أَنتُمْ إِلَّا تَخْرُصُونَ ﴿١٤٨﴾

ಮಾಡಿಕೊಂಡಿರುವುದು ನಿಷಿದ್ಧ ವಸ್ತುಗಳಲ್ಲ. ನಿಜವಾಗಿ ನಿಷಿದ್ಧವಾದವುಗಳು ಇವು ಎಂದು ಇಲ್ಲಿ ಹೇಳಲಾಗಿದೆ. ವಿವರಣೆಗಾಗಿ ಅಲ್ ಮಾಯಿದಃ ಅಧ್ಯಾಯದ 2 ಮತ್ತು 7ನೆಯ ಟಿಪ್ಪಣಿಯನ್ನು ನೋಡಿರಿ.

38. ಆಲಿ ಇಮ್ರಾನ್‌ನ 93 ಮತ್ತು ಅನ್ನಿಸಾ ಅಧ್ಯಾಯದ 160ನೆಯ ಸೂಕ್ತವನ್ನು ನೋಡಿರಿ.

39. ಅಪರಾಧಿಗಳು ಮತ್ತು ಅಕ್ರಮಿಗಳು ಸದಾ ಮುಂದಿಡುತ್ತಾ ಬಂದಿರುವ ಹಳೆಯ ನೆಪಗಳನ್ನೇ ಅವರು ತಮ್ಮ ಅಪರಾಧ ಮತ್ತು ಅಕ್ರಮಗಳ ಸಮರ್ಥನೆಯಲ್ಲಿ ಮುಂದಿಡುತ್ತಾರೆ. ಅವರು ಹೀಗೆ ಹೇಳುವರು: ನಾವು ಬಹುದೇವಾರಾಧನೆಯಲ್ಲಿ ನಿರತವಾಗಬೇಕು, ನಾವು ನಿಷಿದ್ಧಗೊಳಿಸಿ ಕೊಂಡಿರುವವುಗಳೇ ನಮ್ಮ ಪಾಲಿಗೆ ನಿಷಿದ್ಧವಾಗಿರಬೇಕು ಎಂದು ಅಲ್ಲಾಹನು ನಮಗೆ ವಿಧಿಸಿದ್ದಾನೆ. ಅಲ್ಲಾಹನು ನಾವು ಹೀಗೆ

149 ಹೇಳಿರಿ: "(ನಿಮ್ಮ ಆಧಾರ ಪ್ರಮಾಣಕ್ಕೆದುರು) ಪರಮಾರ್ಥ ಕ್ಕೊಯ್ಯುವ ಆಧಾರ ಪ್ರಮಾಣವು ಅಲ್ಲಾಹನಲ್ಲಿದೆ. ಅಲ್ಲಾಹನು ಇಚ್ಛಿಸುತ್ತಿದ್ದರೆ ಖಂಡಿತವಾಗಿಯೂ ನಿಮಗೆಲ್ಲರಿಗೂ ಸನ್ಮಾರ್ಗ ದರ್ಶನ ನೀಡುತ್ತಿದ್ದನು."[40]

قُلْ فَلِلّٰهِ الْحُجَّةُ الْبَالِغَةُ ۚ فَلَوْ شَآءَ لَهَدٰىكُمْ اَجْمَعِيْنَ ﴿١٤٩﴾

150. ಅವರೊಡನೆ ಹೇಳಿರಿ: "ಅಲ್ಲಾಹನೇ ಈ ವಸ್ತುಗಳನ್ನು ನಿಷಿದ್ಧ ಗೊಳಿಸಿರುತ್ತಾನೆಂದು ಸಾಕ್ಷ್ಯ ಹೇಳುವ ನಿಮ್ಮ ಸಾಕ್ಷಿಗಳನ್ನು ತನ್ನಿರಿ." ಅವರು ಸಾಕ್ಷಿ ಹೇಳಿಬಿಟ್ಟರೂ ನೀವು ಅವರೊಂದಿಗೆ ಸಾಕ್ಷಿ ಹೇಳಬಾರದು.[41] ಮತ್ತು ನೀವು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸುವ, ಪರಲೋಕವನ್ನು ನಿರಾಕರಿಸುವ ಮತ್ತು ಇತರರನ್ನು ತಮ್ಮ ಪ್ರಭುವಿಗೆ ಸಮಾನರಾಗಿ ಮಾಡುವವರ ಅಭಿಲಾಷೆಗಳನ್ನು ಅನುಸರಿಸಬೇಡಿರಿ.

قُلْ هَلُمَّ شُهَدَآءَكُمُ الَّذِيْنَ يَشْهَدُوْنَ اَنَّ اللّٰهَ حَرَّمَ هٰذَا ۚ فَاِنْ شَهِدُوْا فَلَا تَشْهَدْ مَعَهُمْ ۚ وَلَا تَتَّبِعْ اَهْوَآءَ الَّذِيْنَ كَذَّبُوْا بِاٰيٰتِنَا وَالَّذِيْنَ لَا يُؤْمِنُوْنَ بِالْاٰخِرَةِ وَهُمْ بِرَبِّهِمْ يَعْدِلُوْنَ ﴿١٥٠﴾

151. ಓ ಪೈಗಂಬರರೇ, ನೀವು ಅವರೊಡನೆ ಹೇಳಿರಿ: "ಬನ್ನಿರಿ ನಿಮ್ಮ ಪ್ರಭು ನಿಮ್ಮ ಮೇಲೆ ಯಾವ ನಿರ್ಬಂಧಗಳನ್ನು ಹೊರಿಸಿರುತ್ತಾನೆಂಬುದನ್ನು ನಾನು ತಿಳಿಸುವೆನು.[42] ಅವನೊಂದಿಗೆ ಯಾವುದನ್ನೂ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರೊಂದಿಗೆ ಸೌಜನ್ಯ ದೊಂದಿಗೆ ವರ್ತಿಸಿರಿ. ಮತ್ತು ನಿಮ್ಮ ಮಕ್ಕಳನ್ನು ದಾರಿದ್ರ್ಯದ ಭಯದಿಂದ ವಧಿಸಬೇಡಿರಿ. ನಾವು ನಿಮಗೂ ಜೀವನೋಪಾಧಿ ಯನ್ನು ನೀಡುತ್ತೇವೆ ಅವರಿಗೂ ನೀಡುವೆವು ಮತ್ತು ಅಶ್ಲೀಲ

قُلْ تَعَالَوْا اَتْلُ مَا حَرَّمَ رَبُّكُمْ عَلَيْكُمْ اَلَّا تُشْرِكُوْا بِهٖ شَيْـًٔا وَّبِالْوَالِدَيْنِ اِحْسَانًا ۚ وَلَا تَقْتُلُوْٓا اَوْلَادَكُمْ مِّنْ اِمْلَاقٍ ۭ نَحْنُ نَرْزُقُكُمْ وَاِيَّاهُمْ ۚ وَلَا تَقْرَبُوا الْفَوَاحِشَ مَا ظَهَرَ مِنْهَا وَمَا بَطَنَ ۚ وَلَا تَقْتُلُوا النَّفْسَ

ಮಾಡಬಾರದು ಎಂದು ಬಯಸಿದ್ದರೆ ನಮಗೆ ಈ ಕೃತ್ಯಗಳನ್ನೆಸಗಲು ಹೇಗೆ ಸಾಧ್ಯ? ಅಲ್ಲಾಹನ ವಿಧಿಯಂತೆಯೇ ನಾವು ಈ ಎಲ್ಲಾ ಕೆಲಸಗಳನ್ನು ಮಾಡುತ್ತಿರುವುದರಿಂದ ಸರಿಯಾದುದನ್ನೇ ಮಾಡುತ್ತಿದ್ದೇವೆ. ಅದಕ್ಕಾಗಿ ಒಂದು ವೇಳೆ ಆಕ್ಷೇಪಿಸಬೇಕಾದರೆ ಅಲ್ಲಾಹನನ್ನೇ ಆಕ್ಷೇಪಿಸಬೇಕು, ನಮ್ಮನ್ನಲ್ಲ. ಏಕೆಂದರೆ ನಾವು ಹಾಗೆ ಮಾಡಲು ನಿರ್ಬಂಧಿತರಾಗಿದ್ದೇವೆ. ಅದಕ್ಕಿಂತ ಭಿನ್ನವಾದುದೇನನ್ನಾದರೂ ಮಾಡಲು ನಾವು ಸಮರ್ಥರಲ್ಲ.

40. ಅಲ್ಲಾಹನಿಚ್ಛಿಸಿದ್ದರೆ ನಾವು ಬಹುದೇವಾರಾಧನೆ ಮಾಡುತ್ತಿರಲಿಲ್ಲ ಎಂದಷ್ಟೇ ನೀವು ಸಮರ್ಥನೆಯಲ್ಲಿ ಹೇಳಿಕೊಳ್ಳುತ್ತೀರಿ. ಆದರೆ ಅದರಿಂದ ಮಾತು ಪೂರ್ಣಗೊಳ್ಳುವುದಿಲ್ಲ. ಮಾತನ್ನು ಪೂರ್ತಿಗೊಳಿಸಬೇಕೆಂದಿದ್ದರೆ, ಅಲ್ಲಾಹನಿಚ್ಛಿಸಿದ್ದರೆ ಎಲ್ಲರಿಗೂ ಸನ್ಮಾರ್ಗ ತೋರುತ್ತಿದ್ದ ಎಂದು ಹೇಳಿರಿ. ಬೇರೆ ಪದಗಳಲ್ಲಿ ಹೇಳುವುದಾದರೆ ನೀವು ಸ್ವತಃ ಸನ್ಮಾರ್ಗವನ್ನು ಆಯ್ಕೆ ಮಾಡಲು ಸಿದ್ಧರಿಲ್ಲ. ಅಲ್ಲಾಹನು ದೇವಚರರನ್ನು ಆಜನ್ಮ ಸನ್ಮಾರ್ಗಗಾಮಿಗಳಾಗಿ ಮಾಡಿರುವಂತೆ ನಿಮ್ಮನ್ನೂ ಮಾಡಬೇಕಾಗಿತ್ತೆಂದು ನೀವು ಭಾವಿಸುತ್ತೀರಿ. ಮನುಷ್ಯನ ಪಾಲಿಗೂ ದೇವವಿಧಿ ಹಾಗೆಯೇ ಆಗಿರುತ್ತಿದ್ದರೆ ಅಲ್ಲಾಹನು ಅವರನ್ನು ಹಾಗೆಯೇ ಸೃಷ್ಟಿಸುತ್ತಿದ್ದನು. ಆದರೆ ಅದು ಅಲ್ಲಾಹನ ವಿಧಿಯಲ್ಲ. ಆದ್ದರಿಂದ ಅಲ್ಲಾಹನೂ ನೀವು ಸ್ವತಃ ನೆಚ್ಚಿಕೊಂಡಿರುವ ಪಥಭ್ರಷ್ಟತೆಯ ಮಾರ್ಗದಲ್ಲಿ ನಿಮ್ಮನ್ನು ಬಿದ್ದುಕೊಂಡಿರಲು ಬಿಟ್ಟು ಬಿಡುವನು.

41. ಅರ್ಥಾತ್- ತನಗೆ ತಿಳಿದಿರುವ ವಿಷಯಗಳ ಬಗ್ಗೆ ಮಾತ್ರ ಸಾಕ್ಷ್ಯ ಹೇಳಲು ಸಾಧ್ಯವಿದೆ ಎಂಬ ಸಾಕ್ಷ್ಯದ ಜವಾಬ್ದಾರಿಯ ಬಗ್ಗೆ ಚೆನ್ನಾಗಿ ತಿಳಿದಿದ್ದರೆ ಅವರೆಂದೂ ಈ ರೀತಿ ಸಾಕ್ಷ್ಯ ಹೇಳುವ ಧೈರ್ಯ ತಾಳಲಾರರು. ಒಂದು ವೇಳೆ ಅವರು ಸಾಕ್ಷ್ಯದ ಜವಾಬ್ದಾರಿಯನ್ನರಿಯದೆ ದೇವನ ಹೆಸರೆತ್ತಿ ಸುಳ್ಳು ಸಾಕ್ಷ್ಯ ಹೇಳುವ ಭಂಡ ಧೈರ್ಯ ತೋರಿದರೆ ಅವರ ಸುಳ್ಳಿನಲ್ಲಿ ನೀವೂ ಅವರ ಜತೆಗಾರರಾಗಿ ಮಾರ್ಪಡದಿರಿ.

42. ಅರ್ಥಾತ್- ನೀವು ಯಾವುದನ್ನು ಅಳವಡಿಸಿಕೊಂಡಿದ್ದೀರೋ ಅದು ದೇವನ ವತಿಯಿಂದ ಗೊತ್ತು ಪಡಿಸಲಾದ ನಿರ್ಬಂಧಗಳಲ್ಲ. ನಿಜವಾದ ನಿರ್ಬಂಧಗಳು ಇವುಗಳಾಗಿವೆ.

ವಿಷಯಗಳನ್ನು ಸಮೀಪಿಸಬೇಡಿರಿ-[43] ಅದು ಪ್ರತ್ಯಕ್ಷವಿರಲಿ ಪರೋಕ್ಷವಿರಲಿ, ಅಲ್ಲಾಹನು ಸನ್ಮಾನಿಸಿದ ಯಾವ ಜೀವವನ್ನೂ ನ್ಯಾಯದ ವಿನಾ ಕೊಲೆ ಮಾಡಬೇಡಿರಿ. ನೀವು ವಿವೇಚಿಸಬಹುದೆಂದು ಅವನು ನಿಮಗೆ ಈ ಆದೇಶಗಳನ್ನು ನೀಡಿರುತ್ತಾನೆ.

الَّتِي حَرَّمَ اللَّهُ إِلَّا بِالْحَقِّ ۚ ذَٰلِكُمْ وَصَّاكُم بِهِ لَعَلَّكُمْ تَعْقِلُونَ ﴿١٥١﴾

152. ಮಾತ್ರವಲ್ಲದೆ ಅನಾಥರು ಪ್ರಬುದ್ಧರಾಗುವ ವರೆಗೆ ಅತ್ಯುತ್ತಮ ರೀತಿಯ ಹೊರತು ಅವರ ಸೊತ್ತಿನ ಬಳಿ ಸುಳಿಯಬೇಡಿರಿ. ಅಳತೆ ಮತ್ತು ತೂಕಗಳಲ್ಲಿ ಸಂಪೂರ್ಣ ನ್ಯಾಯದೊಂದಿಗೆ ವರ್ತಿಸಿರಿ. ನಾವು ಪ್ರತಿಯೊಬ್ಬನ ಮೇಲೆ ಅವನಿಂದ ಹೊರಲಿಕ್ಕಾಗುವಷ್ಟು ಹೊಣೆಗಾರಿಕೆಯ ಭಾರವನ್ನು ಮಾತ್ರ ಹೊರಿಸುತ್ತೇವೆ. ವಿಷಯವು ನಿಮ್ಮ ಆಪ್ತ ಬಂಧುಗಳಿಗೆ ಸಂಬಂಧಿಸಿದುದೇ ಆಗಿದ್ದರೂ ಮಾತಾಡುವಾಗ ನ್ಯಾಯಪೂರ್ವಕವಾಗಿಯೇ ಮಾತಾಡಿರಿ ಮತ್ತು ಅಲ್ಲಾಹನ ಕರಾರನ್ನು ಪೂರ್ತಿಗೊಳಿಸಿರಿ.[44] ನೀವು ಉಪದೇಶ ಸ್ವೀಕರಿಸಬಹುದೆಂದು ನಿರೀಕ್ಷಿಸಿ ಅಲ್ಲಾಹನು ಈ ವಿಷಯಗಳ ಆದೇಶವನ್ನು ನಿಮಗೆ ನೀಡಿದ್ದಾನೆ.

وَلَا تَقْرَبُوا مَالَ الْيَتِيمِ إِلَّا بِالَّتِي هِيَ أَحْسَنُ حَتَّىٰ يَبْلُغَ أَشُدَّهُ ۖ وَأَوْفُوا الْكَيْلَ وَالْمِيزَانَ بِالْقِسْطِ ۖ لَا نُكَلِّفُ نَفْسًا إِلَّا وُسْعَهَا ۖ وَإِذَا قُلْتُمْ فَاعْدِلُوا وَلَوْ كَانَ ذَا قُرْبَىٰ ۖ وَبِعَهْدِ اللَّهِ أَوْفُوا ۚ ذَٰلِكُمْ وَصَّاكُم بِهِ لَعَلَّكُمْ تَذَكَّرُونَ ﴿١٥٢﴾

153. ನನ್ನ ನೇರ ಮಾರ್ಗವು ಇದುವೇ ಆದುದರಿಂದ ಇದರಲ್ಲೇ ನಡೆಯಿರಿ ಮತ್ತು ಅನ್ಯಮಾರ್ಗದಲ್ಲಿ ನಡೆಯದಿರಿ. ಅವು ಅವನ ಮಾರ್ಗದಿಂದ ತಪ್ಪಿಸಿ ನಿಮ್ಮನ್ನು ಚದುರಿಸಿ ಬಿಡುವುವು. ನೀವು ವಕ್ರತೆಯಿಂದ ದೂರವಿರಬಹುದೆಂದು ನಿರೀಕ್ಷಿಸಿ ನಿಮ್ಮ ಪ್ರಭು ನಿಮಗೆ ನೀಡಿದ ಆದೇಶವಿದು.

وَأَنَّ هَٰذَا صِرَاطِي مُسْتَقِيمًا فَاتَّبِعُوهُ ۖ وَلَا تَتَّبِعُوا السُّبُلَ فَتَفَرَّقَ بِكُمْ عَن سَبِيلِهِ ۚ ذَٰلِكُمْ وَصَّاكُم بِهِ لَعَلَّكُمْ تَتَّقُونَ ﴿١٥٣﴾

154. ಅನಂತರ ನಾವು ಮೂಸಾರಿಗೆ ಗ್ರಂಥವನ್ನು ದಯಪಾಲಿಸಿದ್ದೆವು. ಅದು ಉತ್ತಮ ರೀತಿಯನ್ನನುಸರಿಸುವವರ ಮೇಲೆ ಭವ್ಯಕೊಡುಗೆಗಳ ಪರಿಪೂರ್ಣತೆ, ಅಗತ್ಯವುಳ್ಳ ಪ್ರತಿಯೊಂದು ವಿಷಯದ ವಿವರಣೆ ಮತ್ತು ಸಾದ್ಯಂತ ಮಾರ್ಗದರ್ಶನ ಮತ್ತು ಕೃಪೆಯಾಗಿತ್ತು. ಅದು, ಜನರು ತಮ್ಮ ಪ್ರಭುವಿನ ಭೇಟಿಯ ಮೇಲೆ ವಿಶ್ವಾಸವಿರಿಸುವವರೆಂದು ನಿರೀಕ್ಷಿಸಿ (ಬನೀ ಇಸ್‌ರಾಈಲರಿಗೆ ಕೊಡಲ್ಪಟ್ಟಿತ್ತು)[45]

ثُمَّ آتَيْنَا مُوسَى الْكِتَابَ تَمَامًا عَلَى الَّذِي أَحْسَنَ وَتَفْصِيلًا لِّكُلِّ شَيْءٍ وَهُدًى وَرَحْمَةً لَّعَلَّهُم بِلِقَاءِ رَبِّهِمْ يُؤْمِنُونَ ﴿١٥٤﴾

43. ಮೂಲದಲ್ಲಿ 'ಫವಾಹಿಶ್' ಎಂಬ ಪದ ಪ್ರಯೋಗವಾಗಿದೆ. ಸುವ್ಯಕ್ತವಾದ ಎಲ್ಲಾ ನೀಚ ಕಾರ್ಯಗಳಿಗೂ ಇದು ಅನ್ವಯಿಸುತ್ತದೆ. ಕುರ್‌ಆನಿನಲ್ಲಿ ವ್ಯಭಿಚಾರ, ಸಲಿಂಗರತಿ, ನಗ್ನತೆ, ವ್ಯಭಿಚಾರದ ಸುಳ್ಳಾರೋಪ, ತಂದೆ ವಿವಾಹವಾದಾಕೆಯನ್ನು ವರಿಸುವುದೇ ಮುಂತಾದವುಗಳನ್ನು ಅಶ್ಲೀಲ ಕಾರ್ಯಗಳೆಂದು ಹೇಳಲಾಗಿದೆ. ಕಳ್ಳತನ, ಮದ್ಯಪಾನ, ಭಿಕ್ಷಾಟನೆ ಇತ್ಯಾದಿಗಳನ್ನು ಸಾರಾಸಗಟಾಗಿ ಪ್ರವಾದಿ ವಚನದಲ್ಲೂ ಅಶ್ಲೀಲತೆಯೆಂದು ಕರೆಯಲಾಗಿದೆ. ಇಂತಹ ಲಜ್ಜಾಸ್ಪದ ಕೆಲಸಗಳೆಲ್ಲವೂ ಅಶ್ಲೀಲತೆಯಲ್ಲಿ ಸೇರಿವೆ. ಇಂತಹ ಕೆಲಸಗಳನ್ನು ನೀವು ಬಹಿರಂಗವಾಗಿಯೂ ಮಾಡದಿರಿ. ಗೋಪ್ಯವಾಗಿಯೂ ಮಾಡದಿರಿ.

44. 'ಅಲ್ಲಾಹನ ಕರಾರು' ಎಂದರೆ ದೇವ ಮತ್ತು ಮನುಷ್ಯರ ನಡುವೆ ಹಾಗೂ ಮನುಷ್ಯ-ಮನುಷ್ಯರ ನಡುವೆ- ಮಾನವನೊಬ್ಬ ಅಲ್ಲಾಹನ ಭೂಮಿಯಲ್ಲಿ ಹಾಗೂ ಮಾನವ ಸಮಾಜದಲ್ಲಿ ಜನ್ಮತಾಳಿದಾಗ ಸ್ವಾಭಾವಿಕವಾಗಿ ಮಾರ್ಪಡುವ ಕರಾರುಗಳಾಗಿವೆ.

155. ಅದೇ ರೀತಿಯಲ್ಲಿ ಮಂಗಲದಾಯಕವಾದ ಈ ಗ್ರಂಥವನ್ನೂ ನಾವು ಅವತೀರ್ಣ ಗೊಳಿಸಿದ್ದೇವೆ. ಆದುದರಿಂದ ನೀವು ಇದನ್ನು ಅನುಸರಿಸಿರಿ ಮತ್ತು ಧರ್ಮನಿಷ್ಠೆಯ ನೀತಿಯನ್ನಿರಿಸಿಕೊಳ್ಳಿರಿ. ನಿಮ್ಮ ಮೇಲೆ ಕೃಪೆ ತೋರಲ್ಪಡಲೂ ಬಹುದು.

وَهٰذَا كِتٰبٌ اَنْزَلْنٰهُ مُبٰرَكٌ فَاتَّبِعُوْهُ
وَاتَّقُوْا لَعَلَّكُمْ تُرْحَمُوْنَ ۝١٥٥

156. ಗ್ರಂಥವನ್ನು ನಮಗಿಂತ ಮುಂಚಿನ ಎರಡು ಪಂಗಡಗಳಿಗೆ ಕೊಡಲಾಗಿತ್ತೆಂದೂ ಅವರು ಏನನ್ನು ಓದುತ್ತಿದ್ದರು ಮತ್ತು ಓದಿಸುತ್ತಿದ್ದರೆಂಬ ಸಮಾಚಾರವೇ ನಮಗೆ ತಿಳಿದಿರಲಿಲ್ಲವೆಂದೂ ಈಗ ನೀವು ಹೇಳಲಾರಿರಿ.

اَنْ تَقُوْلُوْٓا اِنَّمَآ اُنْزِلَ الْكِتٰبُ عَلٰى طَآىِٕفَتَيْنِ
مِنْ قَبْلِنَا ۪ وَاِنْ كُنَّا عَنْ دِرَاسَتِهِمْ لَغٰفِلِيْنَ ۝١٥٦

157. ನಮ್ಮ ಮೇಲೆ ಗ್ರಂಥ ಅವತೀರ್ಣಗೊಳಿಸಲ್ಪಡುತ್ತಿದ್ದರೆ ನಾವು ಅವರಿಗಿಂತಲೂ ಹೆಚ್ಚು ಸತ್ಯಸಂಧರೆಂದು ಸಾದರಪಡಿಸುತ್ತಿದ್ದೆ ವೆಂಬ ನೆಪವನ್ನು ಈಗ ನೀವು ಹೂಡಲಾರಿರಿ. ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಒಂದು ಸುವ್ಯಕ್ತ ಪ್ರಮಾಣ, ಮಾರ್ಗದರ್ಶನ ಮತ್ತು ಕೃಪೆಯು ಬಂದುಬಿಟ್ಟಿದೆ. ಈಗ ಅಲ್ಲಾಹನ ನಿದರ್ಶನಗಳನ್ನು ಸುಳ್ಳಾಗಿಸುವ ಮತ್ತು ಅವುಗಳನ್ನು ತಿರಸ್ಕರಿಸುವವನಿಗಿಂತ ದೊಡ್ಡ ಅಕ್ರಮಿ ಯಾರಿರಬಹುದು. ನಮ್ಮ ನಿದರ್ಶನಗಳನ್ನು ತಿರಸ್ಕರಿಸುವವರಿಗೆ ಅವರ ತಿರಸ್ಕಾರದ ಫಲವಾಗಿ ನಾವು ಅತ್ಯಂತ ಕೆಟ್ಟ ಶಿಕ್ಷೆಯನ್ನು ಕೊಟ್ಟೇ ತೀರುವೆವು.

اَوْ تَقُوْلُوْا لَوْ اَنَّآ اُنْزِلَ عَلَيْنَا الْكِتٰبُ لَكُنَّآ
اَهْدٰى مِنْهُمْ ۚ فَقَدْ جَآءَكُمْ بَيِّنَةٌ مِّنْ
رَّبِّكُمْ وَهُدًى وَّرَحْمَةٌ ۚ فَمَنْ اَظْلَمُ
مِمَّنْ كَذَّبَ بِاٰيٰتِ اللّٰهِ وَصَدَفَ عَنْهَا ؕ
سَنَجْزِى الَّذِيْنَ يَصْدِفُوْنَ عَنْ اٰيٰتِنَا
سُوْٓءَ الْعَذَابِ بِمَا كَانُوْا يَصْدِفُوْنَ ۝١٥٧

158. ಅವರ ಮುಂದೆ ದೇವಚರರು ಬಂದು ನಿಲ್ಲಬೇಕೆಂದು ಅಥವಾ ನಿಮ್ಮ ಪ್ರಭು ಸ್ವತಃ ಬರಬೇಕೆಂದು ಅಥವಾ ನಿಮ್ಮ ಪ್ರಭುವಿನ ಕೆಲವು ನಿದರ್ಶನಗಳು ತೋರಿ ಬರಬೇಕೆಂದು[46] ಇವರು ನಿರೀಕ್ಷಿಸು ತ್ತಿರುವರೇ? ನಿಮ್ಮ ಪ್ರಭುವಿನ ಕೆಲವು ನಿದರ್ಶನಗಳು ಪ್ರತ್ಯಕ್ಷವಾಗಿ ಬಿಟ್ಟ ದಿನ, ಈ ಹಿಂದೆ ವಿಶ್ವಾಸವಿಡದಿದ್ದ ಅಥವಾ ತನ್ನ ವಿಶ್ವಾಸದಿಂದ ಏನಾದರೂ ಒಳಿತನ್ನು ಸಂಪಾದಿಸದವನ 'ವಿಶ್ವಾಸ'ವು ಏನೂ ಫಲ ಕೊಡಲಾರದು. ಓ ಪೈಗಂಬರರೇ, ಹೇಳಿರಿ: "ನೀವು ಕಾದು ನೋಡಿರಿ, ನಾವೂ ಕಾದಿರುತ್ತೇವೆ."

هَلْ يَنْظُرُوْنَ اِلَّآ اَنْ تَاْتِيَهُمُ الْمَلٰٓىِٕكَةُ
اَوْ يَاْتِىَ رَبُّكَ اَوْ يَاْتِىَ بَعْضُ اٰيٰتِ رَبِّكَ ؕ
يَوْمَ يَاْتِىْ بَعْضُ اٰيٰتِ رَبِّكَ لَا يَنْفَعُ
نَفْسًا اِيْمَانُهَا لَمْ تَكُنْ اٰمَنَتْ مِنْ قَبْلُ
اَوْ كَسَبَتْ فِىْٓ اِيْمَانِهَا خَيْرًا ؕ قُلِ انْتَظِرُوْٓا
اِنَّا مُنْتَظِرُوْنَ ۝١٥٨

45. ಅರ್ಥಾತ್- ಜನರು ತಮ್ಮನ್ನು ಯಾವುದೇ ಜವಾಬ್ದಾರಿಕೆ ಇಲ್ಲದವರೆಂದು ಭಾವಿಸುವುದನ್ನು ಬಿಟ್ಟುಬಿಡಬೇಕು. ತಮ್ಮ ಪ್ರಭುವಿನ ಮುಂದೆ ಹಾಜರಾಗಿ ತಮ್ಮೆಲ್ಲ ಕೆಲಸಗಳಿಗೂ ಒಂದು ದಿನ ಉತ್ತರ ಹೇಳಬೇಕಾಗಿದೆ ಎಂದು ಭಾವಿಸಬೇಕು.

46. ಅರ್ಥಾತ್ ನಿರ್ಣಾಯಕ ದಿನದ ಲಕ್ಷಣಗಳು, ಯಾತನೆ ಅಥವಾ ವಾಸ್ತವಿಕತೆಯನ್ನು ಸಂಪೂರ್ಣವಾಗಿ ಅನಾವರಣಗೊಳಿಸುವಂತಹ ಮತ್ತು ಅದು ಪ್ರಕಟಗೊಂಡ ಬಳಿಕ ಪರೀಕ್ಷೆಯ ಪ್ರಶ್ನೆಯೇ ಉಳಿಯದಂತಹ ಯಾವುದಾದರೂ ಸಂಕೇತ.

159. ತಮ್ಮ ಧರ್ಮವನ್ನು ಛಿನ್ನ ವಿಚ್ಛಿನ್ನಗೊಳಿಸಿ ಗುಂಪು ಗುಂಪುಗಳಾಗಿ ಬಿಟ್ಟವರ ಜೊತೆ ನಿಶ್ಚಯವಾಗಿಯೂ ನಿಮಗೆ ಯಾವ ಸಂಬಂಧವೂ ಇಲ್ಲ. ಅವರ ಪ್ರಕರಣ ಅಲ್ಲಾಹನ ಬಳಿ ಇದೆ. ಅವರು ಏನು ಮಾಡಿರುತ್ತಾರೆಂಬುದನ್ನು ಅವನೇ ಅವರಿಗೆ ತೋರಿಸುವನು.

إِنَّ الَّذِينَ فَرَّقُوا دِينَهُمْ وَكَانُوا شِيَعًا
لَّسْتَ مِنْهُمْ فِي شَيْءٍ ۚ إِنَّمَا أَمْرُهُمْ إِلَى
اللَّهِ ثُمَّ يُنَبِّئُهُم بِمَا كَانُوا يَفْعَلُونَ ﴿١٥٩﴾

160. ಅಲ್ಲಾಹನ ಬಳಿಗೆ ಪುಣ್ಯ ತೆಗೆದುಕೊಂಡು ಬಂದವನಿಗೆ ಹತ್ತು ಪಟ್ಟು ಪುಣ್ಯಫಲವಿದೆ. ಪಾಪ ತೆಗೆದುಕೊಂಡು ಬಂದವನಿಗೆ ಅವನು ಮಾಡಿದ ಅಪರಾಧದಷ್ಟೇ ಪ್ರತಿಫಲ ಕೊಡಲಾಗುವುದು ಮತ್ತು ಯಾರ ಮೇಲೂ ಅನ್ಯಾಯವಾಗದು.

مَن جَاءَ بِالْحَسَنَةِ فَلَهُ عَشْرُ أَمْثَالِهَا ۖ وَ
مَن جَاءَ بِالسَّيِّئَةِ فَلَا يُجْزَىٰ إِلَّا مِثْلَهَا
وَهُمْ لَا يُظْلَمُونَ ﴿١٦٠﴾

161. ಓ ಪೈಗಂಬರರೇ, (ಹೀಗೆ) ಹೇಳಿರಿ: "ನನ್ನ ಪ್ರಭು ನನಗೆ ನೇರ ಮಾರ್ಗವನ್ನು ತೋರಿಸಿದ್ದಾನೆ. ಯಾವುದೇ ವಕ್ರತೆಯಿಲ್ಲದ ಅತ್ಯಂತ ಸರಿಯಾದ ಧರ್ಮ, ಇಬ್‌ರಾಹೀಮರು ಏಕನಿಷ್ಠೆಯಿಂದ ಕೈಗೊಂಡ ಮಾರ್ಗ- ಅವರು 'ಬಹುದೇವವಿಶ್ವಾಸಿ'ಗಳಲ್ಲಾಗಿರಲಿಲ್ಲ."

قُلْ إِنَّنِي هَدَانِي رَبِّي إِلَىٰ صِرَاطٍ
مُّسْتَقِيمٍ دِينًا قِيَمًا مِّلَّةَ إِبْرَاهِيمَ
حَنِيفًا ۚ وَمَا كَانَ مِنَ الْمُشْرِكِينَ ﴿١٦١﴾

162-163. ಹೇಳಿರಿ- ನನ್ನ ನಮಾಝ್, ನನ್ನ ಸರ್ವ ಉಪಾಸನಾವಿಧಿಗಳು,[47] ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಯಾವ ಸಹಭಾಗಿಯೂ ಇಲ್ಲದ ಸರ್ವಲೋಕಪಾಲಕನಿಗಾಗಿದೆ- ಇದನ್ನೇ ನನಗೆ ಆದೇಶಿಸಲಾಗಿದೆ. ನಾನು ಆಜ್ಞಾನುಸರಣೆಯೊಂದಿಗೆ ಶಿರಬಾಗುವವರಲ್ಲಿ ಸರ್ವಪ್ರಥಮನಾಗಿರುತ್ತೇನೆ.

قُلْ إِنَّ صَلَاتِي وَنُسُكِي وَمَحْيَايَ وَ
مَمَاتِي لِلَّهِ رَبِّ الْعَالَمِينَ ﴿١٦٢﴾
لَا شَرِيكَ لَهُ ۖ وَبِذَٰلِكَ أُمِرْتُ وَأَنَا
أَوَّلُ الْمُسْلِمِينَ ﴿١٦٣﴾

164. ಹೇಳಿರಿ: ಅಲ್ಲಾಹನೇ ಸಕಲ ವಸ್ತುಗಳ ಪ್ರಭುವಾಗಿರುವಾಗ, ನಾನು ಅವನ ಹೊರತು ಇತರ ಪ್ರಭುವನ್ನರಸಬೇಕೇ? ಪ್ರತಿಯೊಬ್ಬನೂ ತಾನು ಸಂಪಾದಿಸುತ್ತಿರುವುದಕ್ಕೆ ಸ್ವತಃ ತಾನೇ ಹೊಣೆಗಾರನಾಗಿರುತ್ತಾನೆ. ಯಾವ ಹೊರೆ ಹೊರುವಾತನೂ ಇನ್ನೊಬ್ಬನ

قُلْ أَغَيْرَ اللَّهِ أَبْغِي رَبًّا وَهُوَ رَبُّ كُلِّ
شَيْءٍ ۚ وَلَا تَكْسِبُ كُلُّ نَفْسٍ إِلَّا عَلَيْهَا ۚ
وَلَا تَزِرُ وَازِرَةٌ وِزْرَ أُخْرَىٰ ۚ ثُمَّ إِلَىٰ

47. ಮೂಲದಲ್ಲಿ 'ನುಸುಕ್' ಎಂಬ ಪದವನ್ನು ಬಳಸಲಾಗಿದೆ. ಅದಕ್ಕೆ ತ್ಯಾಗವೆಂದೂ ಅರ್ಥವಿದೆ. ದಾಸ್ಯ ಮತ್ತು ಉಪಾಸನೆಯ ಇತರೆಲ್ಲ ವಿಧಿಗಳಿಗೂ ಈ ಪದ ಸಾಮಾನ್ಯವಾಗಿ ಬಳಕೆಯಾಗುತ್ತದೆ.

رَبِّكُمْ مَّرْجِعُكُمْ فَيُنَبِّئُكُمْ بِمَا كُنْتُمْ
فِيْهِ تَخْتَلِفُوْنَ ﴿١٦٤﴾

ಹೊರೆಯನ್ನು ಹೊರುವುದಿಲ್ಲ.[48] ಆ ಬಳಿಕ ನಿಮಗೆಲ್ಲರಿಗೂ ನಿಮ್ಮ ಪ್ರಭುವಿನ ಕಡೆಗೆ ಮರಳಲಿಕ್ಕಿದೆ. ಆಗ ಅವನು ನಿಮ್ಮ ಭಿನ್ನಾಭಿಪ್ರಾಯಗಳ ವಾಸ್ತವಿಕತೆಯನ್ನು ನಿಮ್ಮ ಮುಂದೆಯೇ ಪ್ರಕಟ ಗೊಳಿಸುವನು.

وَهُوَ الَّذِىْ جَعَلَكُمْ خَلٰٓئِفَ الْاَرْضِ وَرَفَعَ
بَعْضَكُمْ فَوْقَ بَعْضٍ دَرَجٰتٍ لِّيَبْلُوَكُمْ
فِىْ مَآ اٰتٰىكُمْ ۗ اِنَّ رَبَّكَ سَرِيْعُ الْعِقَابِ ۖ
وَاِنَّهٗ لَغَفُوْرٌ رَّحِيْمٌ ﴿١٦٥﴾ ع

النصف

165. ಅವನೇ ನಿಮ್ಮನ್ನು ಭೂಮಿಯ ಪ್ರತಿನಿಧಿಗಳನ್ನಾಗಿ ಮಾಡಿದನು ಮತ್ತು ನಿಮಗೆ ಕೊಟ್ಟಿರುವುದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ನಿಮ್ಮಲ್ಲಿ ಕೆಲವರಿಗೆ ಕೆಲವರಿಗಿಂತ ಉನ್ನತ ಪದವಿಗಳನ್ನು ನೀಡಿದನು. ನಿಶ್ಚಯವಾಗಿಯೂ ನಿಮ್ಮ ಪ್ರಭು ಶಿಕ್ಷೆ ಕೊಡುವುದರಲ್ಲಿ ಅತಿ ಶೀಘ್ರನು ಮತ್ತು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

---

48. ಅರ್ಥಾತ್- ಪ್ರತಿಯೊಬ್ಬನೂ ತನ್ನ ಕರ್ಮಗಳಿಗೆ ಸ್ವಯಂ ಜವಾಬ್ದಾರನಾಗಿದ್ದಾನೆ. ಒಬ್ಬನ ಕರ್ಮದ ಹೊಣೆ ಮತ್ತೊಬ್ಬನ ಮೇಲೆ ಇರಲು ಸಾಧ್ಯವಿಲ್ಲ.